Editor: NITYANANDASWAMI Publisher: U. BASAVARAJA RNI No. KARKAN/2006/17926

ಜನಶಕ್ತಿ ಕನ್ನಡ ವಾರ ಪತ್ರಿಕೆ

ದುಡಿಯುವ ಜನರ ಪ್ರಾಣಮಿತ್ರ

JANASHAKTHI KANNADA VARA PATRIKE

ಸಂಪುಟ 16 | ಸಂಚಿಕೆ 37 | ಸೆಪ್ಟೆಂಬರ್ 5–11, 2022 | ಪುಟ 16 | ರೂ.10/-

Volume: 16 Issue: 37 September 5-11, 2022 Pages: 16 Price: 10/-

https://janashakthi.wordpress.com e-mail : js_weekly@yahoo.com



ಮುರುಘಾ ಮಠದಲ್ಲಿ ಲೈಂಗಿಕ ದೌರ್ಜನ್ಯದ ಕಳಂಕದ ಕಿಚ್ಚು



ಉಚಿತ ಕೊಡುಗೆಗಳ ಬಗೆಗಿನ ಬೂಟಾಟಿಕೆ



ಮೋದಿ ಮಂಗಳೂರು ಭೇಟಿ ಜನರ ದುಡ್ಡಿನಲ್ಲಿ ಬಿಜೆಪಿ ಜಾತ್ರೆ

ಗೋರ್ಬಚೇವ, ನಿನ್ನ ಮರೆಯಲಿ ಹ್ಯಂಗ





ಇದು 40 ಪ್ಲಸ್ ಪರ್ಸೆಂಟ್ ಸರಕಾರ

ಟ್ವಿಟರ್ ನಲ್ಲಿ ಸರಕಾರೀ ಏಜೆಂಟರ ನೇಮಕಕ್ಕೆ ಬಲವಂತ?– ನಿಜಸಂಗತಿ ತಿಳಿಯಲು ನ್ಯಾಯಾಂಗ ತನಿಖೆ ನಡೆಸಬೇಕು: ಪ್ರಧಾನಿಗಳಿಗೆ ಸಿಪಿಐ(ಎಂ) ಸಂಸದರ ಪತ್ರ

ಜಗತ್ತಿನ ದೈತ್ಯ ಸಾಮಾಜಿಕ ಮಾಧ್ಯಮ ತಾಣ ಟ್ವಿಟರ್ ಭಾರತ ಸರಕಾರದ ಒಬ್ಬ ಏಜೆಂಟರನ್ನು ತಮ್ಮ ಸಂಸ್ಥೆಯಲ್ಲಿ ನೇಮಕ ಮಾಡಿಕೊಳ್ಳಬೇಕು ಎಂದು ಸರಕಾರ ಬಲವಂತ ಮಾಡಿದೆ ಎಂದು ಅಲ್ಲಿ ಭದ್ರತೆಯ ಮುಖ್ಯಸ್ಥರಾಗಿದ್ದ ಪೈಟರ್ ಝಟ್ಕೊ ಪ್ರಕಟಪಡಿಸಿದ್ದಾರೆ ಎಂಬ ವರದಿಗಳಿವೆ. ಈ ಗಂಭೀರ ಆರೋಪದ ಬಗ್ಗೆ ತುರ್ತಾಗಿ ಒಂದು ಬಹಿರಂಗ ನ್ಯಾಯಾಂಗ ತನಿಖೆ ನಡೆಸಿ ನಿಜ ಸಂಗತಿಗಳನ್ನು ಪ್ರಕಟಪಡಿಸಬೇಕು ಎಂದು ಆಗ್ರಹಿಸಿ ಸಿಪಿಐ(ಎಂ) ರಾಜ್ಯ ಸಭಾ ಸದಸ್ಯ ಡಾ.ವಿ.ಶಿವದಾಸನ್ ಪ್ರಧಾನ ಮಂತ್ರಿಗಳಿಗೆ ಪತ್ರ ಬರೆದಿದ್ದಾರೆ.

ಟ್ವಿಟರ್ ನೇಮಿಸಿಕೊಳ್ಳಲೇ ಬೇಕಾಗಿ ಬಂದ ಈ ನೌಕರರಿಗೆ ಭಾರತದಲ್ಲಿ "ಒಂದು ತೀವ್ರ ಪ್ರತಿಭಟನೆಯ ಸಂದರ್ಭದಲ್ಲಿ" ಸೂಕ್ಷ್ಮ ಬಳಕೆ ದತ್ತಾಂಶಗಳನ್ನು ಲಭ್ಯಗೊಳಿಸಬೇಕಾಗಿ ಬಂದಿತ್ತು ಎಂದು ಝಟ್ಕೊ ಹೇಳಿದ್ದಾರೆ. ಇದು 2021ರ ರೈತರ ದಿಲ್ಲಿ ಹೋರಾಟದ ಸಮಯ ಎಂದು ವರದಿಗಳು ಹೇಳುತ್ತವೆ.

ವರದಿಗಳ ಪ್ರಕಾರ ಝಟ್ಕೊರವರು ಅಮೆರಿಕ ಸಂಯುಕ್ತ ಸಂಸ್ಥಾನಗಳ ನ್ಯಾಯ ಇಲಾಖೆಯ ಸೆಕ್ಯುರಿಟೀಸ್ ಅಂಡ್ ಎಕ್ಸ್ ಚೇಂಜ್ ಕಮಿಷನ್(ಎಸ್‌ಇಸಿ) ಮತ್ತು ಫಡರಲ್ ಟ್ರೇಡ್ ಕಮಿಷನ್(ಎಫ್‌ಟಿಸಿ)ಗೆ ಈ ಕುರಿತು ದೂರು ನೀಡಿದ್ದು ನ್ಯಾಯ ಇಲಾಖೆಯ ರಾಷ್ಟ್ರೀಯ ಭದ್ರತಾ ವಿಭಾಗಕ್ಕೆ ಈ ಕುರಿತ ಮಾಹಿತಿಗಳನ್ನು ನೀಡಿದ್ದಾರೆ.

ಈ ವಿಷಯಗಳನ್ನು ಆಗಸ್ಟ್ 29 ರಂದು ಬರೆದ ಪತ್ರದಲ್ಲಿ ಪ್ರಧಾನ ಮಂತ್ರಿಗಳ ಗಮನಕ್ಕೆ ತರುತ್ತ ಇದೊಂದು ಗಂಭೀರ ಆತಂಕದ ವಿಷಯ, ಈ ಬಗ್ಗೆ ಒಂದು ಗಂಭೀರ ತನಿಖೆಯನ್ನು ಆರಂಭಿಸುವ ಅಗತ್ಯವಿದೆ ಎಂದು ಡಾ.ಶಿವದಾಸನ್ ಹೇಳಿದ್ದಾರೆ. ಈ ವರದಿಗಳು ನಿಜವಾಗಿದ್ದರೆ, ಇದು ಭಾರತದ ಸಂವಿಧಾನ ಎತ್ತಿ ಹಿಡಿದಿರುವ ಎಲ್ಲ ಮೂಲ ನೀತಿಗಳು ಮತ್ತು ಹಕ್ಕುಗಳ ಉಲ್ಲಂಘನೆಯಾಗುತ್ತದೆ. ಜೀವನದ ಹಕ್ಕಿನ ಮುಖ್ಯ ಅಂಶವಾದ ಖಾಸಗಿತ್ವದ ಹಕ್ಕು, ಸಭೆ ಸೇರುವ ಹಕ್ಕು ಮತ್ತು ಶಾಂತಿಯುತವಾಗಿ ಪ್ರತಿಭಟಿಸುವ ಹಕ್ಕು ಮುಂತಾದವುಗಳನ್ನು ಇದು ಉಲ್ಲಂಘಿಸುತ್ತದೆಯಾದ್ದರಿಂದ ಈ ಆರೋಪಗಳ ಕುರಿತು ಒಂದು ಬಹಿರಂಗ ನ್ಯಾಯಾಂಗ ತನಿಖೆ ನಡೆಸುವ ತುರ್ತು ಅಗತ್ಯವಿದೆ, ಈ ಮೂಲಕ ನಿಜಸಂಗತಿಗಳು ಬೆಳಕಿಗೆ ಬರುವಂತಾಗಬೇಕು ಹಾಗೂ ಅಪರಾಧಿಗಳನ್ನು ಪತ್ತೆ ಹಚ್ಚಿ ಶಿಕ್ಷಿಸಬೇಕು. ಈ ಕಡೆಗೆ ಪ್ರಧಾನ ಮಂತ್ರಿಗಳು ತಕ್ಷಣ ಗಮನ ಹರಿಸಬೇಕು ಮತ್ತು ತುರ್ತು ಕ್ರಮಗಳನ್ನು ಕೈಗೊಳ್ಳಬೇಕು ಎಂದು ಡಾ.ಶಿವದಾಸನ್ ತಮ್ಮ ಪತ್ರದಲ್ಲಿ ಆಗ್ರಹಿಸಿದ್ದಾರೆ.

ಪೆಗಸಸ್ ಪ್ರಕರಣ: ಕೇಂದ್ರ ಸರಕಾರ ಸುಪ್ರಿಂ ಕೋರ್ಟ್ ತನಿಖಾ ಸಮಿತಿಯೊಂದಿಗೆ ಸಹಕರಿಸಿಲ್ಲ ಎಂಬುದು ಅತ್ಯಂತ ಖಂಡನಾರ್ಹ

ಕಾರ್ಯಾಂಗದ ಜವಾಬುದಾರಿಕೆಯನ್ನು ನ್ಯಾಯಾಂಗವು ಖಚಿತಪಡಿಸಬೇಕಾಗಿದೆ–ಸಿಪಿಐ(ಎಂ) ಪೊಲಿಟ್‌ಬ್ಯುರೊ

ಬೇಹುಗಾರಿಕಾ ತಂತ್ರಾಂಶ ಪೆಗಸಸ್ ಬಳಕೆಯ ಬಗ್ಗೆ ತನಿಖೆ ನಡೆಸಲು ದೇಶದ ಸರ್ವೋಚ್ಚ ನ್ಯಾಯಾಲಯ ನೇಮಿಸಿದ ಸಮಿತಿಯೊಂದಿಗೆ ಕೇಂದ್ರ ಸರಕಾರ ಸಹಕರಿಸಿಲ್ಲ ಎಂದು ಸಮಿತಿಯ ವರದಿ ಹೇಳಿರುವುದಾಗಿ ಸ್ವತಃ ದೇಶದ ಮುಖ್ಯ ನ್ಯಾಯಾಧೀಶರು ಹೇಳಿದ್ದಾರೆ.. "ನೀವು ಇಲ್ಲಿ ಯಾವ ನಿಲುವನ್ನು ತಳೆದಿರೋ ಅಲ್ಲಿಯೂ ಅದೇ ನಿಲುವು ತಳೆದಿದ್ದೀರಿ "ಎಂದು ಅವರು ಹೇಳಿರುವುದಾಗಿ ವರದಿಯಾಗಿದೆ.

ಕೇಂದ್ರ ಸರ್ಕಾರ ಈ ರೀತಿ ನಮ್ಮದೇ ನಾಗರಿಕರ ವಿರುದ್ಧ ಮಿಲಿಟರಿ ದರ್ಜೆಯ ಬೇಹುಗಾರಿಕೆ ತಂತ್ರಾಂಶ ಬಳಕೆಯ ಬಗ್ಗೆ ನ್ಯಾಯಾಂಗದ ಮುಂದೆ ಮತ್ತು ದೇಶಕ್ಕೆ ಜವಾಬುದಾರಿಯಾಗಲು ನಿರಾಕರಿಸಿರುವುದು ಅತ್ಯಂತ ಖಂಡನಾರ್ಹ ಎಂದು ಸಿಪಿಐ(ಎಂ) ಪೊಲಿಟ್ ಬ್ಯೂರೋ ಹೇಳಿದೆ. ಈ ಬೇಹುಗಾರಿಕೆ ತಂತ್ರಾಂಶದ ಬಳಕೆಯ ಬಗ್ಗೆ ತನಿಖೆ ನಡೆಸಲು ಸುಪ್ರೀಂ ಕೋರ್ಟ್ ನೇಮಿಸಿದ ಸಮಿತಿಯು ಸರ್ಕಾರವು "ಸಹಕಾರಿಯಾಗಿರಲಿಲ್ಲ" ಎಂಬುದು ಸ್ವೀಕಾರಾರ್ಹವಲ್ಲ ಎಂದು ಅದು ಹೇಳಿದೆ.

"ರಾಷ್ಟ್ರೀಯ ಭದ್ರತೆ" ಯನ್ನು ಉಲ್ಲೇಖಿಸಿ ನಾಗರಿಕರ ಮೂಲಭೂತ ಹಕ್ಕುಗಳು, ವಿಶೇಷವಾಗಿ ಖಾಸಗಿತ್ವದ ಹಕ್ಕನ್ನು ವಿವೇಚನಾರಹಿತ ರೀತಿಯಲ್ಲಿ ಉಲ್ಲಂಘಿಸಲಾಗದು ಎಂದು ಸುಪ್ರೀಂ ಕೋರ್ಟ್ ಈ ಮೊದಲೇ ವಿಚಾರಣೆಯ ವೇಳೆಯಲ್ಲಿ ಟಿಪ್ಪಣಿ ಮಾಡಿತ್ತು ಎಂಬುದನ್ನು ನೆನಪಿಸಿರುವ ಪೊಲಿಟ್ ಬ್ಯುರೊ ಸರ್ಕಾರವು ತನ್ನ ಇಂತಹ ಅಸಹಕಾರದ ಮೂಲಕ ಉನ್ನತ ಸಾಂವಿಧಾನಿಕ ಹುದ್ದೆಯನ್ನು ಹೊಂದಿರುವವರು, ವಿರೋಧ ಪಕ್ಷದ ನಾಯಕರು, ಪತ್ರಕರ್ತರು ಮುಂತಾದವರ ವಿರುದ್ಧ ಈ ಬೇಹುಗಾರಿಕೆ ತಂತ್ರಾಂಶವನ್ನು ದುರುಪಯೋಗಪಡಿಸಿಕೊಳ್ಳಲಾಗಿದೆ ಎಂಬುದನ್ನು ಒಪ್ಪಿಕೊಂಡಂತಾಗಿದೆ ಎಂಬುದು ಸ್ಪಷ್ಟವಾಗುತ್ತದೆ ಎಂದು ಅಭಿಪ್ರಾಯ ಪಟ್ಟಿದೆ. ಇದು ಪ್ರಜಾಪ್ರಭುತ್ವದ ಗುಣಮಟ್ಟ ಮತ್ತು ನಾಗರಿಕರ ಪ್ರಜಾಸತ್ತಾತ್ಮಕ ಹಕ್ಕುಗಳ ಮೇಲೆ ಹಾನಿಕಾರಕ ಪರಿಣಾಮವನ್ನು ಬೀರುತ್ತದೆ ಎಂದು ಅದು ಹೇಳಿದೆ.

ಪೆಗಾಸಸ್ ಬಳಕೆಯ ಆರೋಪಗಳು ಬಂದಾಗ, ಅನೇಕ ದೇಶಗಳು ಗಂಭೀರ ತನಿಖೆಯನ್ನು ಪ್ರಾರಂಭಿಸಿದವು. ಫ್ರಾನ್ಸ್, ಮೆಕ್ಸಿಕೋ, ಸ್ಪೇನ್ ಮತ್ತು ಇತರರು ಈ ತನಿಖೆಗಳನ್ನು ಗಂಭೀರವಾಗಿ ಅನುಸರಿಸುತ್ತಿದ್ದಾರೆ. ಭಾರತ, ಹಂಗೇರಿ ಮತ್ತು ಸೌದಿ ಅರೇಬಿಯಾದಂತಹ ದೇಶಗಳ ಸರ್ಕಾರಗಳು ಈ ಬೇಹುಗಾರಿಕೆ ತಂತ್ರಾಂಶವನ್ನು ಖರೀದಿಸಿವೆ ಎಂದು ಇಸ್ರೇಲಿ ತನಿಖೆಗಳು ಬಹಿರಂಗಪಡಿಸಿವೆ. ಇದನ್ನು ಗಮನಿಸಿದರೆ, ಕೇಂದ್ರ ಸರ್ಕಾರವು ತನ್ನ ಕೈ ಶುದ್ಧವಾಗಿದೆ ಎಂದು ತೋರಿಸಬೇಕಾಗುತ್ತದೆ ಮತ್ತು ಉತ್ತರದಾಯಿಯಾಗಬೇಕಾಗಿದೆ. ನ್ಯಾಯಾಂಗ ಅಂತಹ ಹೊಣೆಗಾರಿಕೆಯನ್ನು ಖಚಿತಪಡಿಸಬೇಕು ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಹೇಳಿದೆ.

ನಿವೃತ್ತ ಸುಪ್ರೀಂ ಕೋರ್ಟ್ ನ್ಯಾಯಮೂರ್ತಿ ಇಂದು ಮಲ್ಹೋತ್ರಾ ರವರ ತಪ್ಪುದಾರಿಗೆಳೆಯುವ ಹೇಳಿಕೆ –ಕೇರಳ ಸಚಿವರ ಪ್ರತ್ಯುತ್ತರ

ಕಮ್ಯುನಿಸ್ಟ್ ಸರ್ಕಾರಗಳು ಹಿಂದೂ ದೇವಾಲಯಗಳನ್ನು ವಶಪಡಿಸಿಕೊಂಡಿವೆ ಮತ್ತು ಆದಾಯ(ರೆವಿನ್ಯೂ)ಕ್ಕಾಗಿ ಅದನ್ನು ಮಾಡುತ್ತಿವೆ ಎಂಬ ನಿವೃತ್ತ ಸುಪ್ರೀಂ ಕೋರ್ಟ್ ನ್ಯಾಯಮೂರ್ತಿ ಇಂದು ಮಲ್ಹೋತ್ರಾ ಅವರ ಪ್ರತಿಪಾದನೆಯು ಆಧಾರರಹಿತವಾಗಿದೆ ಮತ್ತು ಸಂಪೂರ್ಣ ತಪ್ಪು ತಿಳುವಳಿಕೆಯನ್ನು ಆಧರಿಸಿದೆ ಎಂದು ಕೇರಳ ಎಲ್‌ಡಿಎಫ್ ಸರಕಾರದ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ, ದೇವಸ್ಥಾನಗಳು, ಸಂಸದೀಯ ವ್ಯವಹಾರಗಳ ಸಚಿವರಾಗಿರುವ ಕೆ.ರಾಧಾಕೃಷ್ಣನ್ ಸ್ಪಷ್ಟಪಡಿಸಿದ್ದಾರೆ.

ನ್ಯಾಯಮೂರ್ತಿ ಇಂದು ಮಲ್ಹೋತ್ರಾ ಅವರು ಸುಪ್ರೀಂ ಕೋರ್ಟ್‌ನಲ್ಲಿ ನ್ಯಾಯಾಧೀಶರಾಗಿ ಹೇಗೆ ಕಾರ್ಯನಿರ್ವಹಿಸಿದರು ಎಂಬುದು ಈ ಹೇಳಿಕೆಗಳಿಂದ ಸ್ಪಷ್ಟವಾಗಿದೆ ಎಂದೂ ಕೇರಳದ ಸಚಿವರು ಟಿಪ್ಪಣಿ ಮಾಡಿದ್ದಾರೆ.

ಕಮ್ಯುನಿಸ್ಟ್ ಪಕ್ಷವಾಗಲಿ ಅಥವಾ ಎಲ್‌ಡಿಫ್ ಸರಕಾರವಾಗಲಿ ಯಾವುದೇ ಹಿಂದೂ ದೇವಾಲಯವನ್ನು ವಶಪಡಿಸಿಕೊಂಡಿಲ್ಲ. ಹಿಂದೂ ಧರ್ಮದ ಎಲ್ಲಾ ಪಂಗಡಗಳಿಗೆ ಪೂಜೆ ಮಾಡುವ ಹಕ್ಕನ್ನು ಗಳಿಸಲು ಕಮ್ಯುನಿಸ್ಟ್ ಪಕ್ಷಗಳು ನಡೆಸಿದ ಹೋರಾಟಗಳು ಇತಿಹಾಸದ ಭಾಗವಾಗಿದೆ. ಸಿಪಿಐ(ಎಂ) ನೇತೃತ್ವದ ಎಡಪಂಥೀಯ ಸರ್ಕಾರಗಳು ಎಲ್ಲಾ ಪಂಗಡಗಳ ಆರಾಧನೆ ಮತ್ತು ನಂಬಿಕೆಗಳನ್ನು ರಕ್ಷಿಸಲು ಕ್ರಮಗಳನ್ನು ಕೈಗೊಂಡಿವೆ.

ಎಡ ಸರಕಾರಗಳ ಕಾಲದಲ್ಲೇ ಪರಭಾರೆಯಾಗಿದ್ದ ದೇವಸ್ಥಾನಗಳ ಭೂಮಿಯನ್ನು ಮತ್ತೆ ಸ್ವಾಧೀನಕ್ಕೆ ತಗೊಳ್ಳುವ ಕ್ರಮಕೈಗೊಂಡಿರುವುದು, ದೇವಸ್ಥಾನದ ನೌಕರರಿಗೆ ವ್ಯವಸ್ಥಿತವಾಗಿ ವೇತನ ನೀಡಲು ಆರಂಭಿಸಿದ್ದು ಮತ್ತು ದೇವಸ್ಥಾನದ ಆವರಣಕ್ಕೂ ಪ್ರವೇಶ ನಿರಾಕರಿಸಲಾಗಿದ್ದ ಜನರನ್ನು ದೇವಸ್ಥಾನದ ನೌಕರರನ್ನಾಗಿ ಪರಿವರ್ತಿಸಲು ಕ್ರಮ ಕೈಗೊಂಡಿರುವುದು. ದೇವಸ್ಥಾನದ ಆದಾಯವನ್ನು ಸರಕಾರವೇ ಕಬಳಿಸಬೇಕೆಂಬ ತೀವ್ರಗಾಮಿ ಹಿಂದುತ್ವ ಶಕ್ತಿಗಳ ದೀರ್ಘ ಕಾಲದ ಪ್ರಚಾರ ಈ ನಿವೃತ್ತ ನ್ಯಾಯಾಧೀಶರ ಮೇಲೂ ಪ್ರಭಾವ ಬೀರಿರಬಹುದು. ಯಾವುದೇ ದೇವಸ್ಥಾನದ ಆದಾಯವನ್ನು ಸರ್ಕಾರ ಸ್ವಾಧೀನಪಡಿಸಿಕೊಂಡಿಲ್ಲ. ಇದಕ್ಕೆ ವ್ಯತಿರಿಕ್ತವಾಗಿ, ದೇವಸ್ಥಾನ ಮಂಡಳಿಗಳ ನಿರ್ವಹಣೆಗೆ ಸರಕಾರವೇ ಅಗತ್ಯವಾದ ಹಣಕಾಸಿನ ನೆರವು ನೀಡುತ್ತದೆ ಎಂಬುದು ವಾಸ್ತವ ಸಂಗತಿ ಎಂದು ರಾಧಾಕೃಷ್ಣನ್ ಹೇಳಿದ್ದಾರೆ.

ರಾಜ್ಯ ಸರ್ಕಾರವು 2018 ರಿಂದ 2022 ರವರೆಗಿನ ಐದು ವರ್ಷಗಳಲ್ಲಿ ವಿವಿಧ ದೇವಸ್ಥಾನ ಮಂಡಳಿಗಳಿಗೆ 449 ಕೋಟಿ ರೂ.ಗಳನ್ನು ಮಂಜೂರು ಮಾಡಿದೆ, ಇದನ್ನು ದೇವಸ್ಥಾನ ಮಂಡಳಿಗಳ ಆದಾಯದಲ್ಲಿ ಪ್ರವಾಹ ಮತ್ತು ಕೋವಿಡ್ ದೊಡ್ಡ ಬಿಕ್ಕಟ್ಟು ಸೃಷ್ಟಿಸಿದಾಗ ಸಿಬ್ಬಂದಿ ವೇತನವನ್ನು ಪಾವತಿಸಲು ಮತ್ತು ದಿನನಿತ್ಯದ ಕಾರ್ಯಾಚರಣೆಗಳನ್ನು ನಡೆಸಲು ಬಜೆಟ್ ಹಂಚಿಕೆಯೊಂದಿಗೆ ಮತ್ತು ಅದರ ಹೊರಗೆಯೂ ಒದಗಿಸಿದೆ ಎಂದು ಅವರು ತಿಳಿಸಿದ್ದಾರೆ.

ಎಲ್‌ಡಿಎಫ್ ಸರ್ಕಾರವು ಪ್ರಸ್ತುತ ಶಬರಿಮಲೆ ಮಾಸ್ಟರ್‌ಪ್ಲಾನ್‌ನಂತಹ ಬೃಹತ್ ಅಭಿವೃದ್ಧಿ ಯೋಜನೆಗಳನ್ನು ದಕ್ಷತೆಯಿಂದ ಕಾರ್ಯಗತಗೊಳಿಸಲು ಮತ್ತು ಸುಗಮ ಯಾತ್ರಾ ಸೌಲಭ್ಯಗಳನ್ನು ಒದಗಿಸಲು ಆದ್ಯತೆ ನೀಡುತ್ತಿದೆ. ನಿವೃತ್ತ ನ್ಯಾಯಮೂರ್ತಿ ಇಂದು ಮಲ್ಹೋತ್ರಾ ಅವರು ಜನರನ್ನು ಸಂಪೂರ್ಣವಾಗಿ ದಾರಿ ತಪ್ಪಿಸಬಹುದೇ ಮತ್ತು ಎಲ್‌ಡಿಎಫ್ ಸರ್ಕಾರದ ವಿರುದ್ಧ ತಿರುಗಿಸಬಹುದೇ ಎಂದು ನೋಡುವ ಪ್ರಯತ್ನ ಮಾಡಿದ್ದಾರೆ. ನ್ಯಾಯಮೂರ್ತಿ ಇಂದು ಮಲ್ಹೋತ್ರಾ ಅವರು ಸುಪ್ರೀಂ ಕೋರ್ಟ್‌ನಲ್ಲಿ ನ್ಯಾಯಾಧೀಶರಾಗಿ ಹೇಗೆ ಕಾರ್ಯನಿರ್ವಹಿಸಿದರು ಎಂಬುದು ಈ ಹೇಳಿಕೆಗಳಿಂದ ಸ್ಪಷ್ಟವಾಗಿದೆ ಎಂದೂ ಅವರ ಹೇಳಿಕೆಗಳು ಸ್ಪಷ್ಟಪಡಿಸುತ್ತವೆ ಎಂದೂ ಕೇರಳದ ಸಚಿವರು ಟಿಪ್ಪಣಿ ಮಾಡಿದ್ದಾರೆ.

ನ್ಯಾಯ ಮೂರ್ತಿ ಇಂದು ಮಲ್ಹೋತ್ರ ರವರಿಗೆ ಕೇರಳದ ಸಾರ್ವಜನಿಕ ಹಣಕಾಸಿನ ಬಗ್ಗೆ ಅಜ್ಞಾನವಿದೆ, ಅದಕ್ಕಿಂತಲೂ ಹೆಚ್ಚಾಗಿ ಅವರು ಕಮ್ಯುನಿಸ್ಟರ ಬಗ್ಗೆ ಆಳವಾದ ಪೂರ್ವಾಗ್ರಹವನ್ನು ಹೊಂದಿದ್ದಾರೆ ಎಂದು ಅವರ ಹೇಳಿಕೆಗೆ ಪ್ರತಿಕ್ರಿಯಿಸುತ್ತ ಕೇರಳದ ಹಿಂದಿನ ಎಲ್‌ಡಿಎಫ್ ಸರಕಾರದ ಹಣಕಾಸು ಮಂತ್ರಿ ಡಾ. ಥಾಮಸ್ ಐಸಾಕ್ ಹೇಳಿದ್ದಾರೆ. ದೇವಸ್ಥಾನಗಳ ಆದಾಯದ ಒಂದೇ ಒಂದು ಪೈಸೆಯೂ ಬಜೆಟ್ ಆದಾಯದೊಳಕ್ಕೆ ಬರುವುದಿಲ್ಲ, ಬದಲಿಗೆ ನೂರಾರು ಕೋಟಿ ರೂ.ಗಳನ್ನು ಭಕ್ತಜನಗಳಿಗೆ ಸೌಲಭ್ಯಗಳನ್ನು ಕಲ್ಪಿಸಲು ಮತ್ತು ದೇವಸ್ಥಾನಗಳ ಆಡಳಿತವನ್ನು ಬೆಂಬಲಿಸಲು ಖರ್ಚು ಮಾಡಲಾಗುತ್ತದೆ ಎಂದು ಅವರು ಹೇಳಿದ್ದಾರೆ.

ಕೇರಳದ ಶಬರಿಮಲೆ ದೇವಸ್ಥಾನಕ್ಕೆ 10–50 ವಯೋಗುಂಪಿನ ಹುಡುಗಿಯರು ಮತ್ತು ಮಹಿಳೆಯರು ಪ್ರವೇಶಿಸುವಂತಿಲ್ಲ ಎಂಬ ದೇವಾಲಯದ ನಿಯಮವು ಮಹಿಳಾ ಸಮಾನತೆ ಮತ್ತು ಪೂಜೆಯ ಹಕ್ಕನ್ನು ಉಲ್ಲಂಘಿಸುತ್ತದೆ ಎಂದು ಸೆಪ್ಟಂಬರ್ 2018ರಲ್ಲಿ ಆಗಿನ ಮುಖ್ಯ ನ್ಯಾಯಮೂರ್ತಿ ದೀಪಕ್ ಮಿಶ್ರಾ ನೇತೃತ್ವದ ಸುಪ್ರೀಂ ಕೋರ್ಟ್ ನ ಸಂವಿಧಾನ ಪೀಠವು 4–1 ತೀರ್ಪಿನಲ್ಲಿದನ್ನು ರದ್ದುಗೊಳಿಸಿತು, ಇದಕ್ಕೆ ಏಕೈಕ ಭಿನ್ನಮತದ ಟಿಪ್ಪಣಿ ಬಂದದ್ದು ಈ ನ್ಯಾಯಪೀಠದಲ್ಲಿದ್ದ ಏಕೈಕ ಮಹಿಳಾ ಸದಸ್ಯರಾದ ನ್ಯಾಯಮೂರ್ತಿ ಇಂದು ಮಲ್ಹೋತ್ರಾರವರಿಂದ ಎಂಬುದನ್ನು ಇಲ್ಲಿ ನೆನಪಿಸಿಕೊಳ್ಳಬಹುದು.

ಅಗ್ರಗಣ್ಯ ಕೃಷಿ ಅರ್ಥಶಾಸ್ತ್ರಜ್ಞ ಪ್ರೊ. ಅಭಿಜಿತ್ ಸೇನ್ ನಿಧನ

ರೈತಾಪಿ ವರ್ಗ ತನ್ನ ಮಿತ್ರನನ್ನು ಕಳೆದುಕೊಂಡಿದೆ–ಎಐಕೆಎಸ್ ಶ್ರದ್ಧಾಂಜಲಿ



2004ರಿಂದ 2024ರ ವರೆಗೆ ಯೋಜನಾ ಆಯೋಗದ ಸದಸ್ಯ ಮತ್ತು ಕೃಷಿ ವೆಚ್ಚಗಳು ಮತ್ತು ಬೆಲೆಗಳ ಆಯೋಗ(ಸಿಎಸಿಪಿ)ದ ಮುಖ್ಯಸ್ಥರಾಗಿದ್ದ ಪ್ರೊ.ಅಭಿಜಿತ್ ಸೆನ್ ಆಗಸ್ಟ್ 29 ರಂದು ನಿಧನರಾಗಿದ್ದಾರೆ. ಅವರಿಗೆ 72 ವರ್ಷವಾಗಿತ್ತು.

ಅವರು ಸಾರ್ವತ್ರಿಕ ಸಾರ್ವಜನಿಕ ವಿತರಣಾ ವ್ಯವಸ್ಥೆಯ ಪ್ರಬಲ ಪ್ರತಿಪಾದಕರಾಗಿದ್ದರು. ಧೀಮಂತ ಮನೋಭಾವದವರು, ಸ್ನೇಹಮಯಿ ಮತ್ತು ಜನತೆಯ ಅರ್ಥಶಾಸ್ತ್ರಜ್ಞ, ಭಾರತದ ಅತ್ಯಂತ ಸಮರ್ಥ ಮತ್ತು ತಿಳುವಳಿಕೆಯುಳ್ಳ ಕೃಷಿ ಅರ್ಥಶಾಸ್ತ್ರಜ್ಞ ಎಂದು ಅವರಿಗೆ ಶ್ರದ್ಧಾಂಜಲಿ ಅರ್ಪಿಸಲಾಗಿದೆ. ಅವರು ಅರ್ಥಶಾಸ್ತ್ರಜ್ಞೆ ಪತ್ನಿ ಪ್ರೊ. ಜಯತಿ ಘೋಷ್, ಪತ್ರಕರ್ತೆ ಮಗಳು ಜಾಹ್ನವಿ ಸೇನ್, ಮತ್ತು ಸೋದರ ಹಾಗೂ ಇನ್ನೊಬ್ಬ ಪ್ರಸಿದ್ಧ ಅರ್ಥಶಾಸ್ತ್ರಜ್ಞ ಪ್ರಣಬ್ ಸೇನ್ ಅವರನ್ನು ಅಗಲಿದ್ದಾರೆ.

ಪ್ರೊ. ಅಭಿಜಿತ್ ಸೇನ್ ಗ್ರಾಮೀಣ ಆರ್ಥಿಕತೆಯ ಬಗ್ಗೆ ದೇಶದ ಅಗ್ರಗಣ್ಯ ತಜ್ಞರಲ್ಲಿ ಒಬ್ಬರು. ನಾಲ್ಕು ದಶಕಗಳಿಗೂ ಹೆಚ್ಚು ಕಾಲದ ತನ್ನ ವೃತ್ತಿಜೀವನದಲ್ಲಿ, ಸೇನ್ ಆಕ್ಸ್‌ಫರ್ಡ್, ಕೇಂಬ್ರಿಡ್ಜ್ ಮತ್ತು ನವದೆಹಲಿಯ ಜವಾಹರಲಾಲ್ ನೆಹರು ಪುಟ 14 ಕ್ಕೆ

ಸಂಪಾದಕೀಯ

ಅತ್ಯಾಚಾರಿ ಆರೋಪಿಗಳ ಬೆನ್ನಿಗೆ ನಿಂತಿತೇ ಸರಕಾರ?

ಚಿತ್ರದುರ್ಗದ ಮುರುಘಾ ಮಠದ ಪೀಠಾಧ್ಯಕ್ಷ ಡಾ.ಶಿವಮೂರ್ತಿ ಶರಣರು ಅಪ್ರಾಪ್ತ ಬಾಲಕಿಯರ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ ಆರೋಪದ ಪ್ರಕರಣ ಅತ್ಯಂತ ಗಂಭೀರವಾದುದು. ಮಠದ ಪರಂಪರೆ, ಸ್ವಾಮೀಜಿಯವರ ಸಾಮಾಜಿಕ, ಸಾಂಸ್ಕೃತಿಕ ಕಾರ್ಯಗಳಿಂದ ಜನಮನ ಸೆಳೆದಿದ್ದ ಅಪಾರ ಅಭಿಮಾನಿಗಳು ದಿಗ್ಭ್ರಮೆಗೆ ಒಳಗಾಗಿದ್ದರೆ, ಧಾರ್ಮಿಕತೆಯ ಸೋಗಿನಲ್ಲಿ ನಡೆದಿರುವ ಅನಾಚಾರ, ಅತ್ಯಾಚಾರದ ಘಟನೆ/ ಸುದ್ದಿಗಳಿಂದ ಜನರು ಆಕ್ರೋಶಿತರಾಗಿದ್ದಾರೆ. ಈ ಪ್ರಕರಣದ ಜೊತೆಗೆ ಇನ್ನೂ ಇಂತಹ ಹಲವಾರು ಪ್ರಕರಣಗಳೂ ಸಾರ್ವಜನಿಕವಾಗಿ ಪ್ರಸ್ತಾಪಿತವಾಗುತ್ತಿವೆ. ಅನೈತಿಕ ಸಂಬಂಧಗಳು, ಆಸ್ತಿ– ಹಣದ ದುರ್ವವಹಾರಗಳು, ರಾಜಕೀಯ ಸಂಬಂಧಗಳ ಪ್ರಬಲ ಪ್ರಭಾವ ಇತ್ಯಾದಿ ಅತೀ ಗಂಭೀರ ಆರೋಪಗಳು ಸಾರ್ವಜನಿಕವಾಗಿ ಪೀಠಾಧ್ಯಕ್ಷರು ಪ್ರದರ್ಶಿಸಿದ ಎಲ್ಲಾ ಚಿತ್ರಣ, ನಂಬಿಕೆಗಳನ್ನು ನುಚ್ಚು ನೂರಾಗಿಸಿದೆ. ಆರೋಪ ಮತ್ತು ಪ್ರಕರಣ ಬಳಸುವ ಹಿಂದೆ ಯಾರೇ ಇರಬಹುದಾದರೂ ಆ ಕಾರಣದಿಂದಲೇ ನಡೆದ ಪ್ರಕರಣಗಳನ್ನು ತಳ್ಳಿ ಹಾಕುವುದು ಅಸಾಧ್ಯ. ಲೈಂಗಿಕ ದುರ್ಬಳಕೆಯ ಆರೋಪ ಮಾಡಿದ ಮಕ್ಕಳು ಅನುಭವಿಸಿದ ಹಿಂಸೆ, ಭಯ, ಮಾನಸಿಕ, ದೈಹಿಕ ಅಘಾತಗಳನ್ನು ದೌರ್ಜನ್ಯದ ವಾಸ್ತವತೆಗಳನ್ನು ಯಾವ ನೆಪ ಅಥವಾ ಕಾರಣಗಳಿಂದಲೂ ತಿರಸ್ಕರಿಸಲಾಗದು. ಹೀಗಾಗಿ ದೂರು ನೀಡಲಾದ ಪ್ರಕರಣವನ್ನೂ ಒಳಗೊಂಡು ಎಲ್ಲಾ ಪ್ರಕರಣಗಳನ್ನೂ ಆಳವಾದ ತನಿಖೆಗೆ ಒಳಪಡಿಸಬೇಕು.

ಅದರಲ್ಲೂ ಈ ಪ್ರಕರಣವನ್ನು ಮುಚ್ಚಿ ಹಾಕಲು ಪ್ರಬಲ ಶಕ್ತಿಗಳು ಟೊಂಕ ಕಟ್ಟಿ ದುರಾಕ್ರಮಣಕಾರಿಯಾಗಿ ನಿಂತಿರುವಾಗ ನ್ಯಾಯಾಂಗದ ಮುಂದೆ, ನ್ಯಾಯಮೂರ್ತಿಗಳ ನೇತೃತ್ವದಲ್ಲಿ ತನಿಖೆ ನಡೆದು ಕಠಿಣ ಶಿಕ್ಷೆ ವಿಧಿಸುವಂತಾಗ ಬೇಕು. ದೌರ್ಜನ್ಯಕ್ಕೆ ಈಡಾದವರಿಗೆ, ಈ ಸಂಸ್ಥೆಗೆ ಬೆನ್ನೆಲುಬಾಗಿ ನಿಂತ ಜನ ಸಮುದಾಯಗಳಿಗೆ ನ್ಯಾಯ, ಸಾಂತ್ವನ ಸಿಗುವಂತಾಗಬೇಕು.

ಅತ್ಯಂತ ದುರಾದೃಷ್ಟಕರ ಹಾಗೂ ಆತಂಕಕಾರಿ ಸಂಗತಿ ಎಂದರೆ ದೂರು ಪಡೆಯುವಲ್ಲಿ ಮತ್ತು ದೂರು ದಾಖಲಾದ ಬಳಿಕ ಕ್ಷಿಪ್ರವಾಗಿ ಕಾನೂನು ಕ್ರಮ ಕೈಗೊಂಡು ಆರೋಪಿಗಳ ಮೇಲೆ ಕಠಿಣ ಕ್ರಮವನ್ನು ಜರುಗಿಸುವಲ್ಲಿ ಸರಕಾರದ ಆಡಳಿತ, ಸಂಬಂಧಿಸಿದ ಎಲ್ಲಾ ಇಲಾಖೆಗಳು ಸಂಪೂರ್ಣವಾಗಿ ವಿಫಲವಾಗಿವೆ. ಒಂದರ್ಥದಲ್ಲಿ ಇಡೀ ಸರಕಾರದ ಆಡಳಿತ ಯಂತ್ರ ನಿಷ್ಕ್ರೀಯವಾಗಿ ನೋಡುತ್ತಾ ಕುಳಿತಿತ್ತು. ಪೋಕ್ಸೋ ದಂತಹ ಅತ್ಯಂತ ಕಠಿಣ ಕಾನೂನಿನ ಅನ್ವಯ ದೂರು ದಾಖಲಾದರೂ ಶಿವಮೂರ್ತಿ ಶರಣರನ್ನಾಗಲೀ ಮತ್ತು ಇವಕ್ಕೆಲ್ಲಾ ಸಕ್ರಿಯವಾಗಿ ಸಹಕರಿಸಿದ ಇತರೆ ಐದು ಜನ ಆರೋಪಿಗಳನ್ನು ತಕ್ಷಣದಲ್ಲಿ ಬಂಧಿಸಿ ಸಮಗ್ರವಾದ ತನಿಕೆಯನ್ನು ಕೈಗೊಳ್ಳುವಲ್ಲಿ ಅತ್ಯಂತ ವಿಳಂಬವನ್ನು ಮಾಡಲಾಗಿದೆ. ಅಂದರೆ ಆರು ದಿನಗಳ ಕಾಲ ಆರೋಪಿಗಳು ಮುಕ್ತವಾಗಿ ಅವರಿಚ್ಛೆಯಂತೆ ವ್ಯವಹರಿಸಲು ಅವಕಾಶವನ್ನು ಮಾಡಿಕೊಟ್ಟಿರುವುದರಿಂದ ಅತ್ಯಂತ ಪ್ರಬಲವಾಗಿರುವ ಈ ಆರೋಪಿಗಳು ಎಲ್ಲಾ ಸಾಕ್ಷಿಗಳನ್ನು ನಾಶಪಡಿಸಿರುವ ಎಲ್ಲ ಸಾಧ್ಯತೆಗಳು ಕಂಡು ಬಂದಿವೆ. ಪೋಕ್ಸೋದಂತಹ ಕಠಿಣ ಕಾನೂನು ಮತ್ತು ಅದು ಈ ಹಿಂದೆ ಜಾರಿಯಾದ ರೀತಿಯನ್ನು ಗಮನಿಸಿರುವ ಪ್ರತಿಯೊಬ್ಬರು ಕಾನೂನು ಜಾರಿಯ ಇಲಾಖೆಗಳು ನಿಷ್ಕ್ರಿಯವಾಗಿರುವ ಕುರಿತಾದಂತೆ ಪ್ರಶ್ನಿಸಿದ್ದಾರೆ. ರಾಜ್ಯದಲ್ಲಿ ಅಧಿಕಾರದಲ್ಲಿರುವ ಆಡಳಿತ ಪಕ್ಷವಾದ ಬಿಜೆಪಿಯ ಅತ್ಯಂತ ಪ್ರಮುಖ ನಾಯಕರುಗಳು ಸಚಿವರು ಪ್ರಕರಣ ಹೊರಬಂದ ಕೂಡಲೇ ಆರೋಪಿಗಳ ರಕ್ಷಣೆಗೆ ನಿಂತದ್ದು ಅತ್ಯಂತ ನಾಚಿಕೆಗೇಡಿನ ಖಂಡನಿಯ ಕೃತ್ಯವಾಗಿದೆ. ಈ ಮೂಲಕ ಕ್ರಮ ಕೈಗೊಳ್ಳಬೇಕಾದ ಅಧಿಕಾರಿಗಳ ಕೈಗಳನ್ನು ಕಟ್ಟಿಹಾಕಿ ಮುಕ್ತವಾಗಿ ಕೆಲಸ ಮಾಡದಂತೆ ಸಂದರ್ಭ ಸೃಷ್ಟಿಸಲಾಗಿದೆ. ವಿಳಂಬದಿಂದಾಗಿ ಆರೋಪಿಗಳು ಸಾಕ್ಷಿ ನಾಶವನ್ನೂ ಒಳಗೊಂಡು, ಕಾನೂನು ಸಮಾಲೋಚನೆ ಮಾಡುತ್ತಾ ಮನಬಂದಂತೆ ವ್ಯವಹರಿಸಲು ಅವಕಾಶವನ್ನು ಮಾಡಿಕೊಟ್ಟಿದೆ. ಮಾತ್ರವಲ್ಲ ಪ್ರಕರಣ ದೂರು ದಾಖಲಾದ ನಂತರ 'ಸಂದಾನಕ್ಕೂ, ಸಮರಕ್ಕೂ ಸಿದ್ಧ'ವೆಂದು ಹೇಳುವ ಮೂಲಕ ಪ್ರಕರಣವನ್ನು ಮುಚ್ಚಿ ಹಾಕಲು ಸರ್ವ ರೀತಿಯಲ್ಲೂ ಸಿದ್ಧವಿರುವುದಾಗಿ ಸ್ವತಃ ಆರೋಪಿ ಬಹಿರಂಗವಾಗಿ ಸಾರಿರುವಾಗ ಅಪಾಯ ಅರಿತು ತಕ್ಷಣವೇ ಕಾರ್ಯಪ್ರವೃತ್ತರಾಗದೇ ಮೌನ ಪ್ರೇಕ್ಷಕರಂತೆ ಪೋಲೀಸ್ ಇಲಾಖೆ ಉಳಿದದ್ದು ಕಾನೂನು ಬದ್ಧ ಆಡಳಿತ ಶಿಥಿಲಗೊಂಡಿರುವುದನ್ನು ಎತ್ತಿ ತೋರಿಸುತ್ತದೆ. ನ್ಯಾಯಾಂಗ ಬಂಧನಕ್ಕೆ ಒಳಗಾದ ನಂತರ ನ್ಯಾಯಾಂಗದ ಕಣ್ಣು ತಪ್ಪಿಸಿ ಅನಾರೋಗ್ಯದ ನೆಪವೊಡ್ಡಿ ಆರೋಪಿಯನ್ನು ಸುರಕ್ಷಿತವಾಗಿ ಪಾರು ಮಾಡಲು ಜಿಲ್ಲಾಡಳಿತ ಮುಂದಾಗಿರುವುದನ್ನು ಗಮನಿಸಿದರೆ ಸಂವಿಧಾನಬದ್ಧ ಕಾನೂನಾತ್ಮಕ ಆಡಳಿತ ವ್ಯವಸ್ಥೆಯನ್ನೇ ಗಾಳಿಗೆ ದೂರಿದಂತಾಗಿದೆ. ಇಂತಹ ಧೈರ್ಯ ಕೇವಲ ಅಧಿಕಾರಿಗಳ ಹುಂಬತನ ಎನ್ನುವುದನ್ನು ಒಪ್ಪಲಾಗದು. ಸರಕಾರದ ಕೃಪೆಯಿಲ್ಲದೇ ಇದು ಅಸಾಧ್ಯ. ಈ ಬಗ್ಗೆ ನ್ಯಾಯಾಧೀಶರು ಬಹಿರಂಗ ಎಚ್ಚರಿಕೆ ನೀಡಿರುವುದು ಸರಕಾರಕ್ಕೆ ಛೀಮಾರಿ ಹಾಕಿದಂತಾಗಿದೆ. ಬಿಜೆಪಿ ಆಡಳಿತದಲ್ಲಿ ಕಾನೂನು ವಿ.ಐ.ಪಿ. ಗಳಿಗೆ ಒಂದು ಬಗೆಯಲ್ಲಿ ಜನಸಾಮಾನ್ಯರಿಗೆ ಇನ್ನೊಂದು ಬಗೆಯಲ್ಲಿ ಇದೆ ಎನ್ನುವುದು ಮತ್ತೊಮ್ಮೆ ಬಯಲಾಗಿದೆ.

ಈ ಪ್ರಶ್ನೆಯನ್ನು ಗುರುಗಳ ಮೇಲಿನ ಭಕ್ತಿಯ ಪ್ರಶ್ನೆಯನ್ನಾಗಿ, ಜಾತಿಯ ಘನತೆಯ ಪ್ರಶ್ನೆಯನ್ನಾಗಿ ನೋಡುವುದೇ ಅಮಾನವೀಯ, ಅಮಾನುಷ ಹಾಗೂ ಸ್ಥಾಪಿತ ಹಿತಾಸಕ್ತಿಯಿಂದ ಕೂಡಿದೆ. ದೀರ್ಘ ಪರಂಪರೆಯ ಇತಿಹಾಸ ಇರುವ ಮಠದ ಪೀಠದ ಮೇಲೆ ಕುಳಿತು, ಸನ್ಯಾಸತ್ವದ ದೀಕ್ಷೆ ಪಡೆದ ವ್ಯಕ್ತಿ ಇಂತಹ ಕೃತ್ಯಗಳನ್ನು ಎಸಗುವ ಮೂಲಕ ಪೀಠಕ್ಕೆ, ಭಕ್ತ ಜನ ಸಮುದಾಯಕ್ಕೆ ದ್ರೋಹ ಎಸಗಿದಂತಾಗುತ್ತದೆ. ಇಂತಹ ಗುರುತರ ಆರೋಪ ಕೇಳಿ ಬಂದ ಕೂಡಲೇ ಸ್ವಾಮಿಯವರು ಪೀಠ ತ್ಯಾಗವನ್ನು ಮಾಡಿ ತನ್ನನ್ನು ಸಂಪೂರ್ಣವಾಗಿ ಕಾನೂನು ವಶಕ್ಕೆ ಒಪ್ಪಿಸಿಕೊಳ್ಳಬೇಕಾಗಿತ್ತು. ದೋಷ ಮುಕ್ತರಾದ ಬಳಿಕ ಮತ್ತೆ ಜವಾಬ್ದಾರಿಯನ್ನು ವಹಿಸಿಕೊಳ್ಳಬಹುದಿತ್ತು. ಆದರೆ ಅಂತಹ ಉನ್ನತ ಮೌಲ್ಯಗಳನ್ನು ಪಾಲಿಸದೆ, ಆರೋಪಗಳ ಸೂಕ್ಷ್ಮತೆ, ಗಂಭೀರತೆಯನ್ನು ಪರಿಗಣಿಸದೆ ಮುಂದುವರಿದದ್ದು ಭಂಡತನದ ಪರಮಾವಧಿಯಾಗಿದೆ.

ಇದರಲ್ಲಿ ಆಡಳಿತಾರೂಢ ಬಿಜೆಪಿ ಸರ್ಕಾರ ಅದರ ಪ್ರಮುಖ ನಾಯಕರಾದ ಬಿ.ಎಸ್. ಯಡಿಯೂರಪ್ಪ ಮತ್ತು ಇತರೆ ನಾಯಕರು ಬಹಿರಂಗವಾಗಿ ಬೆಂಬಲಕ್ಕೆ ನಿಂತಿರುವುದು ಅತ್ಯಂತ ನಾಚಿಕೆಗೇಡಿನ ವರ್ತನೆಯಾಗಿದೆ. ಇತ್ತೀಚಿನ ವರುಷಗಳಲ್ಲಿ ಕೆಲವು ಮಠಗಳು, ಕೆಲ ಆಶ್ರಮಗಳು ಅಲ್ಲಿರುವ ಪೀಠಾಧಿಪತಿಗಳು ಮತ್ತು ಗುರೂಜಿಗಳು ಉಳ್ಳವರ ಸೇವೆಗೆ, ಕಾರ್ಪೊರೇಟ್ ಕಂಪನಿಗಳ ಪ್ರಾಯೋಜಿಕತ್ವಕ್ಕೆ ಹೆಚ್ಚು

ಪುಟ 4 ಕ್ಕೆ

ಕಾಂಗ್ರೆಸ್ ಸರ್ಕಾರದ ಅವಧಿಯಲ್ಲಿ ನಡೆದಿರುವ ಹಗರಣಗಳ ತನಿಖೆ ನಡೆಸಲು ಬಿಜೆಪಿ ರಾಜ್ಯ ಘಟಕದ ಪ್ರಮುಖರ ಸಭೆಯಲ್ಲಿ ನಿರ್ಧಾರವಾಗಿದೆಯಂತೆ. ಬಿಜೆಪಿ ಸರ್ಕಾರದಲ್ಲಿ ಯಾವುದೇ ಒಂದು ಕೆಲಸವಾಗಬೇಕಾದರೆ ಲಂಚ ಕೊಡಬೇಕು. ಅದರಲ್ಲೂ ವಿಶೇಷವಾಗಿ ಅಭಿವೃದ್ಧಿ ಕಾಮಗಾರಿ ಮಾಡಿದ ಗುತ್ತಿಗೆದಾರರು ಕನಿಷ್ಠ ಶೇ.40 ರಷ್ಟು ಲಂಚ ನೀಡಬೇಕು. ಇಲ್ಲದೇ ಹೋದರೆ ಯಾವುದೇ ಬಿಲ್ಲುಗಳ ಮೊತ್ತ ಮಂಜೂರಾಗುತ್ತಿಲ್ಲ ಎಂಬ ಪ್ರಬಲ ಆರೋಪ ಮತ್ತೇ ಕೇಳಿ ಬಂದ ಹಿನ್ನೆಲೆಯಲ್ಲಿ ಬಿಜೆಪಿ ಈ ತೀರ್ಮಾನ ಕೈಗೊಂಡಿರುವುದು ತಿಳಿಯದ ವಿಷಯವೇನಲ್ಲ.

ಕಳೆದ ವಾರ ಗುತ್ತಿಗೆದಾರರ ಸಂಘದ ಅಧ್ಯಕ್ಷರಾದ ಕೆಂಪಣ್ಣನವರು ಮತ್ತೊಂದು ಸುತ್ತಿನಲ್ಲಿ ಗಂಭೀರ ಆರೋಪವನ್ನು ಮಾಡಿದರು. ಕಾಮಗಾರಿಗಳನ್ನು ಮಾಡಿ ಎರಡು ವರ್ಷಗಳಾಗಿದ್ದರೂ ಸುಮಾರು 22 ಸಾವಿರ ಕೋಟಿ ರೂಪಾಯಿಗಳ ಹಣ ಗುತ್ತಿಗೆದಾರರಿಗೆ ಬಿಡುಗಡೆಯಾಗುತ್ತಿಲ್ಲ. ಯಾಕೆಂದರೆ ಶೇ.40 ರಷ್ಟು ಹಣವನ್ನು ಮಂತ್ರಿಗಳಿಗೆ, ಅಧಿಕಾರಿಗಳಿಗೆ ಕೊಡಬೇಕಾಗಿದೆ ಎಂದು. ಅದರಲ್ಲೂ ಈ ಬಾರಿಯ ಆರೋಪದಲ್ಲಿ ನಿರ್ದಿಷ್ಟವಾಗಿ ಸಚಿವ ಮುನಿರತ್ನಂ ಅವರ ಹೆಸರನ್ನು ಪ್ರಸ್ತಾವಿಸಿದ್ದಾರೆ. ಮುಖ್ಯಮಂತ್ರಿ, ಸುಧೀರ್ಘವಾದ ಮತ್ತೊಂದು ಪತ್ರವನ್ನು ಬರೆದಿದ್ದಾರೆ. ಅವರ ಪ್ರಮುಖ ಆಕ್ಷೇಪಣೆ ಎಂದರೆ ಈ ಹಿಂದೆಯೂ ಪ್ರಧಾನಿ ಮೋದಿಯವರಿಗೆ ಪತ್ರ ಬರೆದು ಸರ್ಕಾರದಲ್ಲಿನ ಈ ಪರಿಸ್ಥಿತಿಯನ್ನು ವಿವರಿಸಿಪರಿಹಾರ ನೀಡಿ ಎಂದು ಬೇಡಿಕೊಂಡ ನಂತರವೂ ಪ್ರಧಾನಿಗಳು ಏನೆಂದು ಪ್ರತಿಕ್ರಿಯೆಯನ್ನು ನೀಡಿಲ್ಲ. ಕಳೆದ ಬಾರಿ ಮುಖ್ಯಮಂತ್ರಿಗಳಿಗೂ ವಿವರವಾದ ಮನವಿ ಸಲ್ಲಿಸಿ ನಿರ್ದಿಷ್ಟ ವಿಷಯಗಳನ್ನು ಗಮನಕ್ಕೆ ತರಲಾಗಿದ್ದರೂ ಅವರು ನೀಡಿದ ಭರವಸೆಯಂತೆ ಯಾವೊಂದು ಅಂಶವೂ ಇಲ್ಲಿವರೆಗೂ ಈಡೇರಲಿಲ್ಲ. ಬದಲಾಗಿ ಕಿರುಕುಳವೇ ಹೆಚ್ಚಾಗಿದೆ. ಮುಖ್ಯಮಂತ್ರಿಗಳ ಮಾತಿಗೂ ಅಧಿಕಾರಿ ವಲಯದಲ್ಲಿ ಕವಡೆ ಕಿಮ್ಮತ್ತಿನ ಬೆಲೆ ಇಲ್ಲ ಎನ್ನುವುದು ಕೆಂಪಣ್ಣನವರ ಮತ್ತೊಂದು ಆರೋಪ.

ವಿಚಿತ್ರವೆಂದರೆ, ಬಿಜೆಪಿ ಮತ್ತು ಸರ್ಕಾರದ ಸಚಿವರು ಇಂತಹ ಆರೋಪ ಕೇಳಿ ಬಂದಾಗ ನೀಡಿದ ಪ್ರತಿಕ್ರಿಯೆಗಳು ಹಾಸ್ಯಸ್ಪದ ಹಾಗೂ ಅನುಮಾನಾಸ್ಪದವಾಗಿವೆ. ಮಾತ್ರವಲ್ಲ, ಒಂದಿಲ್ಲೊಂದು ಬಗೆಯಲ್ಲಿ ತಮ್ಮ ಲಂಚದ ಅವತಾರಗಳನ್ನು ಒಪ್ಪಿಕೊಂಡಂತೆಯೂ ಆಗಿದೆ. ಬಿಜೆಪಿಯ ವಕ್ತಾರರಾಗಿರುವ ಶಾಸಕ ರವಿಕುಮಾರ್ ರವರು ಪದೇ ಪದೇ ಆಡಿದ ಒಂದೇ ಮಾತು ಎಂದರೆ 'ದಾಖಲೆಗಳಿದ್ದರೆ ಕೊಡಿ, ದಾಖಲೆಗಳಿದ್ದರೆ ಕೊಡಿ'

ಇದು 40 ಪರ್ಸೆಂಟ್ ಪ್ಲಸ್ ಸರ್ಕಾರ

ಈ ವಾರ

ಎಸ್.ವೈ. ಗುರುಶಾಂತ್

ಎಂದು. ನಿಜಕ್ಕೂ ಮಾಡಿದ ಆರೋಪ ಸುಳ್ಳು ಎನ್ನುವುದಾಗಿದ್ದರೆ ಬಾಕಿ ಇರುವ ಮೊತ್ತವನ್ನು ಈ ಕೂಡಲೇ ಕೊಡಿಸುತ್ತೇವೆ ಎಂದಾದರೂ ಹೇಳಬೇಕಾಗಿತ್ತು., ಅದರ ಬದಲು ಕೇವಲ ದಾಖಲೆಗಳನ್ನು ಕೇಳಿದ್ದು ಯಾಕೆ? ತಮ್ಮ ಮೇಲೆ ಬಂದಿರುವ ಆರೋಪವನ್ನು ಖಚಿತ ಮಾಹಿತಿಗಳೊಂದಿಗೆ ನಿರಾಕರಿಸಬೇಕಿದ್ದ ಮುನಿರತ್ನ ರವರು ಮಾನವನಷ್ಟ ಮೊಕದ್ದಮೆ ಹೂಡಲು ಹೊರಟಿದ್ದಾದರೂ ಯಾಕೆ? ಮೇಲಾಗಿ, ಸಿ.ಟಿ. ರವಿ ಅವರಿಂದ ಹಿಡಿದು ಬಹುತೇಕ ಸಚಿವರು, ಬಿಜೆಪಿ ನಾಯಕರದು ಒಂದೇ ಮಂತ್ರ ಎಂದರೆ ದಾಖಲೆ ಕೊಡಿ ಎಂದು. ತಮಗೆ ತಮ್ಮ ಬಾಕಿ ಹಣ ಬೆಕು ಅಷ್ಟೇ ಎಂದರೂ ಕೇಳುತ್ತಿಲ್ಲ. ವಿರೋಧ ಪಕ್ಷದ ನಾಯಕರನ್ನು ಕಂಡು ಅವರಿಗೂ ಮನವಿ ನೀಡಿದ ಕೆಂಪಣ್ಣನವರ ಮೇಲೆಯೇ ಧಾಳಿ ನಡೆಯುತ್ತಿದೆ. ಇದು ಸಿದ್ದರಾಮಯ್ಯನವರ ಮನೆಯಲ್ಲಿ ನಡೆದ ಕುತಂತ್ರವೆಂದು ಹೇಳುವುದರಲ್ಲಿಯೇ ಬಿಜೆಪಿ ನಾಯಕರು ಕಾಲ ಕಳೆದರು. ಟಿ.ವಿ.ಮಾಧ್ಯಮಗಳಿಗೂ ಇಷ್ಟೇ ಬೇಕಾಗಿತ್ತು. ಯಾವ ಕಾರಣದಲ್ಲಿ ಬಾಕಿ ಉಳಿಸಿಕೊಂಡಿರುವ ಹಣವನ್ನು ಮಂಜೂರು ಮಾಡುವ ಬಗ್ಗೆ ಇವರ್ಯಾರೂ ಮಾತನಾಡಲೇ ಇಲ್ಲ. ಹಾಗೊಂದು ವೇಳೆ ಹಣವನ್ನು ಬಿಡುಗಡೆ ಮಾಡಿದರೆ ಬಹುತೇಕ ಕೆಂಪಣ್ಣನವರ ಆರೋಪಗಳ ಪಟ್ಟಿ ಹಿಡಿದು ಕತ್ತಿ ಝುಳಪಿಸುವುದು ಮುಂದುವರಿಯುವುದೂ ಇಲ್ಲ.

ಬಿಜೆಪಿ ನಾಯಕರು ತಮ್ಮನ್ನು ತಾವು ಸತ್ಯ ಹರಿಶ್ಚಂದ್ರರೆಂದು ಅದೆಷ್ಟೇ ಸಮರ್ಥಿಸಿಕೊಂಡರೂ ಸತ್ಯದ ಅನುಭವ ಜನಸಾಮಾನ್ಯರಿಗೆ ನಿತ್ಯವೂ ಆಗುತ್ತಿದೆ. ವಿರೋಧ ಪಕ್ಷವಾಗಿರುವ ಕಾಂಗ್ರೆಸ್ ಹಿಂದೆ ಅಧಿಕಾರದಲ್ಲಿರುವಾಗ ಅದನ್ನು 10 ಪರ್ಸೆಂಟ್ ನ ಸರ್ಕಾರವೆಂದು, ಕರ್ನಾಟಕ ಹೈಕಮಾಂಡ್ ನ ಎ.ಟಿ.ಎಂ ಮಿಷನ್ ಎಂದೂ ಸಾರ್ವಜನಿಕ ಸಭೆಗಳಲ್ಲಿ ಗೇಲಿ ಮಾಡಿದ್ದರು. ಅವರದೇ ಸರ್ಕಾರೀಗ ಅದನ್ನು 40 ಪರ್ಸೆಂಟ್ ಗೆ ಏರಿಸಿದ್ದರೂ ಮೋದಿಯವರ ಸ್ವರ ಏಳುತ್ತಿಲ್ಲ. ಭ್ರಷ್ಟಾಚಾ ಎನ್ನುವುದೂ ಸಾರ್ವಜನಿಕ ಸಂಪತ್ತು ಲೂಟಿ ಮಾಡುವುದು ತಮ್ಮ ಹಕ್ಕೆಂದೇ ಈ ಸ್ವಯಂಸೇವಕ ಭಾವಿಸಿದಂತಿದೆ.ಇಡೀ ಮಂತ್ರಿಮಂಡಲ, ಅಧಿಕಾರಿಗಳು ಲಂಚವನ್ನು ಎಗ್ಗಿಲ್ಲದೇ ಬಾಚಿಕೊಳ್ಳುತ್ತಿರುವ ಗುರುತರ ಆರೋಪವನ್ನು ಎದುರಿಸುತ್ತಿರುವಾಗ ಈ ಆರೋಪಗಳ ಬಗ್ಗೆ ಕನಿಷ್ಠ ತನಿಖೆಯನ್ನು ಕೈಗೊಳ್ಳಲು' ನ ಖಾವೂಂಗಾ, ನ ಖಾನೇ ದೂಂಗಾ' ಪ್ರಧಾನಿಗಳು ಮುಂದಾಗಿಲ್ಲ. ಲೋಕಕ್ಕೆ ನೀತಿ ಭೋಧಿಸುವ ಅವರು ಮೌನಿ ಬಾಬಾ ಆಗಿದ್ದಾರೆ! ಕರ್ನಾಟಕ ಇವರಿಗೂ ಬತ್ತಲಾರದ ಎ.ಟಿ.ಎಂ. ಆಗಿರುವುದೇ ಕಾರಣ ಇರಬಹುದೇ?

40 ಪರ್ಸೆಂಟ್ ನ ಆರೋಪ ಬಂದಿರುವುದು ಕೇವಲ ಕಾಮಗಾರಿ ಗುತ್ತಿಗೆದಾರರ ಸಂಘದಿಂದ ಮಾತ್ರವಲ್ಲ, ಮೇಲಾಗಿ ಶಿಕ್ಷಣ ಕ್ಷೇತ್ರದ ಹಲವು ಪ್ರಮುಖರಿಂದಲೂ ಕೇಳಿ ಬಂದಿದೆ. ಖಾಸಗಿ ಶಿಕ್ಷಣ ಸಂಸ್ಥೆಗಳ ಸಂಘ ರುಪ್ಸಾ ದ ಅಧ್ಯಕ್ಷರೂ ಸಹ ಶಿಕ್ಷಣ ಇಲಾಖೆಯ ಮಂತ್ರಿಗಳು ಮತ್ತು ಅಧಿಕಾರಿಗಳು ಹೇಗೆ ಲಂಚದ ಹಣವನ್ನು ಪೀಕುತ್ತಾರೆ, ಒತ್ತಡ ಹೇರುತ್ತಾರೆ ಎನ್ನುವುದನ್ನು ಎಳೆ ಎಳೆಯಾಗಿ ಬಿಡಿಸಿಟ್ಟಿದ್ದಾರೆ. ಅದಕ್ಕೆ ಸಮಜಾಯಿಸಿ ನೀಡುವ ಕೊಂಚ ಯಾವುದೇ ನೈತಿಕ ಧೈರ್ಯವು ಸ್ಥೈರ್ಯವೂ ಇಲ್ಲದ ಶಿಕ್ಷಣ ಸಚಿವ ಬಿ.ಸಿ.ನಾಗೇಶ್ ರವರು ಕೇವಲ ಟೀಕೆ ಮಾಡಿದರು. ಮಾತ್ರವಲ್ಲ ಅಧಿಕಾರಿಗಳನ್ನು ಛೂ ಬಿಟ್ಟು ಅಧ್ಯಕ್ಷನ ಶಿಕ್ಷಣ ಸಂಸ್ಥೆಗಳ ಮೇಲೆ ದಾಳಿಯನ್ನು ನಡೆಸಿದರು. ಇಂತಹ ದುರಾಕ್ರಮಣದ ನಡೆಗಳ ಮೂಲಕ ಈ ಸರ್ಕಾರದಲ್ಲಿ ಬೇರೂರಿರುವ ವ್ಯಾಪಕ ಬ್ರಹ್ಮಾಂಡ ಭ್ರಷ್ಟಾಚಾರ ಮತ್ತು ದಬ್ಬಾಳಿಕೆಯ ವರ್ತನೆಗಳನ್ನು ನೇರವಾಗಿ ಒಪ್ಪಿಕೊಂಡಂತಾಗಿದೆ. ಹೀಗಾಗಿ ವಿರೋಧ ಪಕ್ಷದ ನಾಯಕರ ಬಾಯನ್ನು ಮುಚ್ಚಿಸಲು ಅಂದಿನ ಅವಧಿಯಲ್ಲಿನ ಹಗರಣಗಳನ್ನು ತನಿಖೆ ಮಾಡುವ ಬೆದರಿಕೆಯನ್ನು ಒಡಲಾಗುತ್ತಿರುವುದು ಅದಕ್ಕಾಗಿಯೇ. ಇದರಿಂದ ಕಾಂಗ್ರೆಸ್ ನಾಯಕರು ವಿಚಲಿತರಾಗುವರೋ, ಒತ್ತಡಕ್ಕೆ ಮಣಿಯವರೋ ಗೊತ್ತಿಲ್ಲ. ಆದರೆ ಸರ್ಕಾರ ಇಂತಹ ಬ್ಲಾಕ್ ಮೇಲ್ ತಂತ್ರಗಳ ಕ್ರಮಗಳ ಮೂಲಕ ತನ್ನ ಹತಾಶ ಸ್ಥಿತಿಯನ್ನು ಒಪ್ಪಿಕೊಂಡಿದೆ.

ಬಾಲಂಗೋಚಿ:

ಅಂದಹಾಗೆ ಕಳೆದ ವಾರ ಬಿಜೆಪಿ ಸರ್ಕಾರದ 40 ಪರ್ಸೆಂಟ್ ಬಗ್ಗೆಯೇ ವ್ಯಾಪಕವಾದ ಚರ್ಚೆಗಳು ನಡೆದಿದ್ದವು. ರಾಜಕೀಯ ರಂಗದ ಕೇಂದ್ರ ಸ್ಥಾನ ಪಡೆದಿದ್ದವು. ಆದರೀಗ ಮುರುಘಾ ಮಠದ ಶರಣರ(!?) ಲೈಂಗಿಕ ದೌರ್ಜನ್ಯದ ಹಗರಣಗಳು ಹೊರ ಬರುತ್ತಿದ್ದಂತೆ ಬಿಜೆಪಿಯ ಪರ್ಸೆಂಟೇಜ್ ಚರ್ಚೆ ಪಕ್ಕಕ್ಕೆ ಸರಿದು ಅದರ ನಾಯಕರಿಗೆ ಒಂದಿಷ್ಟು ರಿಲೀಫ್ ಕೊಟ್ಟಿದೆ. ಅಂದಮಾತ್ರಕ್ಕೆ 40 ಪರ್ಸೆಂಟ್ ಇಲ್ಲವಾದೀತೇ? ಅದು 40 ಪ್ಲಸ್ ಆಗುವುದರಲ್ಲಿ ಅನುಮಾನವಿಲ್ಲ. ಯಾಕೆಂದರೆ ಇದು ನ ಭಯಂ, ನ ಲಜ್ಜಾ ಸರಕಾರ.

ಮಂಗಳೂರಿನಲ್ಲಿ ಬೀಡಿ-ಸಿಗರೇಟ್ ವ್ಯಾಪಾರಿಗಳ ಪ್ರತಿಭಟನೆ

ವರದಿ: ವಾ.ಉಚ್ಚಿಲ್

ಕರ್ನಾಟಕ ಮುನ್ಸಿಪಾಲಿಟಿ(ಸಿಗರೇಟುಗಳು ಮತ್ತಿತರ ತಂಬಾಕು ಉತ್ಪನ್ನ ಮಾರಾಟ ಸ್ಥಳಗಳ ನಿಯಂತ್ರಣಗಳು ಮತ್ತು ತನಿಖೆ) ಮಾದರಿ ಬೈಲಾಗಳು-2020 ರ ಅನುಷ್ಠಾನವನ್ನು ವಿರೋಧಿಸಿ ಫೆಡರೇಶನ್ ಆಫ್ ರೀಟೇಲರ್ ಅಸೋಸಿಯೇಷನ್ ಆಫ್ ಇಂಡಿಯಾ (ಎಫ್‌ಆರ್‌ಎಐ)ನ ಕರ್ನಾಟಕ ಚಾಪ್ಟರ್ ನೇತೃತ್ವದಲ್ಲಿ ಸಿಗರೇಟ್ ವ್ಯಾಪಾರಿಗಳು ಮಂಗಳೂರಿನಲ್ಲಿ ಆಗಸ್ಟ್ 27 ರಂದು ಬೃಹತ್ ಪ್ರತಿಭಟನೆ ನಡೆಸಿದರು.



ಕರ್ನಾಟಕ ರಾಜ್ಯ ಸಣ್ಣ ಬೀಡಿ-ಸಿಗರೇಟು ಮಾರಾಟಗಾರರ ಸಂಘದ ವಕ್ತಾರ ಸುನಿಲ್ ಕುಮಾರ್ ಬಜಾಲ್ ಮಾತನಾಡಿ ಜಾಹೀರಾತು ಮತ್ತು ವ್ಯಾಪಾರ ಹಾಗೂ ವಾಣಿಜ್ಯ ಉತ್ಪಾದನೆ, ಪೂರೈಕೆ ಮತ್ತು ವಿತರಣೆಯ ನಿಷೇಧ ಆಯ್ದೆ-2003 (ಕೋಪ್ಟಾ) ಅನ್ವಯ ನಮ್ಮ ಸದಸ್ಯರು ಈಗಾಗಲೇ ಅಧಿಕಾರಿಗಳಿಂದ ಕಿರುಕುಳಕ್ಕೆ ಒಳಗಾಗುತ್ತಿದ್ದು, ಅವರ ಅನಕ್ಷರತೆ ಹಾಗೂ ಅಜ್ಞಾನದ ಲಾಭ ಪಡೆಯುತ್ತಾರೆ. ಬೈಲಾದ ಕರಡಿನ ಪ್ರಕಾರ ತಂಬಾಕು ಉತ್ಪನ್ನ ಮಾರಾಟಗಾರರು ಲೈಸೆನ್ಸ್ ಪಡೆಯಬೇಕು ಮತ್ತು ಪ್ರತಿವರ್ಷ ಲೈಸೆನ್ಸ್ ನವೀಕರಣ ಮಾಡಿಕೊಳ್ಳಬೇಕು. ಚಿಲ್ಲರೆ ವ್ಯಾಪಾರಿಗಳಿಗೆ ಲೈಸೆನ್ಸ್ ಪ್ರದರ್ಶಿಸುವುದು ಮತ್ತು ಸಲಹಾ ಪುಸ್ತಕ ಇರಿಸುವುದು ಕಡ್ಡಾಯ. ತಪ್ಪಿದಲ್ಲಿ ದೊಡ್ಡ ಪ್ರಮಾಣದ ದಂಡ ವಿಧಿಸಲೂ ಅವಕಾಶವಿದೆ ಎಂದು ಹೇಳಿದರು.

ಲಕ್ಷಾಂತರ ಮಂದಿಯ ಆದಾಯ ನಷ್ಟಕ್ಕೆ ಕಾರಣವಾಗುವ ಅಂತಹ ಕಾನೂನುಗಳನ್ನು ಅನುಷ್ಠಾನಕ್ಕೆ ತರುವ ಮುನ್ನ ರಾಜ್ಯ ಸರಕಾರವು ಪರ್ಯಾಯ ಜೀವನೋಪಾಯಗಳನ್ನು ಪೂರೈಸಬೇಕು ಎಂದು ಒತ್ತಾಯಿಸಿದರು.

ಕರ್ನಾಟಕ ರಾಜ್ಯ ಸಣ್ಣ-ಬೀಡಿ ಸಿಗರೇಟು ಮಾರಾಟಗಾರರ ಸಂಘದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಎನ್.ಕೆ.ಅಬೂಬಾಕರ್, ಕಾರ್ಮಿಕ ಮುಖಂಡರಾದ ಗಿರಿ ಅತ್ತಾವರ, ಅಬ್ದುರ್ರಹ್ಮಾನ್, ಸತೀಶ್ ಮಲ್ಯ, ಅಶ್ವಿನಿ, ರೇಷ್ಮಾ, ಸುಕುಮಾರ್ ತೊಕ್ಕೊಟ್ಟು, ಸಂತೋಷ್, ನೌಷಾದ್, ಹನೀಫ್, ಬಿ.ಕೆ.ಇಮ್ತಿಯಾಜ್ ಮತ್ತಿತರರು ಉಪಸ್ಥಿತರಿದ್ದರು.

ಸಿಐಟಿಯು ಉಡುಪಿ ಜಿಲ್ಲಾ 7ನೇ ಸಮ್ಮೇಳನ

ಮೋದಿ ಸರಕಾರ ಅಧಿಕಾರಕ್ಕೆ ಬಂದ ನಂತರ 2015 ರಲ್ಲಿ ನೆಪ ಮಾತ್ರಕ್ಕೆ ದಿಲ್ಲಿಯಲ್ಲಿ ಭಾರತೀಯ ಕಾರ್ಮಿಕರ ಸಮ್ಮೇಳನ ನಡೆಸಲಾಗಿತ್ತು. ಇದರಲ್ಲಿ ಯಾವುದೇ ನಿರ್ಣಯಗಳನ್ನು ಅಂಗೀಕಾರ ಮಾಡಿರಲಿಲ್ಲ. ಅದರ ನಂತರ 2021ರ ವರೆಗೆ ಕಾರ್ಮಿಕ ಸಮ್ಮೇಳನ ನಡೆದಿಲ್ಲ. ಇತ್ತೀಚೆಗೆ ತಿರುಪತಿಯಲ್ಲಿ ಕಾರ್ಮಿಕ ಸಂಘಟನೆಗಳನ್ನು ಹೊರಗಿಟ್ಟು ಅಧಿಕಾರಿಗಳು ಮತ್ತು ಮಾಲಕರು ಮಾತ್ರ ಭಾಗವಹಿಸಿ ಸಮ್ಮೇಳನ ನಡೆಸಲಾಗಿದೆ. ಇದು ಚುನಾವಣೆ ದೃಷ್ಟಿಯಿಂದ ನಡೆಸಿರುವ ಸಮ್ಮೇಳನವಾಗಿದೆ ಎಂದು ಸಿಐಟಿಯು ರಾಜ್ಯ ಕಾರ್ಯದರ್ಶಿ ಕೆ.ಮಹಾಂತೇಶ್ ಆರೋಪಿಸಿದ್ದಾರೆ.

ಬ್ರಹ್ಮಾವರ ಬಸ್ ನಿಲ್ದಾಣದ ಬಳಿ ಆಗಸ್ಟ್ 28 ರಂದು ನಡೆದ ಸಿಐಟಿಯು ಉಡುಪಿ ಜಿಲ್ಲಾ 7ನೇ ಸಮ್ಮೇಳನವನ್ನು ಉದ್ಘಾಟಿಸಿ ಅವರು ಮಾತನಾಡುತ್ತಿದ್ದರು.

2009ರಲ್ಲಿ ನಡೆದ ಭಾರತೀಯ ಕಾರ್ಮಿಕರ ಸಮ್ಮೇಳನದಲ್ಲಿ ದೇಶದಲ್ಲಿರುವ ಸುಮಾರು ಒಂದು ಕೋಟಿ ಸಂಖ್ಯೆಯಲ್ಲಿರುವ ಅಂಗನವಾಡಿ, ಆಶಾ, ಬಿಸಿಯೂಟ ಹಾಗೂ ಇತರ ನೌಕರರನ್ನು ಖಾಯಂ ಮಾಡುವಂತೆ ನಿರ್ಣಯಗಳನ್ನು ಅಂಗೀಕರಿಸಲಾಗಿತ್ತು. ಆದರೆ ಇಂದಿಗೂ ಖಾಯಂ ಮಾಡುವುದು ಬಿಡಿ, ಅವರಿಗೆ ಕನಿಷ್ಟ ವೇತನ ಕೂಡಾ ನಿಗದಿ ಮಾಡಿಲ್ಲ ಎಂದ ಅವರು 8 ಗಂಟೆಗಳ ಕಾಲ ದುಡಿಯದ ಆಶಾ, ಅಂಗನವಾಡಿ, ಬಿಸಿಯೂಟ ನೌಕರರು ಕನಿಷ್ಟ ವೇತನದ ವ್ಯಾಪ್ತಿಗೆ ಬರುವುದಿಲ್ಲ ಎಂದು ಹೈಕೋರ್ಟ್ ನೀಡಿರುವ ಆದೇಶ ಸ್ವೀಕಾರಾರ್ಹವಲ್ಲ. ಆದ್ದರಿಂದ ಈ ಆದೇಶವನ್ನು ಹೈಕೋರ್ಟ್ ಕೋಟ್ಯಾಂತರ ನೌಕರರ ಹಿತದೃಷ್ಟಿಯಿಂದ ಪುನರ್ ಪರಿಶೀಲನೆ ಮಾಡಬೇಕು ಎಂದು ಒತ್ತಾಯಿಸಿದರು.

ಸಮ್ಮೇಳನದ ಅಧ್ಯಕ್ಷತೆಯನ್ನು ಸಿಐಟಿಯು ಉಡುಪಿ ಜಿಲ್ಲಾಧ್ಯಕ್ಷ ಕೆ.ಶಂಕರ್ ವಹಿಸಿದ್ದರು. ಸಿಐಟಿಯು ಜಿಲ್ಲಾ ಉಪಾಧ್ಯಕ್ಷ ಬಾಲಕೃಷ್ಣ ಶೆಟ್ಟಿ, ಮುಖಂಡರಾದ ಮಹಾಬಲ ವಡೇರಹೋಬಳಿ, ಎಚ್.ನರಸಿಂಹ, ಕವಿರಾಜ್, ಸುನಂದಾ, ಬಲ್ಕೀಸ್ ಉಪಸ್ಥಿತರಿದ್ದರು.

ಪ್ರಧಾನ ಕಾರ್ಯದರ್ಶಿ ಸುರೇಶ್ ಕಲ್ಲಾಗರ ವದರಿ ಮಂಡಿಸಿದರು. ಶಶಿಧರ ಗೋಲ್ಲ ಸ್ವಾಗತಿಸಿದರು.

ಇದೇ ಸಂದರ್ಭದಲ್ಲಿ ನೂತನ ಸಮಿತಿಯನ್ನು ಆಯ್ಕೆ ಮಾಡಲಾಯಿತು. ಅಧ್ಯಕ್ಷರಾಗಿ ಕೆ.ಶಂಕರ್, ಪ್ರಧಾನ ಕಾರ್ಯದರ್ಶಿಯಾಗಿ ಸುರೇಶ್ ಕಲ್ಲಾಗರ, ಕೋಶಾಧಿಕಾರಿಯಾಗಿ ಶಶಿಧರ ಗೊಲ್ಲ ಆಯ್ಕೆಯಾದರು.

ಆದಿವಾಸಿಗಳ ಅಭಿವೃದ್ಧಿ ಕುಂದಾಪುರದಲ್ಲಿ ಕಾನೂನು ಅರಿವು ಕಾರ್ಯಾಗಾರ

ಆದಿವಾಸಿಗಳ ಕೊರಗ ಸಮುದಾಯವು ಇಂದಿಗೂ ನಿರೀಕ್ಷಿತ ಮಟ್ಟದಲ್ಲಿ ಸಮಾಜದ ಮುಖ್ಯವಾಹಿನಿಗೆ ಬರಲು ಪರಿತಪಿಸುತ್ತಿದೆ. ಇಂತಹ ಕಾಲಘಟ್ಟದಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ನೀಡಿದ ಸಂದೇಶದಂತೆ ಶಿಕ್ಷಣ, ಸಂಘಟನೆ, ಹೋರಾಟವನ್ನು ಮೂಲಮಂತ್ರವಾಗಿಸಿಕೊಂಡು ಮುನ್ನಡೆಯಬೇಕು. ಶಿಕ್ಷಣವೇ ಪ್ರಮುಖ ಆಯುಧೆಂಬ ಎಲ್ಲಾ ಮಹನೀಯರ ಆದರ್ಶ ಪಾಲಿಸಬೇಕು ಎಂದು ಕುಂದಾಪುರ ತಾಲೂಕು ಕಾನೂನು ಸೇವೆಗಳ ಸಮಿತಿಯ ಅಧ್ಯಕ್ಷ ಹಾಗೂ ಹಿರಿಯ ಸಿವಿಲ್ ನ್ಯಾಯಾಧೀಶ ರಾಜು ಎನ್ ಹೇಳಿದ್ದಾರೆ.

ಕರ್ನಾಟಕ ಆದಿವಾಸಿ ಹಕ್ಕುಗಳ ಸಮನ್ವಯ ಸಮಿತಿ ಉಡುಪಿ ಜಿಲ್ಲಾ ಸಂಘಟನಾ ಸಮಿತಿ, ಕುಂದಾಪುರ ತಾಲೂಕು ಕಾನೂನು ಸೇವೆಗಳ ಸಮಿತಿ ಮತ್ತು ವಕೀಲರ ಸಂಘ ಕುಂದಾಪುರ ಇವರ ಸಂಯುಕ್ತಾಶ್ರಯದಲ್ಲಿ ಆಗಸ್ಟ್ 29 ರಂದು ಕುಂದಾಪುರದಲ್ಲಿ ವಿಶ್ವ ಆದಿವಾಸಿ ದಿನಾಚರಣೆ ಪ್ರಯುಕ್ತ ನಡೆದ ಆದಿವಾಸಿಗಳ ಅಭಿವೃದ್ಧಿ ಏಕೆ? ಮತ್ತು ಹೇಗೆ ಅವಲೋಕನ ಪರಿಶಿಷ್ಟ ಪಂಗಡ ಆದಿವಾಸಿ ಬುಡಕಟ್ಟು ಜನರಿಗೆ ಕಾನೂನು ಅರಿವು ಮಾಹಿತಿ ಕಾರ್ಯಾಗಾರ ಹಾಗೂ ಆದಿವಾಸಿ ಅಭಿವೃದ್ಧಿ ಅಧ್ಯಯನ ಶಿಬಿರ ಉದ್ಘಾಟಿಸಿ ಮಾತನಾಡುತ್ತಿದ್ದರು.

ಕರ್ನಾಟಕ ಆದಿವಾಸಿ ಹಕ್ಕುಗಳ ಸಮನ್ವಯ ಸಮಿತಿಯ ರಾಜ್ಯ ಸಹ ಸಂಚಾಲಕ ಡಾ.ಎಸ್. ವೈ.ಗುರುಶಾಂತ್ ಮಾತನಾಡಿ, ಭಾರತದ ವಿವಿಧ ಕ್ಷೇತ್ರಗಳು ಪ್ರಪಂಚವನ್ನೇ ಗಮನ ಸೆಳೆಯುವಂತೆ ಮಾಡಿದೆ. ದೇಶದ ಸಂಸ್ಕೃತಿ, ಸಮೃದ್ಧಿ ಹೆಚ್ಚಿಸಿ ಆಚಾರ-ವಿಚಾರದ ತಳಹದಿಯಾಗಿರುವ ಮೂಲನಿವಾಸಿಗಳು ಇನ್ನೂ ಸ್ವಾತಂತ್ರ್ಯ ಪೂರ್ವದಲ್ಲಿ ನೋವು ಅನುಭವಿಸಿದಂತೆ ಈಗಲೂ ಸಮಸ್ಯೆಯಲ್ಲಿದ್ದಾರೆ, ಭಾರತದಲ್ಲಿ ಆದಿವಾಸಿಗಳು ವಿಶ್ವದ ಬೇರೆ ಕಡೆಗಳಿಗಿಂತ ಹೆಚ್ಚಿದ್ದಾರೆ. ಕೊರಗರ ಸಾಕ್ಷರತೆ ಮತ್ತು ಆರೋಗ್ಯ ವಿಚಾರದಲ್ಲಿ ಇನ್ನಷ್ಟು ಪರಿವರ್ತನೆ ಅಗತ್ಯವಿದೆ ಎಂದರು.

ಕುಂದಾಪುರ ವಕೀಲರ ಸಂಘದ ಅಧ್ಯಕ್ಷ ಬನ್ನಾಡಿ ಸೋಮನಾಥ ಹೆಗ್ಡೆ ಅಧ್ಯಕ್ಷತೆ ವಹಿಸಿದ್ದರು. ಕುಂದಾಪುರದ ಪ್ರಧಾನ ಸಿವಿಲ್ ಮತ್ತು ಜೆಎಂಎಫ್‌ಸಿ ನ್ಯಾಯಾಧೀಶ ತಾಲೂಕು ಸಮಿತಿಯ ಸದಸ್ಯ ಕಾರ್ಯದರ್ಶಿ ಧನೇಶ್ ಮುಗಳಿ, ಕರ್ನಾಟಕ ಆದಿವಾಸಿ ಹಕ್ಕುಗಳ ಸಮನ್ವಯ ಸಮಿತಿಯ ಉಡುಪಿ ಜಿಲ್ಲಾಧ್ಯಕ್ಷ ಶ್ರೀಧರ್ ನಾಡ, ಗೌರವಾಧ್ಯಕ್ಷ ಸಂಜು ಕಾರೆಬೈಲು ಉಪಸ್ಥಿತರಿದ್ದರು.

ಅತ್ಯಾಚಾರಿ ಆರೋಪಿಗಳ ಬೆನ್ನಿಗೆ ನಿಂತಿತೇ ಸರಕಾರ?

ಪುಟ 3 ರಿಂದ

ಒಳಗೊಂಡಿರುವ ಸಂಗತಿಗಳನ್ನು ನಿರ್ಲಕ್ಷಿಸುವಂತಿಲ್ಲ. 'ಮಠಗಳು ರಾಜಕಾರಣಿಗಳ, ಅಧಿಕಾರಶಾಹಿಗಳ ಮತ್ತು ಕೆಲವು ಉದ್ಯಮಿಗಳ ಕಪ್ಪು ಹಣವನ್ನು ಕಾಪಾಡುವ 'ಸ್ವಿಸ್ ಬ್ಯಾಂಕು'ಗಳಂತಾಗಿವೆ' ಎಂಬ ಹಿರಿಯ ಮಠಾಧೀಶರೊಬ್ಬರ ಟೀಕೆಯನ್ನು ಮತ್ತು ಆ ಕಾರಣಕ್ಕೆ ಅವರ ಮೇಲೆ ಧಾಳಿ ಮಾಡಿಸಲು ಯತ್ನಿಸಿದ್ದನ್ನು ನೆನಪಿಸಿಕೊಳ್ಳಬೇಕು. ಮುರುಘಾ ಮಠದ ಪೀಠಾಧಿಪತಿಗಳ ಮೇಲೆ ಕಾನೂನು ಕ್ರಮವನ್ನು ಜರುಗಿಸಲು ವಿಳಂಬಿಸಿರುವುದರ ಹಿಂದೆಯೂ ಇಂತಹ ಡಿಪಾಸಿಟ್ ದಾರರು ಇರುವ ಕೆಲವು ಗುಮಾನಿಗಳು ಸಾರ್ವಜನಿಕರಲ್ಲಿ ಮೂಡಿವೆ.

ಈ ಎಲ್ಲ ಹಿನ್ನೆಲೆಯಲ್ಲಿಯೂ ಈಗಲಾದರೂ ಮುರುಘಾ ಮಠದ ಶಿವಮೂರ್ತಿ ಶರಣರು ಸತ್ಯನಿಷ್ಠರಾಗಿ ತಮ್ಮನ್ನು ಸಂಪೂರ್ಣವಾಗಿ ತನಿಖೆಗೆ ಒಡ್ಡಿಕೊಳ್ಳಬೇಕು. ಈ ಪ್ರಕರಣದಲ್ಲಿ ಪಕ್ಷಪಾತದಿಂದ ವರ್ತಿಸಿರುವ ಜಿಲ್ಲಾ ಪೊಲೀಸ್ ಅಧಿಕಾರಿಗಳು ಮತ್ತು ಜಿಲ್ಲಾಡಳಿತದ ಹೊಣೆ ಇರುವವರನ್ನು ಅಮಾನತುಗೊಳಿಸಿ ನಿಷ್ಪಕ್ಷಪಾತ ತನಿಖೆ ಹಾಗೂ ಅಪರಾಧಿಗಳಿಗೆ ಕಠಿಣ ಶಿಕ್ಷೆಗೆ ಒಳಗಾಗುವಂತೆ ನೋಡಬೇಕು.

ಇತ್ತೀಚಿನ ದಿನಗಳಲ್ಲಿ ಇಂತಹ ಧಾರ್ಮಿಕ ಸೋಗಿನ ಸ್ವಾಮಿಗಳು, ಪೀಠಾಧಿಪತಿ, ಗುರೂಜಿ ಮತ್ತು ಬಾಬಾ ಗಳ ಹಗರಣಗಳು ಒಂದರ ನಂತರ ಮತ್ತೊಂದರಂತೆ ಬಯಲಾಗುತ್ತಲೇ ಇವೆ. ವಾಸ್ತವದಲ್ಲಿ ಪಾಳೇಗಾರಿ ಮತ್ತು ಕಾರ್ಪೊರೇಟ್ ಬಂಡವಾಳದ ಮೌಲ್ಯಗಳ ಸಂಕೀರ್ಣವಾಗಿರುವ ಈ ಸಂಸ್ಥೆಗಳು ಆಳುವ ವರ್ಗಗಳಂತೆ ಅದಃಪತನಕ್ಕೆ ಇಳಿದಿರುವುದು ಆಶ್ಚರ್ಯಕರವೇನಲ್ಲ. ಅಪಾರ ಹಣ, ಬೆಂಬಲಿಸುವ ಭಕ್ತ ಗಣ, ಅಧಿಕಾರಸ್ಥರ ನಂಟು, ಧಾರ್ಮಿಕತೆಯ ಸೋಗು ಏನೂ ಮಾಡಿದರೂ ದಕ್ಕಿಸಿಕೊಳ್ಳುವ ಭಂಡ ಧೈರ್ಯ, ಸನ್ಯಾಸಿಯಾಗಿದ್ದರೂ ಸರ್ವ ಸುಖಕ್ಕೆ ಹಾತೊರೆವ ಲಾಲಸೆ ಅಪರಾಧಗಳಿಗೂ ಹೇಸದ ಸ್ಥಿತಿಯನ್ನು ನಿರ್ಮಿಸಿದೆ. ಅತ್ಯಂತ ಮುಗ್ಧತೆ ಮತ್ತು ಭಕ್ತಿ ಭಾವುಕತೆಗಳಿಂದ ಧಾರ್ಮಿಕ ಪ್ರತಿನಿಧಿಗಳು ಎನಿಸಿಕೊಂಡವರನ್ನು ಬೆಂಬಲಿಸುವ, ಅನುಸರಿಸುವ ಎಲ್ಲರೂ ಕಣ್ತೆರೆದು ಯೋಚಿಸಬೇಕಾದ ಸಮಯವಿದು.



ಧರ್ಮ ರಕ್ಷಣೆಯಲ್ಲಿ ಬೀದಿ ಹೆಣವಾಗುವ ಬದಲಾಗಿ

ಉದ್ಯೋಗದ ಹಕ್ಕಿಗಾಗಿ ಹೋರಾಡಿ

ಜಿಲ್ಲೆಯ ಯುವಜನತೆ ಧರ್ಮ ರಕ್ಷಣೆಯ ಹೆಸರಲ್ಲಿ ಪರಸ್ಪರ ಒಡೆದಾಡಿ ಬೀದಿ ಹೆಣವಾಗಿ ಸಾಯುವುದಕ್ಕಿಂತ ಉದ್ಯೋಗದ ಹಕ್ಕಿಗಾಗಿ ಹೋರಾಡಬೇಕು, ಜನರ ನೈಜ ಬದುಕಿನ ಪ್ರಶ್ನೆಯ ಇತ್ಯರ್ಥಕ್ಕಾಗಿ ಯಾವ ತ್ಯಾಗಕ್ಕೂ ಸಿದ್ದರಾಗಬೇಕೆಂದು ಡಿವೈಎಫ್ಐ ದ.ಕ ಜಿಲ್ಲಾ ಕಾರ್ಯದರ್ಶಿ ಸಂತೋಷ್ ಬಜಾಲ್ "ತುಳುನಾಡಿನ ಅಭಿವೃದ್ಧಿಯಲ್ಲಿ ತುಳುನಾಡಿನ ಯುವಜನತೆಗೆ ದೊಡ್ಡ ಪಾಲು, ಉದ್ಯೋಗ ಸೃಷ್ಟಿಸಿ, ನಿರುದ್ಯೋಗದಿಂದ ರಕ್ಷಿಸಿ" ಎಂಬ ಘೋಷಣೆಯಡಿಯಲ್ಲಿ ಸೆಪ್ಟೆಂಬರ್ 04, 2022 ರಂದು ನಡೆದ ಡಿವೈಎಫ್ಐ ಕಣ್ಣೂರು ಘಟಕದ ಸಮ್ಮೇಳನವನ್ನು ಉದ್ಘಾಟಿಸಿ ಮಾತನಾಡಿದರು.

ಮೋದಿ: ಮಂಗಳೂರು ಭೇಟಿ–ಹಲವು ವಾಸ್ತವಗಳು



ಕೆ.ಕೆ.ಮಂಗಳೂರು

ದಿನಾಂಕ 2, ಸಪ್ಟಂಬರ್ 2022 ರಂದು ಮಂಗಳೂರು ನಗರಕ್ಕೆ ದೇಶದ ಪ್ರಧಾನಿ ಮತ್ತು ಸ್ವಯಂಘೋಷಿತ 'ವಿಶ್ವಗುರು' ನರೇಂದ್ರ ಮೋದಿಯವರ ಭೇಟಿಯ ಹಿಂದೆ ಇದ್ದ ಹಿಡನ್ ಅಜೆಂಡಾ ಮತ್ತು ತೋರಿಕೆಗೆ ಇದ್ದ ಕಾರ್ಯಕ್ರಮ ಹಾಗೂ ವಾಸ್ತವವಾಗಿ ನಡೆದದ್ದು ಬಹು ಆಯಾಮಗಳಿಂದ ವಿಮರ್ಶಿಸಬೇಕಾದ ಒಂದು ಘಟನೆಯಾಗಿದೆ.

ತೋರಿಕೆಗೆ ಅಭಿವೃದ್ಧಿ ಯೋಜನೆಗಳ ಲೋಕಾರ್ಪಣೆಗಾಗಿ ಒಂದು ಸರಕಾರಿ ಯೋಜನೆ ಎಂದು ಸಾರ್ವಜನಿಕವಾಗಿ ಘೋಷಿಸಲಾಗಿತ್ತು. ಆ ಪ್ರಕಾರ ಜಿಲ್ಲೆಯ ಆಡಳಿತ ಯಂತ್ರವನ್ನು ಸಂಪೂರ್ಣವಾಗಿ ಈ ಹಿಂದೆಂದೂ ನಡೆಯದ, ಕೇಳದ ಮತ್ತು ಕಂಡರಿಯದ ರೀತಿಯಲ್ಲಿ ಈ ಕಾರ್ಯಕ್ರಮದ ಯಶಸ್ವಿಗಾಗಿ ವ್ಯವಸ್ಥಿತವಾಗಿ ದುರುಪಯೋಗ ಮಾಡಲಾಯಿತು. ಕೋಟ್ಯಾಂತರ ರೂಪಾಯಿ ಜನರ ಹಣವನ್ನು ಖಜಾನೆಯಿಂದ ಈ ಕಾರ್ಯಕ್ರಮಕ್ಕೆ ಖರ್ಚು ಮಾಡಲಾಯಿತು. ಜಿಲ್ಲೆಯ ಪಿಡಿಒ, ತಹಶಿಲ್ದಾರರುಗಳು, ಎಲ್ಲಾ ನಗರಸಭೆಗಳ ಮುಖ್ಯಾಧಿಕಾರಿಗಳನ್ನು ನೋಡಲ್ ಅಧಿಕಾರಿಗಳನ್ನಾಗಿ ಮಾಡಿ ಮೋದಿಯವರ ಸಭೆಗೆ ಜನ ಸೇರಿಸಲು ಪಟ್ಟಿಯನ್ನು ನೀಡಿ ಜನರನ್ನು ಕರೆತರಲು ಹಚ್ಚಲಾಯಿತು. ಸರಕಾರಿ ಅಧಿಕಾರಿಗಳು ಮಾತ್ರವೇ ಅಲ್ಲದೆ ಸರಕಾರಿ, ಅರೆ ಸರಕಾರಿ ಸ್ವಾಮ್ಯದ ಬ್ಯಾಂಕ್, ಸಾರ್ವಜನಿಕ ರಂಗದ ಸಂಸ್ಥೆಗಳ ಅಧಿಕಾರಿಗಳಿಗೂ ತಮ್ಮ ಇಲಾಖೆಯ ವಿವಿಧ ಫಲಾನುಭವಿಗಳನ್ನು ಪ್ರಧಾನಿಯವರ ರ್‍ಯಾಲಿಗೆ ಜನ ಸೇರಿಸಲು ಕೋಟಾವನ್ನು ಹಂಚಲಾಯಿತು. ಸರಕಾರಿ ಅಧಿಕಾರಿಗಳಂತೂ ರ್‍ಯಾಲಿಗೆ ಜನರನ್ನು ಸೇರಿಸುವ ಉದ್ದೇಶದಿಂದ ಸರಕಾರದ ಯೋಜನೆಯ ವಿವಿಧ ಫಲಾನುಭವಿಗಳನ್ನು ಮನೆ ಮನೆಗೆ ಭೇಟಿ ನೀಡಿ ಕಡ್ಡಾಯವಾಗಿ ಸರಕಾರದಿಂದ ನಿಯೋಜಿಸಲ್ಪಟ್ಟ ಬಸ್ಸಿಗೆ ಬರಬೇಕೆಂದೂ, ಬಾರದೇ ಇದ್ದಲ್ಲಿ ಮುಂದಿನ ಹಂತದ ವಿವಿಧ ಸೌಲಭ್ಯಗಳಿಗೆ ತೊಂದರೆಯಾಗುತ್ತದೆ ಎಂದು ಪ್ರಚಾರ ಮಾಡಲಾಯಿತು. ವಿವಿಧ ರೀತಿಯ ಪಿಂಚಣಿ ಪಡೆಯುವವರ ಪಿಂಚಣಿ ನಿಲ್ಲಿಸುವುದಾಗಿ ಹೆದರಿಸಲಾಯಿತು. ಸಣ್ಣ ವ್ಯಾಪಾರದ ಸಾಲಗಾರರಿಗೆ ಹೆಚ್ಚುವರಿ ಸಾಲ ನೀಡಲಾಗುವುದೆಂಬ ಪ್ರಲೋಭನೆ ನೀಡಲಾಯಿತು. ಗ್ರಾಮೀಣ ಭಾಗಗಳಲ್ಲಿ ರ್‍ಯಾಲಿಗೆ ಬಂದವರ ಬಡ್ಡಿಯಲ್ಲಿ ವಿನಾಯಿತಿ ನೀಡಲಾಗುವುದೆಂದೂ ಹೇಳಲಾಯಿತು. ಸರಕಾರದ ವಿವಿಧ ಯೋಜನೆಗಳ ಅಂದರೆ ಮನೆ ನಿರ್ಮಾಣ, ವಾಹನ ಸಾಲ, ಶೌಚಾಲಯ, ಕೆರೆ ನಿರ್ಮಾಣ, ಇವೇ ಮೊದಲಾದ ಫಲಾನುಭವಿಗಳು ಬಾರದೆ ಇದ್ದಲ್ಲಿ ಅದನ್ನು ನಿಲ್ಲಿಸಲಾಗುವುದೆಂಬ ಬಹಿರಂಗ ಬೆದರಿಕೆಗಳನ್ನು ಅಧಿಕಾರಿಗಳು, ಬಿಜೆಪಿಯ ಕಾರ್ಯಕರ್ತರುಗಳು ಹಾಗೂ ನಾಯಕರುಗಳು ಮಾಡಿದರು.

ಕೆಲವೆಡೆಗಳಲ್ಲಿ ಇವುಗಳ ಮೊತ್ತವನ್ನು ಹೆಚ್ಚಿಸಲಾಗುವುದೆಂದೂ ನಂಬಿಸಿದರು. ಒಟ್ಟಾರೆಯಾಗಿ ಯಾವೆಲ್ಲಾ ವಿಧದಲ್ಲಿ ಸಾಧ್ಯವಿದೆಯೋ ಆ ಎಲ್ಲಾ ರೀತಿಯಲ್ಲಿ ಜನರನ್ನು ನಂಬಿಸಿ ಮೋದಿಯವರ ರ್‍ಯಾಲಿಗೆ ಜನ ಸೇರಿಸಲು ಇಡೀ ಸರಕಾರಿ ಯಂತ್ರವನ್ನೇ ಸಜ್ಜು ಗೊಳಿಸಲಾಯಿತು. ಈ ರೀತಿಯಾಗಿ ನಿಯುಕ್ತಗೊಂಡ ಸರಕಾರಿ ಅಧಿಕಾರಿಗಳು ಬಿಜೆಪಿಯ ನಾಯಕರುಗಳೊಂದಿಗೆ ಸೇರಿಕೊಂಡು ಹೆಚ್ಚುವರಿ ಆರ್ಥಿಕ ಸಂಪನ್ಮೂಲವನ್ನು ಪಡೆದುಕೊಂಡು ಶತಾಯ ಗತಾಯ ಜನ ಸೇರಿಸಲು ಅಧಿಕಾರಿಗಳನ್ನು ಎಲ್ಲಾ ವಿಧದಲ್ಲೂ ನೋಡಿಕೊಂಡರು. ಈ ನೋಡಲ್ ಅಧಿಕಾರಿಗಳೂ ಕೂಡಾ ಹೆಚ್ಚು ಕಡಿಮೆ ಪ್ರಾಮಾಣಿಕತೆಯಿಂದ ಜನ ಸೇರಿಸಲು ದುಡಿದರು. ಅಂತು ಇಂತೂ ಜಿಲ್ಲೆಯಾದ್ಯಾಂತ ಸುಮಾರು 2000 ಕೆಎಸ್ಆರ್‌ಟಿಸಿ ಬಸ್ಸುಗಳನ್ನು ಬುಕ್ ಮಾಡಿದರು. ಇದಲ್ಲದೆ ನೂರಾರು ಸಂಖ್ಯೆಯಲ್ಲಿ ಖಾಸಗಿ ಬಸ್ಸುಗಳನ್ನು ಕೂಡಾ ಬುಕ್ ಮಾಡಿದರು. ಕುಳೂರಿನ ಗೋಲ್ಡ್ ಪಿಂಚ್ ಎಂಬ ಮೈದಾನದಲ್ಲಿ ನಡೆದ ಬಹಿರಂಗ ಸಭೆಗೆ ಲಕ್ಷಾಂತರ ಸಂಖ್ಯೆಯಲ್ಲಿ ಜನ ಸೇರಿಸುವ ಭರವಸೆಯಲ್ಲಿ ಬಿಜೆಪಿ ನಾಯಕತ್ವ ಮತ್ತು ಜಿಲ್ಲಾಡಳಿತ ಮಾಧ್ಯಮಗಳಲ್ಲಿ ತುತ್ತೂರಿ ಬಾರಿಸುತ್ತಿತ್ತು. ಒಂದೇ ಮಾತಿನಲ್ಲಿ ಹೇಳುವುದಾದರೆ ಸರಕಾರೀ ಯಂತ್ರ 'ಮೋಡಿ' ರ್‍ಯಾಲಿಗೆ ಜನ ಸೇರಿಸುವ ಏಕೈಕ ಉದ್ದೇಶದಲ್ಲಿ ಹಗಲೂ ರಾತ್ರಿ ದುಡಿಯಿತು. ಕೋಮು ಗಲಭೆ, ಪ್ರಕೃತಿ ವಿಕೋಪಗಳ ಸಮಯದಲ್ಲಿ ಘೋರ ನಿದ್ರೆಯಲ್ಲಿ ಪವಡಿಸುತ್ತಿರುವ ಅಧಿಕಾರಿಗಳ ದಂಡು ಈ ಬಾರಿ ವರ್ತಿಸಿದ ಪರಿ ಹಲವಾರು ಸಂಶಯಗಳಿಗೆ ಎಡೆ ಮಾಡಿಕೊಟ್ಟಿದೆ.

ಅಧಿಕಾರಿಗಳಿಗೆ ವಿವಿಧ ಸ್ವರೂಪದ ಉತ್ತೇಜಕ, ಪ್ರೋತ್ಸಾಹಕ ಸ್ಕೀಮ್ ಗಳನ್ನು ಘೋಷಿಸಿಕೊಂಡಿರುವ ಸಾಧ್ಯತೆ ಇದೆ. ಇಂದು ವಾರಗಳ ಕಾಲ ಬೆಳಗ್ಗಿನ ಟಿಫನ್ ನಿಂದ ಹಿಡಿದು ರಾತ್ರಿಯ 'ಸಮಾರಾಧನೆ'ಗಳಿಗೆ ಎಲ್ಲಿಯೂ ಕೂಡಾ ತೊಂದರೆಯಾಗದಂತೆ ನಿಗಾ ವಹಿಸಬೇಕೆಂದು ಬಿಜೆಪಿಯ ಜಿಲ್ಲಾ ನಾಯಕತ್ವ ತನ್ನ ಸ್ಥಳೀಯ ಮುಂದಾಳುಗಳಿಗೆ ನಿರ್ದೇಶನ ನೀಡಿತ್ತು.

ಈ ರೀತಿ ನಿರ್ದೇಶನ ನೀಡಿ ಪತ್ರಿಕೆಗಳಿಗೆ, ಟಿ.ವಿ ಮಾಧ್ಯಮಗಳಿಗೆ ಪುಟಗಟ್ಟಲೆ ಪ್ರತೀ ದಿನ ಜಾಹಿರಾತು ನೀಡಿ ಕೋಟಿಗಟ್ಟಲೆ ನೀರಿನಂತೆ ಹಣ ಚೆಲ್ಲಲಾಯಿತು. ಸಾವಿರ, ಸಾವಿರ ಸಂಖ್ಯೆಯಲ್ಲಿ ಬೃಹತ್ ಗಾತ್ರದ ಜಾಹಿರಾತು ಬೋಡ್ ಗಳನ್ನು, ಹಾಕಲಾಯಿತು. ಸರಕಾರದ ಎಲ್ಲಾ ಇಲಾಖೆಗಳೂ, ಎಲ್ಲಾ ಶಿಕ್ಷಣ ಸಂಸ್ಥೆಗಳು, ಖಾಸಗಿ ಆಸ್ಪತ್ರೆಗಳು ಕೈಗಾರಿಕೆಗಳಿಂದ ಬ್ಯಾನರ್ ಹಾಕಿಸಿ ಪ್ರಚಾರ ಮಾಡಲಾಯಿತು. ರ್‍ಯಾಲಿಗೆ ಹೊರಟು ಬಂದ ಜನರಿಗೆ ಬೆಳಗಿನ ಉಪಾಹಾರ ಮತ್ತು ಇತರೆ ವ್ಯವಸ್ಥೆ ಮಾಡಬೇಕೆಂದು ಸುತ್ತೋಲೆಯನ್ನೇ ಹೊರಡಿಸಲಾಗಿತ್ತು. ಜಿಲ್ಲಾಡಳಿತದಿಂದ ಸಭೆಗೆ ಬಂದಂತಹ ಜನರಿಗೆ ಆಹಾರದ ವ್ಯವಸ್ಥೆ ಮಾಡಲಾಗಿತ್ತು.

ಬಿಜೆಪಿ ರ್‍ಯಾಲಿಯಲ್ಲಿ ಸುಮಾರು 5 ಲಕ್ಷ ಜನ ಸೇರಿದ್ದಾರೆಂದು ಪ್ರಚಾರ ಮಾಡಲಾಯಿತು. ಪತ್ರಿಕೆಗಳಲ್ಲಿ ಸುಮಾರು ಒಂದೂವರೆ ಲಕ್ಷ ಜನ ಉಪಾಹಾರ ಸೇವಿಸಿದ್ದಾರೆ ಎಂದು ಪ್ರಕಟಿಸಲಾಗಿದೆ. ಆದರೆ ಬಿಜೆಪಿ ಸಂಘಪರಿವಾರದ ಸಾಮಾಜಿಕ ಮಾಧ್ಯಮದಲ್ಲಿ ಕೇವಲ 50,000 ಜನರಿಗೆ ಉಪಾಹಾರದ ವ್ಯವಸ್ಥೆ ಮಾಡಲಾಗಿತ್ತೆಂದು ಒಂದು ವರದಿ ಹೇಳುತ್ತಿದೆ. ಜಿಲ್ಲೆಯಾದ್ಯಂತ ಎಷ್ಟೋ ಬಸ್ಸುಗಳು ಜನರಿಲ್ಲದೆ ರದ್ದಾದುದು, ನೂರಾರು ಬಸ್ಸುಗಳಲ್ಲಿ ಅರ್ಧ ಭಾಗದಷ್ಟೇ ಜನರಿದ್ದುದು. ನೂರಾರು ಬಸ್ಸುಗಳು ಕೇವಲ ಹತ್ತರಿಂದ ಹದಿನೈದು ಜನರೊಂದಿಗೆ ರ್‍ಯಾಲಿಗೆ ಬಂದುದ್ದು, ಅಧಿಕೃತವಾಗಿ ಕೆ.ಅಸ್. ಆರ್.ಟಿ.ಸಿ ಯ ಎರಡು ಸಾವಿರ ಬಸ್ಸುಗಳನ್ನು ಬುಕ್ ಮಾಡಲಾಗಿದೆ ಎಂದು ಹೇಳಲಾಗಿದ್ದರೂ, ರ್‍ಯಾಲಿಗೆ ಸಂಬಂಧಿಸಿದ ಸುದ್ದಿಯೊಂದಿಗೆ ಬಿತ್ತರಿಸಲಾದ ಕೆ.ಅಸ್.ಆರ್.ಟಿ.ಸಿ ಯ ಪ್ರಕಾರ ಕೇವಲ 1500 ಬಸ್ಸುಗಳನ್ನು ಮಾತ್ರ ಉಪಯೋಗಿಸಲಾಗಿದೆ ಎಂಬ ಅಧಿಕೃತ ಸುದ್ಧಿ ಮತ್ತು ಬಿಜೆಪಿ ಹಾಕಿರುವ ಪೆಂಡಾಲ್ ನಲ್ಲಿ ಭಾಗವಹಿಸಬಹುದಾದ ಗರಿಷ್ಟ ಸಂಖ್ಯೆಯ ಹಿನ್ನೆಲೆಯಿಂದ ಗಮನಿಸುವುದಾದರೆ ಸುಮಾರು 50,000–60,000 ದಷ್ಟು ಜನ ಭಾಗವಹಿಸಿರುವ ಸಾಧ್ಯತೆ ಇದೆ.

ವಿಶ್ವ ಗುರು ಭಾಷಣ ಆರಂಭಿಸಿ 28 ನಿಮಿಷಗಳ ಭಾಷಣದ ಅವಧಿಯಲ್ಲಿ ಹತ್ತೇ ನಿಮಿಷಗಳು ಮುಗಿಯಬೇಕಾದರೆ ಸುಮಾರು 25% ಭಾಗ ಸಭಾಂಗಣದಿಂದ ಹೊರನಡೆದುದು ತೀವ್ರ ಮುಖಭಂಗದ ಘಟನೆಯಾಗಿದೆ. ಇದು ಬಿಜೆಪಿಯ ನಾಯಕರಿಗೆ ಅರಿವು ಆಗಿರುವುದರಿಂದಲೇ ಅನಂತರ ಈ ಬಗ್ಗೆ ಯಾರೂ ಚಕಾರವೆತ್ತುತ್ತಿಲ್ಲ.

ಅಸಲಿ ಕಾರಣ

ಕಳೆದ ಕೆಲವು ತಿಂಗಳುಗಳಿಂದ ಬಿಜೆಪಿ ಮತ್ತು ಸಂಘಪರಿವಾರದ ಮಧ್ಯೆ ಬೆಳೆದು ಬಂದ ಬಿಕ್ಕಟ್ಟು, ಬಿಜೆಪಿಯ ಜಿಲ್ಲಾ ನಾಯಕರುಗಳ ಮಧ್ಯೆ ಇದ್ದ ವೈಮನಸ್ಸು, ಕಾಲೆಳೆಯುವ ಪ್ರಕ್ರಿಯೆ, ಬಿಜೆಪಿ ನಾಯಕರು, ಜನಪ್ರತಿನಿಧಿಗಳು ಮತ್ತು ಕಾರ್ಯಕರ್ತರ ಮಧ್ಯೆ ನಡೆಯುತ್ತಿದ್ದ ಶೀತಲ ಸಮರ, ಕೊರಳಿಗೆ



ಕೈಕಾಕಿ ನಡೆದ ಜಿದ್ದಾ ಜಿದ್ದಿ, ಇತ್ತೀಚೆಗೆ ನಡೆದ ಕೆಲವು ಹತ್ಯಾ ಘಟನೆಗಳ ಬಗ್ಗೆ ಭೆಳೆದು ಬಂದ ಕಾರ್ಯಕರ್ತರ ಆಕ್ರೋಶ, ಜನಪ್ರತಿನಿಧಿಗಳು ನಡೆಸುತ್ತಿರುವ ವ್ಯಾಪಕ ಭೃಷ್ಟಾಚಾರ, ಸರಕಾರಿ ಇಲಾಖೆಯಲ್ಲಿ ಹಸ್ತಕ್ಷೇಪ, ಇವೆಲ್ಲವುಗಳು ಬಿಜೆಪಿಗೆ ಮಗ್ಗುಲ ಮುಳ್ಳಾಗಿ ತಿವಿಯುತ್ತಿರುವಾಗ ಕಂಡುಕೊಂಡ ವ್ಯಾಧಿ ಶಮನಕಾರಿ ತಂತ್ರವೇ ಮೋಡಿಯವರಿಂದ ಈ ಭಸ್ಮ ಸಿಂಪರಣೆ ಕಾರ್ಯಕ್ರಮ! ಅದಕ್ಕಾಗಿ ಆಡಳಿತ ಯಂತ್ರವನ್ನು ನಾಚಿಕೆ ಇಲ್ಲದೇ ಬಳಸಿಕೊಂಡು ಖಜಾನೆಯಿಂದ ಕೋಟ್ಯಾಂತರ ರೂಪಾಯಿ ಬಳಸಿಕೊಂಡಿದ್ದು. ಸರಕಾರಿ ಕಾರ್ಯಕ್ರಮದ ಬಹಿರಂಗ ವೇದಿಕೆಯ ಸ್ಟೇಜ್ ನಲ್ಲಿ ಬಿಜೆಪಿಯ ಹೆಸರು, ಬಾವುಟ ಮಾತ್ರ ಇರಲಿಲ್ಲ. ಆದರೆ ಉಳಿದ ಎಲ್ಲಾ ವಾಹನಗಳಲ್ಲಿ ಬಿಜೆಪಿ ಬಾವುಟ, ಘೋಷಣೆ, ಬಿಜೆಪಿ ಬ್ಯಾನರ್ಗಳನ್ನು ಹಾಕಲಾಗಿತ್ತು.

ರಂಗ ತಾಲೀಮು

ಈ ಕಾರ್ಯಕ್ರಮವನ್ನು ನಿರ್ವಹಿಸಿದ ಸ್ವರೂಪವನ್ನು ಗಮನಿಸುವಾಗ, ಮುಂಬರುವ ಚುನಾವಣೆಗಳು ಯಾವ ರೀತಿ ಬಿಜೆಪಿಯ ಪರವಾದ ಬ್ಯಾಟಿಂಗ್ ಸರಕಾರಿ ಯಂತ್ರದಿಂದ ಆಗಬಹುದೆಂಬುದಕ್ಕೆ ರಂಗತಾಲೀಮು ಆಗಿದೆ. ಚುನಾವಣೆಯು ನಿಷ್ಪಕ್ಷಪಾತವಾಗಿ ನಡೆಯಬಹುದೆಂದು ನಿರೀಕ್ಷಿಸುವುದು ಸರಿಯಲ್ಲ. ಸರಕಾರಿ ಕಚೇರಿಗಳಲ್ಲಿ, ಬ್ಯಾಂಕ್‌ಗಳಲ್ಲಿ, ಇತರೆ ಇಲಾಖೆಗಳಲ್ಲಿ ಮೋಡಿಯವರ ಭಾಷಣವನ್ನು ವೀಕ್ಷಿಸಲು ಮುಕ್ತ ಅವಕಾಶವನ್ನು ಅಧಿಕಾರಿಗಳು ಕಲ್ಪಿಸಿರುವುದು., ಇವೆಲ್ಲವುಗಳು ಇನ್ನೊಂದು ರೀತಿಯಲ್ಲಿ ಹೇಳುವುದಾದರೆ, ಸಂಘಪರಿವಾರದ ಪಡೆಯೇ ಇರುವುದನ್ನು ಇದು ತೋರಿಸುತ್ತದೆ.

ಹುಸಿ ಪ್ರಚಾರ

ಬೆಲೆ ಏರಿಕೆ, ನಿರುದ್ಯೋಗದ ಬಗ್ಗೆ ಚಕಾರ ವೆತ್ತದೆ ಪ್ರಧಾನಿಯವರು ಲೋಕಾರ್ಪಣೆ ಮಾಡಿದ ಯೋಜನೆಗಳಿಂದ ಒಟ್ಟಾರೆಯಾಗಿ ಹತ್ತು ಸಾವಿರ ಜನರಿಗೆ ಉದ್ಯೋಗ ಲಭಿಸುವುದೆಂಬ ಪತ್ರಿಕಾ ಹೇಳಿಕೆ ಅವಾಸ್ತವಿಕ. ಅದಕ್ಕಿಂತಲೂ ಮುಖ್ಯವಾಗಿ ಲೋಕಾರ್ಪಣೆಗೊಂಡ ಯೋಜನೆಗಳಲ್ಲಿ ಹಲವಾರು ಈ ಮೊದಲೇ ಆಗಿರುವಂಥಹವು. ಮತ್ತೆ ಕೆಲವು ಇಲಾಖೆಯೇ ಜ್ಯಾರಿಗೊಳಿಸುವ ಸಾಮಾನ್ಯ ಯೋಜನೆಗಳು. ಪ್ರಾರಂಭದಲ್ಲಿ ಸುಮಾರು 1200 ಕೋಟಿ ರೂಪಾಯಿಗಳ ಯೋಜನೆಯ ಲೋಕಾರ್ಪಣೆ ಎಂದು ಪ್ರಚಾರ ಮಾಡಲಾಯಿತು. ಅನಂತರ 2000 ಕೋಟಿ ಎಂದು ಹೇಳಲಾಯಿತು. ಕೊನೆಗೆ ಪತ್ರಿಕೆಗಳ ಜಾಹಿರಾತಿನಲ್ಲಿ ಸುಮಾರು 3800 ಕೋಟಿ ರೂಪಾಯಿ ಯೋಜನೆ ಎಂದು ಹೇಳಲಾಯಿತು. ಒಟ್ಟಿನಲ್ಲಿ ಸುಳ್ಳು ಮಾಹಿತಿ ನೀಡಿ ಜನರನ್ನು ತಪ್ಪುದಾರಿಗೆ ಸೆಳೆಯಲಾಯಿತು.

ಬಂದ್, ಬಲವಂತದ ಬಂದ್

ಕಾರ್ಯಕ್ರಮ ನಡೆದ ಸುತ್ತಮುತ್ತಲ ಪ್ರದೇಶವನ್ನು ಬಂದ್ ಮಾಡಿ ನಾಗರೀಕರ ಚಲನವಲನಗಳಿಗೆ ತಡೆ ಒಡ್ಡಲಾಯಿತು. ವಸ್ತುಶಃ ಯುದ್ಧ ವಲಯದಂತೆ ಪೊಲೀಸ್ ರಾಜ್ಯವನ್ನು ಮಾಡಲಾಯಿತು. ಮಂಗಳೂರು ನಗರದಲ್ಲಿ ಪ್ರಮುಖ ರಸ್ತೆಗಳನ್ನು ಬಂದ್ ಮಾಡಿ ಸಿಟಿ ಬಸ್ಸುಗಳಿನ್ನು ಸಂಚರಿಸದಂತೆ ತಡೆಹಿಡಿಯಲಾಯಿತು. ಅಂಗಡಿ ಮುಂಗಟ್ಟುಗಳನ್ನು ಬಲವಂತದಿಂದ ಬಂದ್ ಮಾಡಲಾಯಿತು.

ಒಟ್ಟಿನಲ್ಲಿ ಬಿಜೆಪಿ ಸಂಘಪರಿವಾರದ ಹಿಡನ್ ಅಜೆಂಡಾವನ್ನು ಒಳಗೊಂಡಂತೆ ಅವರು ಜನ ಸೇರಿಸುವ ಎಲ್ಲಾ ಪ್ರಯತ್ನಗಳು ವಿಫಲವಾಗಿದೆ. ಇದರ ಬಗ್ಗೆ ಅನಂತರ ಸುದ್ಧಿ ಮಾಧ್ಯಮಗಳಲ್ಲಿ, ಸಾಮಾಜಿಕ ಜಾಲತಾಣದಲ್ಲಿ ಬಂದಂತಹ ವಿವರಗಳು ವೈಫಲ್ಯತೆಗೆ ಸಾಕ್ಷಿಗಳಾಗಿವೆ. ಜನರಲ್ಲಿ ಆಕ್ರೋಶ ಮಡುಗಟ್ಟಿರುವುದರ ದ್ಯೋತಕವೂ ಅಭಿವ್ಯಕ್ತ ಗೊಂಡಿರುವ ಘಟನೆ ಇದಾಗಿದೆ. ■

ಪ್ರತೀ ವರುಷ ಎರಡು ಕೋಟಿ ಉದ್ಯೋಗ ಸೃಷ್ಟಿಸುತ್ತೇವೆಂದು ಚುನಾವಣಾ ಪೂರ್ವ ಭರವಸೆ ನೀಡಿ ಅಧಿಕಾರಕ್ಕೇರಿದ ನರೇಂದ್ರ ಮೋದಿ ನೇತೃತ್ವದ ಬಿಜೆಪಿ ಸರಕಾರ ಈವರೆಗೆ ಯಾವ ಉದ್ಯೋಗವನ್ನೂ ಸೃಷ್ಟಿಸದೆ ಈ ಅವಧಿಯಲ್ಲಿ ನಿರುದ್ಯೋಗ ಪ್ರಮಾಣ ಈ ಹಿಂದೆ ಕಂಡು ಕೇಳರಿಯದಷ್ಟು ಪ್ರಮಾಣದಲ್ಲಿ ಏರಿಕೆಯಾಗಿದೆ. ಮೊನ್ನೆ ಪ್ರಧಾನಿ ಮಂಗಳೂರಿಗೆ ಭೇಟಿ ನೀಡಿದ ಸಂದರ್ಭದಲ್ಲೂ ಹಲವು ಯೋಜನೆಗಳಿಗೆ ಚಾಲನೆ ನೀಡಿದರೂ ಅಂತಹ ಯೋಜನೆಗಳಲ್ಲಿ ಜಿಲ್ಲೆಯ ಯುವಜನತೆಗಾಗುವ ಯಾವ ಪ್ರಯೋಜನಗಳೂ ನಿರ್ಮಾಣಗೊಂಡಿಲ್ಲ. ಕೇವಲ ಸಾರ್ವಜನಿಕ ರಂಗದ ಉದ್ದಿಮೆಗಳನ್ನು ಕಾರ್ಪೊರೇಟ್ ಕಂಪೆನಿಗಳಿಗೆ ಮಾರಾಟ ಮಾಡಿ ಬಂಡವಾಳಶಾಹಿಗಳ ಹಿತಾಸಕ್ತಿಯನ್ನು ಕಾಪಾಡಿಕೊಳ್ಳುವ ಮೂಲಕ ಜನವಿರೋಧಿ ಆಡಳಿತವನ್ನು ನಡೆಸಲಾಗುತ್ತಿದ್ದೆ. ಮೋದಿ ಸರಕಾರದ ಆಡಳಿತ ನೀತಿಗಳ ಬಗ್ಗೆ, ಕೋಮು ರಾಜಕಾರಣದ ವಿರುದ್ಧ ಮೊಳಗುವ ಧ್ವನಿಗಳನ್ನು ಹತ್ತಿಕ್ಕುವ ಪ್ರಯತ್ನವನ್ನು ನಿರಂತರವಾಗಿ ನಡೆಸುತ್ತಿದ್ದಾರೆ. ನಿರುದ್ಯೋಗ ಅನ್ನೋದು ಈಗ ದೇಶದ ಗಂಭೀರ ಸಮಸ್ಯೆಯಾಗಿದ್ದು ದೇಶದ ಯುವಜನತೆ ಉದ್ಯೋಗದ ಹಕ್ಕಿಗಾಗಿ ರಾಜಿರಹಿತ ಹೋರಾಟ ನಡೆಸಲು ಮುಂದಾಗಬೇಕಾಗಿದೆ.

ಮುಖ್ಯ ಅತಿಥಿಗಳಾಗಿ **DYFI** ಮಂಗಳೂರು ನಗರ ಅಧ್ಯಕ್ಷ ನವೀನ್ ಕೊಂಚಾಡಿ ಮಾತನಾಡಿದರು. ಸಭೆಯ ಅಧ್ಯಕ್ಷತೆಯನ್ನು ಖಾದರ್ ಬೋರುಗುಡ್ಡೆ ವಹಿಸಿದ್ದರು. ಈ ಸಂದರ್ಭದಲ್ಲಿ ನೂತನ ಸಮಿತಿಯನ್ನು ರಚಿಸಲಾಯಿತು. ಅಧ್ಯಕ್ಷರಾಗಿ ಸಾಧಿಕ್ ಕಣ್ಣೂರು ಕಾರ್ಯದರ್ಶಿಯಾಗಿ ಹಾರೀಸ್ ಕುಂಡಾಲ ಮತ್ತು ಪದಾಧಿಕಾರಿಗಳನ್ನು ಆಯ್ಕೆಮಾಡಲಾಯಿತು. ■

ಉಚಿತ ಕೊಡುಗೆ ಮತ್ತು ಅಭಿವೃದ್ಧಿ

ಜನ ಸಾಮಾನ್ಯರಿಗೆ ಅತೀ ಕಡಿಮೆ ಸವಲತ್ತು ನೀಡಿ ಚುನಾಣೆ ಗೆಲ್ಲ ಬಯಸುವ ಪಕ್ಷ (ಬಿಜೆಪಿ) ಮತ್ತು ಇಂತಹ ಸವಲತ್ತುಗಳ ಬಲದಲ್ಲೇ ಚುನಾವಣೆ ಗೆಲ್ಲುವ ಪಕ್ಷಗಳ (ಎಎಪಿ. ಡಿಎಂಕೆ) ನಡುವೆ ಉಚಿತ ಕೊಡುಗೆ ಕುರಿತು ಪರ ವಿರೋಧ ವಾಗ್ವಾದ ನಡೆದಿದೆ. ಉಚಿತ ಕೊಡುಗೆ ಎಂದರೇನು? ಕಲ್ಯಾಣಯೋಗ್ಯ ಮತ್ತು ಕಲ್ಯಾಣಯೋಗ್ಯವಲ್ಲದ ಉಚಿತ ಕೊಡುಗೆಗಳೆನ್ನುವ ವಿಂಗಡನೆ ಸಾಧ್ಯವೇ? ಉಚಿತ ಕೊಡುಗೆಗಳನ್ನು ನೀಡುವುದರಿಂದಲೇ ರಾಜ್ಯ ಸರಕಾರಗಳ ಹಣಕಾಸು ಸ್ಥಿತಿ ಬಿಗಾಡಯಿಸಿದೆಯೇ? ಬಡವರು ಮಾತ್ರ ಉಚಿತ ಕೊಡುಗೆಯನ್ನು ಅನುಭವಿಸುದೇ? ಶ್ರೀಮಂತರು ಉಚಿತ ಕೊಡುಗೆಗಳನ್ನು ಅನುಭವಿಸುವುದಿಲ್ಲವೇ? ಇತ್ಯಾದಿ ಪ್ರಶ್ನೆಗಳ ಸುತ್ತಾ ಈ ಲೇಖನದ ಚರ್ಚಿ ಇದೆ. ಚರ್ಚೆ ಆರಂಭಿಸುವ ಮುನ್ನ ಉಚಿತ ಕೊಡುಗೆಗಳನ್ನು ಕೊಟ್ಟು ಚುನಾವಣೆ ಗೆಲ್ಲುವ ಅನಿವಾರ್ಯತೆ ಏಕೆ ಸೃಷ್ಟಿ ಆಗಿದೆ? ಉಚಿತ ಕೊಡುಗೆ ಮತ್ತು ಅಭಿವೃದ್ಧಿ ಸಂಬಂಧವೇನು? ಎನ್ನುವ ಎರಡು ವಿಷಯಗಳ ಸ್ಪಷ್ಟವಾದರೆ ಈ ಚರ್ಚೆಯನ್ನು ಅರ್ಥಮಾಡಿಕೊಳ್ಳುವುದು ಸುಲಭ.

ಅತಿಥಿ ಅಂಕಣ



ಪ್ರೊ.ಎಂ.ಚಂದ್ರ ಪೂಜಾರಿ

ಸಾಮರ್ಥ್ಯದ ಪ್ರಶ್ನೆ


ಇಂದಿನ ಸರಕಾರಗಳು ವಿವಿಧ ಅಭಿವೃದ್ಧಿ ಕಾರ್ಯಕ್ರಮಗಳ ಮೇಲೆ ಮಾಡುವ ಕೋಟಿಗಟ್ಟಲೆ ವಿನಿಯೋಜನೆ ಬಗ್ಗೆ ಪ್ರಚಾರ ಮಾಡುತ್ತವೆ. ಆದರೆ ಇವರು ಕೋಟಿಗಟ್ಟಲೆ ಸುರಿದು ನಡೆಸುವ ಅಭಿವೃದ್ಧಿ ಕಾರ್ಯಕ್ರಮಗಳನ್ನು ಅನುಭವಿಸಲು ಅಥವಾ ಜೀರ್ಣಿಸಿಕೊಳ್ಳಲು ಜನರಿಗೆ ಶಕ್ತಿ ಇದೆಯೇ ಎನ್ನುವುದನ್ನು ಚರ್ಚಿಸುವುದಿಲ್ಲ. ಇಂದಿನ ಅಭಿವೃದ್ಧಿಯನ್ನು ಜೀರ್ಣಿಸಿಕೊಳ್ಳಲು ಭೂಮಿ ಅಥವಾ ಬಂಡವಾಳ ಅಥವಾ ಶಿಕ್ಷಣ ಆರೋಗ್ಯಗಳು ಬೇಕು. ಇವುಗಳಲ್ಲಿ ಯಾವುದಾದರೂ ಒಂದು ಶಕ್ತಿ ಇದ್ದರೆ ಜನರು ತಮ್ಮ ಊಟ, ವಸತಿ, ಕುಡಿಯುವ ನೀರು, ಶೌಚಾಲಯ ಇತ್ಯಾದಿ ಮೂಲಸೌಕರ್ಯಗಳನ್ನು ದುಡಿದು ಗಳಿಸುತ್ತಾರೆ. ಆದರೆ ಇಂದು ಕಾರುಬಾರು ಮಾಡುವ ರಾಜಕೀಯ ಪಕ್ಷಗಳಲ್ಲಿ ಭೂಮಿ ಅಥವಾ ಬಂಡವಾಳ ಕೊಡುವ ಅಥವಾ ಗುಣಮಟ್ಟದ ಶಿಕ್ಷಣ ಆರೋಗ್ಯ ಕೊಟ್ಟು ಜನರ ಸಾಮರ್ಥ್ಯ ವೃದ್ಧಿಸುವ ಕಾರ್ಯಕ್ರಮಗಳಿಲ್ಲ. ಅದರ ಬದಲು ಅಕ್ಕಿ ಕೊಡುವ, ಬಿಸಿಯೂಟ ಕೊಡುವ, ಟಿವಿ ಕೊಡುವ, ಗ್ಯಾಸ್ ಕೊಡುವ, ವಿದ್ಯುತ್ ಕೊಡುವ, ಲ್ಯಾಪ್ ಕೊಡುವ ಕಾರ್ಯಕ್ರಮಗಳಿವೆ.

ಇಂದು ರಾಜಕೀಯ ಸ್ಥಿತಿ ಇನ್ನೂ ಬಿಗಾಡಯಿಸಿದೆ. ಇಂತಹ ಕಾರ್ಯಕ್ರಮಗಳನ್ನು ಕೊಟ್ಟು ಮತ ಕೇಳುವ ಪಕ್ಷಗಳು ಮತ್ತು ಕೊಡದೆ ಮತ ಕೇಳುವ ಪಕ್ಷಗಳ ನಡುವೆ ಪೈಪೋಟಿ ನಡೆದಿದೆ. ಹಿಂದುತ್ವದ ಬಲದಲ್ಲಿ ಚುನಾವಣೆ ಗೆಲ್ಲುವ ಬಿಜೆಪಿ ಪಕ್ಷದ ದೃಷ್ಟಿಯಿಂದ ಮೇಲಿನ ಸವಲತ್ತುಗಳನ್ನು ಕೊಡುವುದು ವೇಸ್ಟ್‌ಫುಲ್ ಖರ್ಚುಗಳು, ಇವುಗಳು ನಮ್ಮ ಜಿಡಿಪಿಯನ್ನು ವೃದ್ಧಿಸುವುದಿಲ್ಲ. ಅಷ್ಟು ಮಾತ್ರವಲ್ಲ ರಾಜ್ಯದ ಹಣಕಾಸು ಸ್ಥಿತಿಯನ್ನು ಬಿಗಾಡಯಿಸುತ್ತಿವೆ. ಈ ಸವಲತ್ತುಗಳನ್ನು ನೀಡುವ ಪಕ್ಷಗಳ ದೃಷ್ಟಿಯಿಂದ ಅಭಿವೃದ್ಧಿಯ ಅಂತಿಮ ಗುರಿ ಜನರ ಜೀವನಮಟ್ಟ ಸುಧಾರಿಸುವುದು. ಅದನ್ನು ಜಿಡಿಪಿ ಹೆಚ್ಚಿಸಿ ಮಾಡಬಹುದು ಅಥವಾ ಜನರಿಗೆ ಮೂಲಸೌಕರ್ಯಗಳನ್ನು ಕೊಡುವ ಮೂಲಕನೂ ಮಾಡಬಹುದು. ಈ ಹಿನ್ನೆಲೆಯಲ್ಲಿ ಉಚಿತ ಕೊಡುಗೆ ಎಂದರೇನು? ಎನ್ನುವುದನ್ನು ಮೊದಲು ನೋಡುವ.

ಸರಕಾರಗಳು ಜನರಿಗೆ ಅದರಲ್ಲೂ ಬಡವರಿಗೆ ಉಚಿತವಾಗಿ ನೀಡುವ ಸವಲತ್ತುಗಳನ್ನು ಉಚಿತ ಕೊಡುಗೆ ಎನ್ನುವ ಚರ್ಚೆ ಇದೆ. ಈ ಸಾಲಿನಲ್ಲಿ ಉಚಿತ ಶಿಕ್ಷಣ, ಆರೋಗ್ಯ, ಮಧ್ಯಾಹ್ನದ ಬಿಸಿಯೂಟ, ಬಿಸಿ ಊಟದೊಂದಿಗೆ ನೀಡುವ ಮೊಟ್ಟೆ, ಹಾಲು, ವಸತಿ, ಕುಡಿಯುವ ನೀರು, ವಿದ್ಯುತ್, ಸಾಲ ಮನ್ನಾ, ಟಿವಿ, ಲ್ಯಾಪ್‌ಟಾಪ್, ಬೈಸಿಕಲ್, ಶೌಚಾಲಯ ಇತ್ಯಾದಿಗಳನ್ನು ಉಚಿತ ಕೊಡುಗೆಗಳೆಂದು ವಿಂಗಡಿಸುತ್ತಾರೆ. 15ನೇ ಹಣಕಾಸು ಸಮಿತಿ ಅಧ್ಯಕ್ಷರಾದ ಎನ್.ಕೆ.ಸಿಂಗ್ ಪ್ರಕಾರ ಉಚಿತ ಕೊಡುಗೆಗಳಲ್ಲಿ ಕಲ್ಯಾಣ್ಯಯೋಗ್ಯ ಮತ್ತು ಕಲ್ಯಾಣಯೋಗ್ಯವಲ್ಲದ ಉಚಿತ ಕೊಡುಗೆಗಳಿವೆ. ರೇಷನ್, ಉದ್ಯೋಗ ಖಾತರಿ ಯೋಜನೆ, ಶಿಕ್ಷಣ, ಆರೋಗ್ಯ ಇವೆಲ್ಲ ಕಲ್ಯಾಣಯೋಗ್ಯ ಕೊಡುಗೆಗಳು. ಉಳಿದವು (ವಸತಿ, ಕುಡಿಯುವ ನೀರು, ವಿದ್ಯುತ್, ಸಾಲ ಮನ್ನಾ, ಟಿವಿ, ಲ್ಯಾಪ್‌ಟಾಪ್, ಬೈಸಿಕಲ್, ಶೌಚಾಲಯ ಇತ್ಯಾದಿಗಳು) ಕಲ್ಯಾಣಯೋಗ್ಯವಲ್ಲದ ಕೊಡುಗೆಗಳು. ಕಲ್ಯಾಣಯೋಗ್ಯ ಎಂದರೆ ಆರ್ಥಿಕ ಕ್ಷೇತ್ರಕ್ಕೆ ಕೊಡುಗೆ ನೀಡುವ ಅಥವಾ ಪ್ರೊಡಕ್ಟಿವ್ ಕೊಡುಗೆಗಳು. ಕಲ್ಯಾಣಯೋಗ್ಯವಲ್ಲದ ಎಂದರೆ ಆರ್ಥಿಕ ಚಟುವಟಿಕೆಗೆ ಕೊಡುಗೆ ಇಲ್ಲದ ಅಥವಾ ಅನ್‌ಪ್ರೊಡಕ್ಟಿವ್ ಕೊಡುಗೆಗಳು. ಪ್ರಧಾನಿ ಮೋದಿಯವರ ಪ್ರಕಾರ ಚತುಷ್ಪತ ರಸ್ತೆ, ವಿಮಾನ ನಿಲ್ದಾಣ, ಡಿಫೆನ್ಸ್ ಕಾರಿಡಾರ್‌ಗಳನ್ನು ನಿರ್ಮಿಸುವುದು ಪ್ರೊಡಕ್ಟಿವ್ ಇನ್‌ವೆಸ್ಟ್‌ಮೆಂಟ್. ಬಡ ಮಕ್ಕಳಿಗೆ ಮಧ್ಯಾಹ್ನದ ಬಿಸಿಯೂಟ ಕೊಡುವುದು, ಲ್ಯಾಪ್‌ಟ್ಯಾಪ್ ಕೊಡುವುದು, ಮೊಟ್ಟೆ ಕೊಡುವುದು ಇವೆಲ್ಲ ಅನುಪಯುಕ್ತ ಎಂದು ಅವರು ಹೇಳಿಲ್ಲ. ಹಾಗೆಂದು ಉಪಯುಕ್ತವೆಂದು ಹೇಳಿಲ್ಲ.

ಆರ್‌ಬಿಐ ಪ್ರಕಾರ ಕಲ್ಯಾಣಯೋಗ್ಯವಲ್ಲದ ಕೊಡುಗೆಗಳು ನಮ್ಮ ಅರ್ಥ ವ್ಯವಸ್ಥೆ ಮೇಲೆ ನಕರಾತ್ಮಕ ಪರಿಣಾಮ ಬೀರುತ್ತವೆ. ರೈತರ ಸಾಲಮನ್ನಾ ಕ್ರೆಡಿಟ್ ಕಲ್ಚರನ್ನು ನಾಶ ಮಾಡುತ್ತದೆ. ಕ್ರೆಡಿಟ್ ಕಲ್ಚರ್ ಅಂದರೆ ತೆಗೆದುಕೊಂಡ ಸಾಲವನ್ನು ಬಡ್ಡಿ ಸಮೇತ ಕಟ್ಟುವ ಕಲ್ಚರ್. ಸಾಲ ಮನ್ನಾ ಮಾಡುವುದರಿಂದ ಸಾಲ ಕಟ್ಟುವ ಅಗತ್ಯ ಇಲ್ಲ ಎನ್ನುವ ಸಂದೇಶ ಹೋಗುತ್ತದೆ. ಉಚಿತ ಟಿವಿ, ಲ್ಯಾಪ್‌ಟಾಪ್ ಇತ್ಯಾದಿಗಳು ಈ ಕ್ಷೇತ್ರಗಳಲ್ಲಿ ಬಂಡವಾಳ ಹೂಡುವವರನ್ನು ಹೊರಗಿಡುತ್ತವೆ. ಅಂದರೆ ಒಂದು ವೇಳೆ ಸರಕಾರವನ್ನು ಉಚಿತ ನೀಡದಿದ್ದರೆ ಜನರು ಮಾರುಕಟ್ಟೆಯಲ್ಲಿ ಇವನ್ನು ಖರೀದಿಸಬೇಕು. ಖರೀದಿಸುವವರು ಇರುವಾಗ ಪೂರೈಕೆ ಮಾಡಲು ಖಾಸಗಿ ಬಂಡವಾಳ ಮುಂದಕ್ಕೆ ಬರುತ್ತದೆ. ಉಚಿತ ನೀಡುವುದರಿಂದ ಮಾರುಕಟ್ಟೆ ಖರೀದಿ ಅನುಭೋಗಿಸುವವರ ಸಂಖ್ಯೆ ಕಡಿಮೆ ಆಗುತ್ತದೆ ಅಥವಾ ಡಿಮ್ಯಾಂಡ್ ಕಡಿಮೆ ಆಗುತ್ತದೆ. ಡಿಮ್ಯಾಂಡ್ ಕಡಿಮೆ ಆದರೆ ಖಾಸಗಿ ಬಂಡವಾಳಿಗರು ಹೂಡಿಕೆ ಮಾಡುವುದು ಕಡಿಮೆ ಆಗುತ್ತದೆ ಎನ್ನುವ ವಾದ. ಇದರ ಜೊತೆಗೆ ಆರ್‌ಬಿಐ ಅನುಕೂಲಸ್ಥರು





ಮಾಡುವ ಮತ್ತೊಂದು ವಾದವನ್ನು ಮುಂದಿಟ್ಟಿದೆ. ಅದೇನೆಂದರೆ ಬಡವರಿಗೆ ಎಲ್ಲವನ್ನು ಉಚಿತ ಕೊಟ್ಟರೆ ಅವರು ದುಡಿಯುವ ಉತ್ಸಾಹ ಕಳೆದುಕೊಳ್ಳುತ್ತಾರೆ. ಇದು ನಮ್ಮ ವೇಜ್ ರೇಟ್ (ಕೂಲಿ ಮೇಲೆ) ಮೇಲೆ ಪ್ರಭಾವ ಬೀರುತ್ತದೆ. ಅಂದರೆ ಉಚಿತ ಸವಲತ್ತುಗಳಿಂದ ದುಡಿಯುವವರ ಸಂಖ್ಯೆ ಕಡಿಮೆ ಆದರೆ ವೇಜ್ ರೇಟ್ ಜಾಸ್ತಿ ಆಗುತ್ತದೆ ಎನ್ನುವ ವಾದ.

ಮೇಲಿನ ವಾದವನ್ನು ತಮಿಳುನಾಡು ಸರಕಾರದ ಹಣಕಾಸು ಮಂತ್ರಿಗಳು ಒಪ್ಪುವುದಿಲ್ಲ. ಅವರ ಪ್ರಕಾರ ಯಾವುದು ವೆಲ್‌ಫೇರ್ ಯೋಗ್ಯ ಯಾವುದು ವೆಲ್‌ಫೇರ್ ಯೋಗ್ಯವಲ್ಲ ಎನ್ನುವುದನ್ನು ಕಾಲ ಸಂದರ್ಭಗಳು ನಿರ್ಣಯಿಸುತ್ತವೆ. ಮಧ್ಯಾಹ್ನದ ಬಿಸಿಯೂಟ ಕಾರ್ಯಕ್ರಮವನ್ನು 1950ರಲ್ಲಿ ಮೊದಲು ಆರಂಭಿಸಿದ್ದು ಮತ್ತು ನಂತರ 1982ರಲ್ಲಿ ಅದನ್ನೂ ಇನ್ನೂ ವಿಸ್ತರಿಸಿದ್ದು ತಮಿಳುನಾಡು. ಆವಾಗ ಅದನ್ನು ಓಟು ಬ್ಯಾಂಕ್ ಪೊಲಿಟಿಕ್ಸ್ ಎಂದು ಇಡೀ ದೇಶ ಖಂಡಿಸಿದೆ. ಆದರೆ 1995ರ ವೇಳೆಗೆ ಎಲ್ಲ ರಾಜ್ಯಗಳು ಬಿಸಿಯೂಟ ಕಾರ್ಯಕ್ರಮ ಅಗತ್ಯ ಎಂದು ಮನಗಂಡಿವೆ. ಕೃಷಿಕರಿಗೆ ನಗದು ವರ್ಗಾವಣೆ ಮಾಡುವ ಯೋಜನೆ ಮೊದಲು ತೆಲಂಗಾಣದಲ್ಲಿ ಬಂದದ್ದು. ಅದನ್ನು ಈಗ ಕೇಂದ್ರ ಸರಕಾರ ಇಡೀ ದೇಶಕ್ಕೆ ಅನ್ವಯಿಸಿದೆ. ಅಭಿವೃದ್ಧಿಯನ್ನು ಜಿಡಿಪಿಗೆ ಸಮೀಕರಿಸುವವರಿಗೆ ಬಡಜನರಿಗೆ ನೀಡುವ ಅಲ್ಪಸ್ವಲ್ಪ ಸವಲತ್ತುಗಳು ಉಚಿತ ಕೊಡುಗೆ ಅನ್ನಿಸಬಹುದು. ಆದರೆ ದೂರದೃಷ್ಟಿಯಿಂದ ನೋಡಿದರೆ ಇವೆಲ್ಲ ವೇಸ್ಟ್ ಅಲ್ಲ. ಬಿಸಿಯೂಟ ಕೊಡುವುದರಿಂದ ಬಡಮಕ್ಕಳು ಶಾಲೆಗೆ ಬರುವುದು ಹೆಚ್ಚಾಗಿದೆ, ಹಾಜರಾತಿ ಹೆಚ್ಚಾಗಿದೆ ಅಂದರೆ ಹೆಚ್ಚು ಹೆಚ್ಚು ಬಡಮಕ್ಕಳು ಶಿಕ್ಷಣ ಪಡೆಯಲು ಸಾಧ್ಯವಾಗಿದೆ.

ಅಷ್ಟು ಮಾತ್ರವಲ್ಲ ಪೌಷ್ಟಿಕಾಂಶದ ಕೊರತೆ ಮೆದುಳಿನ ಬೆಳವಣಿಗೆ ಮೇಲೂ ಪರಿಣಾಮ ಬೀರುತ್ತದೆ. ಇದರಿಂದ ಬಡಮಕ್ಕಳ ಬುದ್ಧಿಮತ್ತೆ (ಇಂಟಲಿಜನ್ಸ್ ಕೊಶ್ಯಂಟ್) ಮೇಲೂ ಪರಿಣಾಮ ಬೀರುತ್ತದೆ. ಬೆಳೆಯುವ ವಯಸ್ಸಿನಲ್ಲಿ ಮಕ್ಕಳಿಗೆ ಪೌಷ್ಟಿಕಾಂಶ ದೊರಕಿದರೆ ಅವರ ಬುದ್ಧಿಮತ್ತೆ ಬೆಳೆಯುತ್ತದೆ. ಅವರು ಇತರ ಅನುಕೂಲಸ್ಥ ಮಕ್ಕಳೊಂದಿಗೆ ಸ್ಪರ್ಧಿಸಿ ತಮ್ಮ ಜೀವನ ಕಟ್ಟಿಕೊಳ್ಳುತ್ತಾರೆ. ಇದರಿಂದ ನಮ್ಮ ದೇಶದ ಮಾನವ ಸಂಪನ್ಮೂಲದ ಗುಣಮಟ್ಟ ಹೆಚ್ಚುತ್ತದೆ. ಬಡವರಿಗೆ ಉಚಿತ ವಿದ್ಯುತ್ ಕೊಡುವುದರಿಂದ ಅವರು ದೀಪದ ಬೆಳಕಿನಲ್ಲಿ ಕೆಲಸ ಮಾಡುವುದು ಕಣ್ಣು ಕಳೆದುಕೊಳ್ಳುವುದು ತಪ್ಪುತ್ತದೆ. ಅದೇ ರೀತಿ ಉಚಿತ ಗ್ಯಾಸ್ ಕೊಡುವುದು ಬಡ ಮಹಿಳೆಯರು ದಿನಾ ಹೊಗೆ ಉಸಿರಾಡಿ ರೋಗಕ್ಕೆ ತುತ್ತಾಗುವುದನ್ನು ತಪ್ಪಿಸುತ್ತದೆ. ಜೊತೆಗೆ ಇವೆಲ್ಲ ಉಚಿತ ಅಲ್ಲ. ಏಕೆಂದರೆ ಕೇಂದ್ರ ಮತ್ತು ರಾಜ್ಯ ಸರಕಾರಗಳು ಸಂಗ್ರಹ ಮಾಡುವ ಪ್ರತಿ 100 ರುಪಾಯಿಯಲ್ಲಿ 62ರಿಂದ 65ರಷ್ಟು ಪರೋಕ್ಷ ತೆರಿಗೆಯಿಂದ ಬಂದರೆ ಕೇವಲ 35 ರೂಗಳು ನೇರ ತೆರಿಗೆಯಿಂದ ಬರುತ್ತದೆ. ನೇರ ತೆರಿಗೆಯನ್ನು ಆದಾಯ ಇದ್ದವರು ಮಾತ್ರ ಕಟ್ಟುವುದರಿಂದ ಅದನ್ನು ಅನುಕೂಲಸ್ಥರ ತೆರಿಗೆ ಎನ್ನಬಹುದು. ಪರೋಕ್ಷ ತೆರಿಗೆಯನ್ನು ಎಲ್ಲರೂ ಕಟ್ಟುವುದರಿಂದ ಮತ್ತು ನಮ್ಮಲ್ಲಿ ಶೇ.75ಕ್ಕಿಂತಲೂ ಹೆಚ್ಚು ಜನ ಅನನುಕೂಲಸ್ಥರು ಇರುವುದರಿಂದ ಪರೋಕ್ಷ ತೆರಿಗೆಯನ್ನು ಅನನುಕೂಲಸ್ಥರ ತೆರಿಗೆ ಎನ್ನಬಹುದು. ಆದುದರಿಂದ ಇವು ಉಚಿತ ಸವಲತ್ತುಗಳಲ್ಲ. ಬಡವರು ತೆರಿಗೆ ಕಟ್ಟುವುದೇ ಇಂತಹ ಅನುಕೂಲಗಳನ್ನು ಪಡೆಯಲು.

ಹಣಕಾಸು ಸ್ಥಿತಿ

ಮೂರನೇ ಪ್ರಶ್ನೆ ಉಚಿತ ಕೊಡುಗೆಗಳನ್ನು ಕೊಡುವುದರಿಂದಲೇ ರಾಜ್ಯಗಳ ಹಣಕಾಸು ಸ್ಥಿತಿ ಬಿಗಾಡಯಿಸಿದೆಯೇ? ಕೇಂದ್ರ ಸರಕಾರ ಮತ್ತು ಆರ್‌ಬಿಐ ಪ್ರಕಾರ ಉಚಿತ ಕೊಡುಗೆಗಳು ರಾಜ್ಯದ ಹಣಕಾಸು ಕೆಡಲು ಕಾರಣ. ಆರ್‌ಬಿಐ ಅಧ್ಯಯನ ಪ್ರಕಾರ ರಾಜ್ಯಗಳು ತಮ್ಮ ಆದಾಯಕ್ಕಿಂತ ಹೆಚ್ಚು ಖರ್ಚು ಮಾಡುತ್ತವೆ. ಆದಾಯಕ್ಕಿಂತ ಹೆಚ್ಚು ಖರ್ಚು ಮಾಡುವುದರಿಂದ ರಾಜ್ಯಗಳ ಸಾಲ ಹೆಚ್ಚಾಗುತ್ತಿದೆ. ಇದರಿಂದ ರಾಜ್ಯಗಳ ಹಣಕಾಸು ಸ್ಥಿತಿ ಬಿಗಾಡಯಿಸುತ್ತಿದೆ. ಇದನ್ನು ವಿರೋಧಿಸುವ ರಾಜ್ಯ ಸರಕಾರಗಳ ಪ್ರಕಾರ ಆದಾಯಕ್ಕಿಂತ ಹೆಚ್ಚು ಖರ್ಚು ಮಾಡುವುದು ಅನಿವಾರ್ಯ. ಏಕೆಂದರೆ ಆದಾಯ ಕಡಿಮೆ ಆಗುತ್ತಿದೆ. ಸಂವಿಧಾನದಲ್ಲೇ ಕೇಂದ್ರಕ್ಕೆ ಹೆಚ್ಚಿನ ಆದಾಯ ಸಂಗ್ರಹಿಸುವ ಅಧಿಕಾರ ನೀಡಲಾಗಿದೆ. ಆದರೆ ಜನರ ಬದುಕಿಗೆ ಸಂಬಂಧಿಸಿದ ಮೂಲಸೌಕರ್ಯಗಳನ್ನು ಕಲ್ಪಿಸುವ ಜವಾಬ್ದಾರಿ ರಾಜ್ಯಕ್ಕೆ ಹೆಚ್ಚಿದೆ. 2019ರಲ್ಲಿ ಕೇಂದ್ರ ಮತ್ತು ರಾಜ್ಯಗಳು ಸಂಗ್ರಹಿಸಿದ ಸಂಪನ್ಮೂಲದಲ್ಲಿ ಶೇ. 63ರಷ್ಟು ಕೇಂದ್ರ ಸರಕಾರ ಸಂಗ್ರಹಿಸಿದರೆ ರಾಜ್ಯಗಳು ಸಂಗ್ರಹಿಸಿದ ಸಂಪನ್ಮೂಲ ಕೇವಲ 37%. ಆದರೆ ಖರ್ಚಿನ ಪ್ರಶ್ನೆ ಬಂದರೆ ಅದೇ ವರ್ಷ ಕೇಂದ್ರ ಸರಕಾರ ಶೇ. 38ರಷ್ಟು ಖರ್ಚು ಮಾಡಿದರೆ ರಾಜ್ಯಗಳು ಶೇ. 62ರಷ್ಟು ಖರ್ಚು ಮಾಡಿವೆ.

ಅಷ್ಟು ಮಾತ್ರವಲ್ಲ 15ನೇ ಹಣಕಾಸು ಸಮಿತಿ ಶೇ. 42ರಷ್ಟು ತೆರಿಗೆ ಸಂಗ್ರಹವನ್ನು ರಾಜ್ಯಗಳಿಗೆ ನೀಡಲು ಸಲಹೆ ನೀಡಿದೆ. ಆದರೆ ವಾಸ್ತವದಲ್ಲಿ ಕೇಂದ್ರ ಶೇ. 30ರಷ್ಟು ತೆರಿಗೆ ಸಂಗ್ರಹವನ್ನು ರಾಜ್ಯಗಳಿಗೆ ನೀಡಿದೆ. ತೆರಿಗೆ ಸಂಗ್ರಹ ಬದಲು ಸೆಸ್ ಸರ್ಚಾಜ್ ಸಂಗ್ರಹಗಳನ್ನು ಕೇಂದ್ರ ಸರಕಾರ ಹೆಚ್ಚಿಸುವುದರಿಂದ ವಾಸ್ತವ ವರ್ಗಾವಣೆ ಕಡಿಮೆ ಆಯಿತು. ಕೇಂದ್ರ ಸಂಗ್ರಹ ಮಾಡುವ ತೆರಿಗೆಯಲ್ಲಿ ಎರಡು ಭಾಗ ಇದೆ. ಒಂದು ರಾಜ್ಯಗಳೊಂದಿಗೆ ಹಂಚಿಕೊಳ್ಳುವ ಭಾಗ ಮತ್ತು ಹಂಚಿಕೊಳ್ಳದಿರುವ ಭಾಗ. ಸೆಸ್, ಸರ್ಚಾಜ್‌ಗಳನ್ನು ರಾಜ್ಯಗಳೊಂದಿಗೆ ಹಂಚಿಕೊಳ್ಳುವ ಅಗತ್ಯ ಇಲ್ಲ. ಇದೇ ಅಧಿಕಾರವನ್ನು ಬಳಸಿಕೊಂಡು ಕೇಂದ್ರ ಸರಕಾರ ಸೆಸ್, ಸರ್ಚಾಜ್ ಸಂಗ್ರಹವನ್ನ ಹೆಚ್ಚಿಸಿಕೊಂಡಿದೆ. 2012ರಲ್ಲಿ ಕೇಂದ್ರ ಸರಕಾರ ಸಂಗ್ರಹಿಸಿದ ತೆರಿಗೆಯಲ್ಲಿ ಸೆಸ್ ಶೇ.10ರಷ್ಟಿತ್ತು. 2020ರ ವೇಳೆಗೆ ಅದು ಶೇ.20ಕ್ಕೆ ಏರಿದೆ. ಅಂದರೆ ಪ್ರತಿ 100 ರುಪಾಯಿಗಳಲ್ಲಿ ರಾಜ್ಯಗಳೊಂದಿಗೆ ಹಂಚಿಕೊಳ್ಳುವ ಭಾಗ ರೂ.80ಕ್ಕೆ ಇಳಿದಿದೆ. 100 ರುಪಾಯಿಯಲ್ಲಿ ಶೇ.42 ರಾಜ್ಯಗಳಿಗೆ ನೀಡಿದೆ ರೂ.42 ರಾಜ್ಯಗಳಿಗೆ ವರ್ಗಾವಣೆ ಆಗುತ್ತಿದೆ. 80 ರುಪಾಯಿಯಲ್ಲಿ ಶೇ.42 ನೀಡಿದರೆ ರೂ.33 ಮಾತ್ರ ವರ್ಗಾವಣೆ ಆಗುತ್ತದೆ.

ಸೆಸ್‌ನ್ನು ನಿರ್ದಿಷ್ಟ ಉದ್ದೇಶಕ್ಕಾಗಿ ಸಂಗ್ರಹಿಸಲಾಗುತ್ತಿದೆ. ಈಗ ಶಿಕ್ಷಣ, ಆರೋಗ್ಯ, ಗ್ರಾಮೀಣಾಭಿವೃದ್ಧಿ, ಮೂಲಸೌಕರ್ಯಗಳ ಅಭಿವೃದ್ಧಿ ಇತ್ಯಾದಿಗಳಿಗಾಗಿ 7 ಸೆಸ್‌ಗಳನ್ನು ಕೇಂದ್ರ ಸರಕಾರ ಸಂಗ್ರಹಿಸುತ್ತಿದೆ. ಕೇಂದ್ರ ಲೆಕ್ಕಪತ್ರಾಧಿಕಾರಗಳ ಪ್ರಕಾರ 2019 ಮತ್ತು 2020ರಲ್ಲಿ ಕೇಂದ್ರ ಸಂಗ್ರಹಿಸಿದ ಸೆಸ್‌ಗಳಲ್ಲಿ ಶೇ.40ರಷ್ಟನ್ನು ನಿರ್ದಿಷ್ಟ ಉದ್ದೇಶಕ್ಕೆ ಬಳಸಿಲ್ಲ. ಇದರಿಂದಲೂ ರಾಜ್ಯಗಳಿಗೆ ವರ್ಗಾವಣೆ ಆಗುವ ಮೊತ್ತ ಕಡಿಮೆ ಆಗಿದೆ. 2019ರಲ್ಲಿ ಕೇಂದ್ರ ಸರಕಾರ ರಾಜ್ಯಗಳೊಂದಿಗೆ ಚರ್ಚಿಸದೆ ಕಾರ್ಪೋರೇಟ್ ತೆರಿಗೆ ದರವನ್ನು ಶೇ.30ರಿಂದ ಶೇ.22ಕ್ಕೆ ಇಳಿಸಿದೆ ಮತ್ತು ಹೊಸತಾಗಿ ಆರಂಭಿಸುವ ಉದ್ದಿಮೆಗಳ ಗಳಿಸಿದ ಲಾಭದ ಮೇಲಿನ ತೆರಿಗೆಯನ್ನು ಶೇ.25ರಿಂದ ಶೇ.15ಕ್ಕೆ ಇಳಿಸಿದೆ. ಇದರಿಂದ 1.5 ಲಕ್ಷ ಕೋಟಿ ತೆರಿಗೆ ಸಂಗ್ರಹ ಕಡಿಮೆ ಆಗಿದೆ. ಇದರಲ್ಲಿ

ಪುಟ 12 ಕ್ಕೆ



ಉಚಿತ ಕೊಡುಗೆಗಳ ಬಗ್ಗೆ ಬೂಟಾಟಿಕೆ


ಉಚಿತ ಕೊಡುಗೆ ವಿಷಯವನ್ನು ಕೆದಕಿರುವ ಮೋದಿಯವರ ಬೂಟಾಟಿಕೆಯ ಉದ್ದೇಶ ಸ್ಪಷ್ಟವಾಗಿದೆ. ವಿವಿಧ ಕಲ್ಯಾಣ ಕಾರ್ಯಕ್ರಮಗಳು ಹಾಗೂ ನಾನಾ ರಾಜ್ಯ ಸರಕಾರಗಳ ನೇರ ನಗದು ವರ್ಗಾವಣೆಯನ್ನು ಅದು ಟಾರ್ಗೆಟ್ ಮಾಡಿರುವುದು ಸ್ಪಷ್ಟವಿದೆ. ಕೇಂದ್ರ ಸರಕಾರದ ಎಲ್ಲ ಯೋಜನೆಗಳು ನೈಜ ಕಲ್ಯಾಣ ಕಾರ್ಯಕ್ರಮಗಳಾಗಿವೆ ಎಂದು ಪ್ರಧಾನಿ ಪರಿಗಣಿಸುತ್ತಾರೆ. ಆದರೆ ರಾಜ್ಯ ಸರಕಾರಗಳ ಅದೇ ರೀತಿಯ ಯೋಜನೆಗಳು ಫ್ರೀಬೀಗಳಾಗಿದ್ದು ಅವು ಖಂಡನಾರ್ಹ ಎನ್ನುವುದು ಅವರ ಅಭಿಪ್ರಾಯವಾಗಿದೆ.

ಪ್ರಕಾಶ್ ಕಾರಟ್

ಭಾರತದ ಮುಖ್ಯ ನ್ಯಾಯಮೂರ್ತಿ (ಸಿಜೆಐ) ಆಗಿದ್ದ ಜಸ್ಟಿಸ್ ಎನ್.ವಿ. ರಮಣ ತಮ್ಮ ಅವಧಿಯ ಕೊನೆಯ ದಿನವಾದ ಆಗಸ್ಟ್ 26 ರಂದು, ರಾಜಕೀಯ ಪಕ್ಷಗಳು ಉಚಿತ ಕೊಡುಗೆಗಳ ಆಶ್ವಾಸನೆ ನೀಡುವ ವಿಚಾರದ ಸಂಬಂಧ ಸಲ್ಲಿಸಲಾಗಿರುವ ಅರ್ಜಿಗಳನ್ನು ಹೊಸ ಸಿಜೆಐ ನಿರ್ಧರಿಸಲಿ ಎಂದು ಸೂಚಿಸಿ ಮೂವರು ಸದಸ್ಯರ ಪೀಠವೊಂದಕ್ಕೆ ಒಪ್ಪಿಸಿದ್ದಾರೆ. ಉಚಿತ ಕೊಡುಗೆ (ಫ್ರೀಬೀ) ವಿಚಾರದಲ್ಲಿ ಸುಪ್ರೀಂ ಕೋರ್ಟ್ ಪ್ರವೇಶಿಸುವುದು ಉನ್ನತ ನ್ಯಾಯಾಂಗ ನಿರ್ವಹಿಸಬಾರದಂಥ ಕ್ಷೇತ್ರಕ್ಕೆ ಪ್ರವೇಶ ಹಾಗೂ ತಪ್ಪು ಆದ್ಯತೆಗಳಿಗೆ ಒಂದು ಉದಾಹರಣೆಯಾಗಿದೆ.

ಪ್ರಧಾನಿ ನರೇಂದ್ರ ಮೋದಿ ಜುಲೈ ತಿಂಗಳಲ್ಲಿ ಸಾರ್ವಜನಿಕ ಸಭೆಯೊಂದರಲ್ಲಿ 'ರೇವ್ಡಿ' (ಉಚಿತ ಕೊಡುಗೆ) ಸಂಸ್ಕೃತಿ ಬಗ್ಗೆ ಮಾತನಾಡಿ ಅದಕ್ಕೆ ಪ್ರತಿಪಕ್ಷಗಳೇ ಹೊಣೆ ಎನ್ನುವ ಮೂಲಕ ಫ್ರೀ ಬೀ ಚರ್ಚೆಯನ್ನು ಕೆದಕಿದ್ದರು. ಚುನಾವಣೆಗೆ ಮುನ್ನ ರಾಜಕೀಯ ಪಕ್ಷಗಳು ನೀಡುವ ಆಶ್ವಾಸನೆಗಳು ಜನತಾ ಪ್ರಾತಿನಿಧ್ಯ ಕಾನೂನಿನ 123ನೇ ಸೆಕ್ಷನ್ ಅಡಿಯಲ್ಲಿ ಭ್ರಷ್ಟ ಆಚರಣೆ ವ್ಯಾಪ್ತಿಗೆ ತರಲು ನಿರಾಕರಿಸಿ ಸುಪ್ರೀಂ ಕೋರ್ಟ್ ಈ ಹಿಂದೆ ನೀಡಿದ್ದ ತೀರ್ಪನ್ನು ಮರುಪರಿಶೀಲಿಸುವಂತೆ ದೆಹಲಿಯ ಬಿಜೆಪಿ ನಾಯಕರೊಬ್ಬರು ಸುಪ್ರೀಂಗೆ ಸಾರ್ವಜನಿಕ ಹಿತಾಸಕ್ತಿ ಅರ್ಜಿ (ಪಿಐಎಲ್) ಸಲ್ಲಿಸಿದ್ದಾರೆ.

ಸಿಜೆಐ ರಮಣ ನೇತೃತ್ವದ ಪೀಠವೊಂದು ತಕ್ಷಣವೇ ಈ ಅರ್ಜಿಯ ವಿಚಾರಣೆಯನ್ನು ಕೈಗೆತ್ತಿಕೊಂಡಿತು. ಅರ್ಜಿದಾರರು ಮತ್ತು ಪ್ರತಿವಾದಿಗಳ ವಾದಗಳನ್ನು ಕೋರ್ಟ್ ಆಲಿಸಿತ್ತು. ಇದು, ಚುನಾವಣೆ ಸಮಯದಲ್ಲಿ ರಾಜಕೀಯ ಪಕ್ಷಗಳು ಜನರಿಗೆ ಭರವಸೆ ನೀಡುವ ವಿಷಯದಲ್ಲಿ ಗೊಂದಲಮಯ ಚಿಂತನೆಯನ್ನು ಎತ್ತಿ ತೋರಿಸುತ್ತದೆ. ವಿಚಾರಣೆ ವೇಳೆ ಜಸ್ಟಿಸ್ ರಮಣ ಮಾಡಿದ್ದ ಕೆಲವು ಟಿಪ್ಪಣಿಗಳಲ್ಲಿ ಕೂಡ ಈ ಧೋರಣೆ ಪ್ರತಿಫಲನ ಗೊಂಡಿದೆ. ಒಂದೆಡೆ, ಫ್ರೀಬೀಗಳನ್ನು ನೈಜ ಕಲ್ಯಾಣ ಕಾರ್ಯಕ್ರಮ ಗಳೊಂದಿಗೆ ಗೊಂದಲಗೊಳಿಸಬಾರದು ಎಂದು ಜ. ರಮಣ ಹೇಳಿದ್ದಾರೆ. ಯಾವ ಕಲ್ಯಾಣ ಕಾರ್ಯಕ್ರಮಗಳನ್ನು ಆರಂಭಿಸಬೇಕೆಂದು ನಿರ್ಧರಿಸುವುದು ರಾಜಕೀಯ ಪಕ್ಷಗಳು ಮತ್ತು ಕಾರ್ಯಾಂಗದ ಹಕ್ಕು ಎಂದೂ ಅವರು ಹೇಳಿದ್ದರು. ಇನ್ನೊಂದೆಡೆ, ಜಸ್ಟಿಸ್ ರಮಣ ಅವರು "ಅವೈಜ್ಞಾನಿಕ ಫ್ರೀಬೀಗಳ' ಬಗ್ಗೆಯೂ ಮಾತನಾಡಿದ್ದಾರೆ. ಹಾಗೆ ಮಾಡುವಾಗ ಅವರು ಅವೈಜ್ಞಾನಿಕ ಉಚಿತ ಕೊಡುಗೆಗಳನ್ನು ವ್ಯಾಖ್ಯಾನಿಸಲು ಮಾನದಂಡವೇನೆಂದು ಅವರು ಸ್ಪಷ್ಟಪಡಿಸಿಲ್ಲ.



ಈ ವಿಚಾರವಾಗಿ ತಜ್ಞರ ಸಮಿತಿಯೊಂದನ್ನು ರಚಿಸುವ ಬಗ್ಗೆಯೂ ನ್ಯಾಯ ಪೀಠ ಒಂದು ಹಂತದಲ್ಲಿ ಚಿಂತನೆ ನಡೆಸಿತ್ತು. ಆದರೆ ಇಂಥ ಸಮಿತಿಯು ಎದುರಿಸಬಹುದಾದ ಸಮಸ್ಯೆ ಮತ್ತು ಸಂಕೀರ್ಣತೆಗಳನ್ನು ಕೇಳಿದ ಮೇಲೆ ಕೋರ್ಟ್ ಅದನ್ನು ಕೈಬಿಟ್ಟಿತು.

ಉಚಿತ ಕೊಡುಗೆ ವಿಷಯವನ್ನು ಕೆದಕಿರುವ ಮೋದಿಯವರ ಬೂಟಾಟಿ ಕೆಯ ಉದ್ದೇಶ ಸ್ಪಷ್ಟವಾಗಿದೆ. ವಿವಿಧ ಕಲ್ಯಾಣ ಕಾರ್ಯಕ್ರಮಗಳು ಹಾಗೂ ನಾನಾ ರಾಜ್ಯ ಸರಕಾರಗಳ ನೇರ ನಗದು ವರ್ಗಾವಣೆಯನ್ನು ಅದು ಟಾರ್ಗೆಟ್ ಮಾಡಿರುವುದು ಸ್ಪಷ್ಟವಿದೆ. ಕೇಂದ್ರ ಸರಕಾರದ ಎಲ್ಲ ಯೋಜನೆಗಳು ನೈಜ ಕಲ್ಯಾಣ ಕಾರ್ಯಕ್ರಮಗಳಾಗಿವೆ ಎಂದು ಪ್ರಧಾನಿ ಪರಿಗಣಿಸುತ್ತಾರೆ. ಆದರೆ ರಾಜ್ಯ ಸರಕಾರಗಳ ಅದೇ ರೀತಿಯ ಯೋಜನೆಗಳು ಫ್ರೀಬೀಗಳಾಗಿದ್ದು ಅವು ಖಂಡನಾರ್ಹ ಎನ್ನುವುದು ಅವರ ಅಭಿಪ್ರಾಯವಾಗಿದೆ.

ಪ್ರಧಾನ ಮಂತ್ರಿ ಕಿಸಾನ್ ಸಮ್ಮಾನ್ ನಿಧಿ ಯೋಜನೆಯಡಿ, ಜಮೀನು ಹೊಂದಿರುವ ಪ್ರತಿ ರೈತರ ಖಾತೆಗೆ ಪ್ರತಿ ವರ್ಷ 6,000 ರೂಪಾಯಿಯನ್ನು ವರ್ಗಾಯಿಸಲಾಗುತ್ತದೆ. ಇದು ಫ್ರೀಬೀ ಅಲ್ಲವಂತೆ; ಆದರೆ ತೆಲಂಗಾಣ, ಆಂಧ್ರ ಪ್ರದೇಶ ಮತ್ತು ಒಡಿಶಾ ಸರಕಾರಗಳು ಅನುಷ್ಠಾನಗೊಳಿಸುತ್ತಿರುವ ಇದೇ ರೀತಿಯ ಯೋಜನೆಯನ್ನು ಫ್ರೀಬೀ ಎಂದು ಬ್ರಾಂಡ್ ಮಾಡಲಾಗುತ್ತದೆ. ಎಲ್ಲ ಕಲ್ಯಾಣ ಕಾರ್ಯಕ್ರಮಗಳು ಕೇಂದ್ರದ ಯೋಜನೆಗಳೆಂದು ಏಕಸ್ವಾಮ್ಯಗೊಳಿಸುವುದು ಪ್ರಧಾನಿಯ ಉದ್ದೇಶವಾಗಿದೆ. ಈ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವುದಷ್ಟೇ ರಾಜ್ಯ ಸರಕಾರಗಳ ಕೆಲಸ. ಆ ಮೂಲಕ ಫಲಾನುಭವಿಗಳು ಕೇಂದ್ರ ಸರಕಾರಕ್ಕೆ ಋಣಿಯಾಗಿರಬೇಕೆನ್ನುವುದೂ ಮೋದಿ ನಿರೀಕ್ಷೆಯಾಗಿದೆ.

ಕಾರ್ಪೊರೇಟ್‌ಗಳಿಗೆ ತೆರಿಗೆ ಕಡಿತ ಹಾಗೂ ಸಾಲ ಮನ್ನಾ ಅಥವಾ ಶ್ರೀಮಂತರಿಗೆ ಕೊಡುವ ಸಬ್ಸಿಡಿಗಳು ಫ್ರೀಬೀ ಎಂದು ಮೋದಿ ಪರಿಗಣಿಸುವುದಿಲ್ಲ. ಸುಪ್ರೀಂ ಕೋರ್ಟ್‌ಗೆ ಡಿಎಂಕೆ ಸಲ್ಲಿಸಿರುವ ವಾದದಲ್ಲಿ ಕೆಳಗಿನ ಮಾಹಿತಿ ಒಳಗೊಂಡಿದೆ. ಮೋದಿ ಸರಕಾರದ ಮೊದಲ ಮೂರು ವರ್ಷಗಳಲ್ಲಿ (2014–17), ಅದಾನಿ ಗುಂಪಿಗೆ 72,000 ಕೋಟಿ ರೂಪಾಯಿ ಸಾಲವನ್ನು ರೈಟ್‌ಆಫ್ ಮಾಡಲಾಗಿದೆ. ಕಳೆದ ಐದು ವರ್ಷಗಳಲ್ಲಿ (2017–22) ಸಾರ್ವಜನಿಕ ವಲಯದ ಬ್ಯಾಂಕ್‌ಗಳು 7.27 ಲಕ್ಷ ಕೋಟಿ ರೂಪಾಯಿಗಳನ್ನು ರೈಟ್ ಆಫ್ ಮಾಡಿವೆ. ಇವೆಲ್ಲವನ್ನು ಉಲ್ಲೇಖಿಸಿರುವ ಡಿಎಂಕೆ, 'ಇವುಗಳು ಕಾರ್ಪೊರೇಟ್‌ಗಳಿಗೆ ಫ್ರೀಬೀಗಳಲ್ಲವೇ? ಬಡವರು ಮತ್ತು ತುಳಿತಕ್ಕೊಳಗಾದ ಜನರಿಗೆ ಆಹಾರ, ಶಿಕ್ಷಣ ಮತ್ತು ಪ್ರವಾಸ ಸಬ್ಸಿಡಿಗಳನ್ನು ನಿಲ್ಲಿಸುವುದು ಹಾಗೂ ಕಾರ್ಪೊರೇಟ್‌ಗಳಿಗೆ ದೊಡ್ಡ ತೆರಿಗೆ ರಿಯಾಯಿತಿಗಳನ್ನು ಕೊಡುವುದಕ್ಕೆ ಸಮರ್ಥನೆಯೇನು?' ಎಂದು ಪ್ರಶ್ನಿಸಿದೆ.

ಆಹಾರ, ರಸಗೊಬ್ಬರ, ವಿದ್ಯುಚ್ಛಕ್ತಿ ಮತ್ತಿತರ ವಲಯಗಳಿಗೆ ನೀಡುವ ಸಬ್ಸಿಡಿಯು ಸಾರ್ವಜನಿಕ ಸಂಪನ್ಮೂಲಗಳ ಅಪವ್ಯಯವಾಗಿದ್ದು ಅವೆಲ್ಲ ಫ್ರೀಬೀಗಳೆನ್ನುವುದು ನವ–ಉದಾರವಾದಿ ಚಿಂತನೆಯಾಗಿದ್ದು ಅದನ್ನೇ ಇಲ್ಲಿ ಅನ್ವಯಿಸಲಾಗುತ್ತಿದೆ. ದುಡಿಯುವ ಜನರಿಗೆ ಅನುಕೂಲಗಳನ್ನು ವರ್ಗಾಯಿಸುವ ಬದಲು ಬಂಡವಾಳಶಾಹಿಗಳ ಬೆಳವಣಿಗೆ ಉತ್ತೇಜನಕ್ಕಾಗಿ ಅವರಿಗೆ ವರ್ಗಾಯಿಸಬೇಕೆನ್ನುವುದು ಅದರ ತಿರುಳಾಗಿದೆ. 'ಆರ್ಥಿಕವಾಗಿ ಬೇಜವಾಬ್ದಾರಿತನದ್ದು' ಎನ್ನುವುದು 'ಫ್ರೀಬೀ' ವಿರುದ್ಧದ ದಾಳಿಯ ಇನ್ನೊಂದು ಆಯಾಮವಾಗಿದೆ. ತ್ರಿಸದಸ್ಯ ಪೀಠಕ್ಕೆ ಒಪ್ಪಿಸುವ ಜಸ್ಟಿಸ್ ರಮಣ ನೇತೃತ್ವದ ಪೀಠದ ಆದೇಶದಲ್ಲಿಯೂ ಅದು ಪ್ರತಿಬಿಂಬಿತವಾಗುತ್ತದೆ. 'ಕಲ್ಯಾಣದ ಸೋಗಿನಲ್ಲಿ ಆರ್ಥಿಕ ಶಿಸ್ತನ್ನು ಗಾಳಿಗೆ ತೂರಲಾಗಿದೆ ಎಂಬ ಅರ್ಜಿದಾರರ ಕಾಳಜಿಯನ್ನು ಕೂಡ ಪರಿಶೀಲಿಸಬೇಕಾಗುತ್ತದೆ' ಎಂದು ಪೀಠ ಹೇಳಿದೆ.

ಚುನಾವಣೆ ವೇಳೆ ರಾಜಕೀಯ ಪಕ್ಷಗಳು ತಮ್ಮ ಚುನಾವಣಾ ಪ್ರಣಾಳಿಕೆಗಳಲ್ಲಿ ನೀಡುವ ಕಲ್ಯಾಣ ಕಾರ್ಯಕ್ರಮಗಳ ಭರವಸೆಗಳನ್ನು ಮತದಾರರಿಗೆ ಹಣ ನೀಡಿಕೆ, ಉಚಿತ ಸೀರೆ ಹಂಚಿಕೆ ಮತ್ತು ಇತರ ವಸ್ತುಗಳನ್ನು ನೀಡುವ ಚಟುವಟಿಕೆಗಳನ್ನು ಒಂದಕ್ಕೊಂದು ಬೆರೆಸಿ ಉದ್ದೇಶಪೂರ್ವಕವಾಗಿ ಗೊಂದಲ ಸೃಷ್ಟಿಸಲಾಗುತ್ತಿದೆ. ನಿಜ ಹೇಳಬೇಕೆಂದರೆ, ಎರಡನೆಯ ಅಂಶವನ್ನು ಕಟ್ಟುನಿಟ್ಟಾಗಿ ನಿಯಂತ್ರಿಸಬೇಕು.

ರಾಜಕೀಯ ಪಕ್ಷಗಳು ನೀಡುವ ಚುನಾವಣಾ ಆಶ್ವಾಸನೆಗಳು ಫ್ರೀಬೀ ಹೌದೇ ಅಲ್ಲವೇ ಎಂದು ಚರ್ಚಿಸುವುದು ಹಾಗೂ ನಿರ್ಧರಿಸುವುದು ಸುಪ್ರೀಂ ಕೋರ್ಟ್‌ನ ಕೆಲಸ ಅಲ್ಲವೇ ಅಲ್ಲ. ಇದು ಶುದ್ಧವಾಗಿ ರಾಜಕೀಯ ಕ್ಷೇತ್ರಕ್ಕೆ ಸಂಬಂಧಿಸಿದ ವಿಚಾರವಾಗಿದೆ. ಪ್ರಜಾಪ್ರಭುತ್ವದಲ್ಲಿ ತಮ್ಮ ವೇದಿಕೆಯನ್ನು ಸೃಷ್ಟಿಸಿಕೊಳ್ಳಲು ಮತ್ತು ಚುನಾವಣಾ ಪ್ರಣಾಳಿಕೆಯಲ್ಲಿ ಭರವಸೆ ನೀಡಲು ರಾಜಕೀಯ ಪಕ್ಷಗಳಿಗೆ ಸ್ವಾತಂತ್ರ್ಯವಿದೆ. ಅವುಗಳನ್ನು ನಿರ್ಣಯಿಸಿ ಒಪ್ಪುವುದು ಅಥವಾ ತಿರಸ್ಕರಿಸುವುದು ಜನತೆಗೆ ಬಿಟ್ಟ ವಿಚಾರವಾಗಿದೆ. ಕಲ್ಯಾಣ ಕಾರ್ಯಕ್ರಮಗಳ ಬಗ್ಗೆ ಪ್ರಣಾಳಿಕೆಯಲ್ಲಿ ನೀಡಿದ್ದ ಆಶ್ವಾಸನೆಗಳನ್ನು ಅನುಷ್ಠಾನಗೊಳಿಸುವುದು ಚುನಾವಣೆಯಲ್ಲಿ ಗೆದ್ದ ರಾಜಕೀಯ ಪಕ್ಷದ ಅಧಿಕಾರವಾಗಿದೆ.

ಫ್ರೀಬೀಗಳ ಮೇಲಿನ ತಥಾಕಥಿತ ದಾಳಿಯು ವಾಸ್ತವವಾಗಿ ಆಹಾರ, ಶಿಕ್ಷಣ, ಆರೋಗ್ಯ ಮತ್ತು ಜನತೆಯ ಕಲ್ಯಾಣ ಸಾಧಿಸುವ ಇತರ ಎಲ್ಲ ಕಾರ್ಯಕ್ರಮಗಳ ಮೇಲಿನ ದಾಳಿಯಾಗಿದೆ. ನಿಜ ಹೇಳಬೇಕೆಂದರೆ, ಅವುಗಳನ್ನೆಲ್ಲ ಒದಗಿಸುವುದು ಪ್ರಭುತ್ವದ ಹೊಣೆಗಾರಿಕೆಯಾಗಿದೆ.

ಅನು: ವಿಶ್ವ

ಕಾದಂಬರಿಯ ಪಾತ್ರವೊಂದು ಆಡಿದ ಮಾತುಗಳು, ಬರುವ ಸಂಭಾಷಣೆಗಳನ್ನೇ ತಿರುಚಿ ದುರುದ್ದೇಶಪೂರ್ವಕವಾಗಿ ದೂರು ನೀಡಿದ್ದನ್ನು ಪ್ರತಿಭಟಿಸಿ ಮನವಿ ಸಲ್ಲಿಸಲಾಯಿತು

ಕನ್ನಡದ ಹಿರಿಯ ಸಾಹಿತಿ ಪ್ರೊ.ಬರಗೂರು ರಾಮಚಂದ್ರಪ್ಪ ನವರು 1983 ರಲ್ಲಿ ಬರೆದ ಮತ್ತು 2021 ರಲ್ಲಿ ಪರಿಷ್ಕರಣೆಗೊಂಡ 'ಭರತ ನಗರಿ' ಎಂಬ ಸೃಜನಾತ್ಮಕ ಕಾದಂಬರಿಯ ಪಾತ್ರವೊಂದು ಆಡಿದ ಮಾತುಗಳು, ಬರುವ ಸಂಭಾಷಣೆಗಳನ್ನೇ ತಿರುಚಿ ದುರುದ್ದೇಶಪೂರ್ವಕವಾಗಿ ದೂರು ನೀಡಿದ್ದನ್ನು ಪ್ರತಿಭಟಿಸಿ ಹಾಗೂ ಅದನ್ನು ಪರಿಗಣಿಸದಂತೆ ಒತ್ತಾಯಿಸಿ ವಿವಿಧ ಲೇಖಕರು, ಜನ ಸಂಘಟನೆಗಳ ಪ್ರಮುಖರ ನಿಯೋಗ ಇಂದು ಬೆಂಗಳೂರು ಪೊಲೀಸ್ ಕಮಿಷನರ್ ಪ್ರತಾಪರೆಡ್ಡಿ ಯವರಿಗೆ ಮನವಿ ಸಲ್ಲಿಸಿದೆ.

ಮನವಿ ಸ್ವೀಕರಿಸಿದ ಆಯುಕ್ತರಾದ ಪ್ರತಾಪರೆಡ್ಡಿಯವರು' ಈ ವಿಷಯದಲ್ಲಿ ತಮ್ಮ ಇಲಾಖೆಯ ಪಾತ್ರ ಸೀಮಿತವಿದ್ದು ಕನ್ನಡ ಸಾಹಿತ್ಯ ಪರಿಷತ್ತು ಮತ್ತು ಕನ್ನಡ–ಸಂಸ್ಕೃತಿ ಇಲಾಖೆಯ ಅಭಿಪ್ರಾಯವನ್ನು ಆಧರಿಸಿ ಮುಂದಿನ ಕ್ರಮ ವಹಿಸಲಾಗುವುದು' ಎಂದು ಹೇಳಿದರಲ್ಲದೇ ನಿಯೋಗ ನೀಡಿದ ವಿವರಣೆಯನ್ನು ಕೇಳಿಸಿಕೊಂಡರು.

ಈ ನಿಯೋಗದಲ್ಲಿ ಸಾಹಿತಿಗಳಾದ ಡಾ.ರಾಜಪ್ಪ ದಳವಾಯಿ, ಕವಯಿತ್ರಿ ಡಾ.ಕೆ.ಶರೀಫಾ, ದಲಿತ ಮುಖಂಡರಾದ ಮಾವಳ್ಳಿ ಶಂಕರ್, ಡಾ.ಮೋಹನ್ ರಾಜ್, ಹೆಣ್ಣೂರು ಶ್ರೀನಿವಾಸ್, ಬೆಂಗಳೂರು ವಕೀಲರ ಸಂಘದ ಮಾಜಿ ಅಧ್ಯಕ್ಷರಾದ ಎ.ಪಿ.ರಂಗನಾಥ್, ಸೌಹಾರ್ದ ಕರ್ನಾಟಕದ ಎಸ್.ವೈ. ಗುರುಶಾಂತ್, ಎಸ್.ಯು.ಸಿ.ಐ(ಸಿ) ಯ ಎಂ.ಎನ್.ಶ್ರೀರಾಮ್, ಬಂಡಾಯ ಸಾಹಿತ್ಯ ಸಂಘಟನೆಯ ಬಿ.ರಾಜಶೇಖರಮೂರ್ತಿ, ಆರ್.ಟಿ.ಐ. ಕಾರ್ಯಕರ್ತ ಅಬ್ರಹಂ ಮುಂತಾದವರಿದ್ದರು.

ಮನವಿ ಪತ್ರಕ್ಕೆ ನಿಯೋಗದಲ್ಲಿದ್ದವರಲ್ಲದೇ ಹಿರಿಯ ಲೇಖಕರಾದ ಡಾ.ಕೆ. ಮರುಳಸಿದ್ದಪ್ಪ ಡಾ.ಜಿ.ರಾಮಕೃಷ್ಣ, ಬಿ.ಎಂ.ಹನೀಫ್, ಜ್ಯೋತಿ, ಅನಂತನಾಯಕ್, ಗೋಪಾಲಕೃಷ್ಣ ಹರಳಹಳ್ಳಿ ಮುಂತಾದವರ ಸಹಿ ಹಾಕಿದ್ದರು.

ಜನಶಕ್ತಿ
ಕನ್ನಡ ವಾರಪತ್ರಿಕೆ

ಚಂದಾ ವಿವರ:
ವಾರ್ಷಿಕ ಚಂದಾ : ರೂ.500.00
ದ್ವೈವಾರ್ಷಿಕ ಚಂದಾ : ರೂ.1000.00

ಚಂದಾದಾರರು ಸಂಪರ್ಕಿಸಿ:
ಕ್ರಿಯಾ ಪ್ರಕಾಶನ, ಸೂರಿ ಭವನ
ನಂ.40/5, 2ನೇ 'ಬಿ' ಮುಖ್ಯರಸ್ತೆ, 16ನೇ ಅಡ್ಡರಸ್ತೆ, ಸಂಪಂಗಿರಾಮನಗರ,
ಬೆಂಗಳೂರು 560027
ಕಛೇರಿ ದೂರವಾಣಿ : 080–22234369
ಫೋನ್ : 9448578021, 9483966467



ಮುರುಘಾ ಮಠದಲ್ಲಿ ಲೈಂಗಿಕ ದೌರ್ಜನ್ಯದ ಕಳಂಕದ ಕಿಚ್ಚು

ಕರ್ನಾಟಕದ ಲಿಂಗಾಯತ ಪರಂಪರೆಯಲ್ಲಿ ಚಿತ್ರದುರ್ಗದ ಮುರುಘಾ ಮಠಕ್ಕೆ ಒಂದು ಬಹು ದೊಡ್ಡ ಶ್ಲಾಘನೀಯ ಪರಂಪರೆ ಇದೆ. ಈಗಿನ ಪೀಠಾಧಿಪತಿಗಳು ಹಲವಾರು ಪ್ರಗತಿಪರ ಕೆಲಸ ಕಾರ್ಯಗಳ ಮೂಲಕ ನಾಡಿನ ಜನರ ಗಮನ ಸೆಳೆದಿದ್ದರು. ಆದರೆ ಅದರೊಂದಿಗೆ ಕಾಲಾನುಕ್ರಮದಲ್ಲಿ ಪ್ರಶ್ನಾರ್ಹವಾದ ನಡೆಗಳನ್ನೂ ಇಟ್ಟಿದ್ದರು. ಈಗ ಸ್ಫೋಟಗೊಂಡಿರುವ ಲೈಂಗಿಕ ಹಗರಣ, ಅದರ ಸುತ್ತ ಮೆತ್ತಿಕೊಂಡಿರುವ ಹತ್ತಾರು ಹಗರಣಗಳು ಎಲ್ಲರನ್ನೂ ಬೆಚ್ಚಿ ಬೀಳಿಸಿವೆ. ಈ ಎಲ್ಲಾ ಸಂಗತಿಗಳ ಒಳಸುಳಿಗಳು, ಪ್ರಕ್ರಿಯೆ, ಪರಿಣಾಮಗಳ ಬಗ್ಗೆ ಹಲವು ದಶಕಗಳಿಂದಲೂ ಮಠದೊಂದಿಗೆ ನಿಕಟ ಸಂಬಂಧ ಇರುವ ಹಿರಿಯ ಪತ್ರಕರ್ತ ದೊಣೆಹಳ್ಳಿ ಗುರುಮೂರ್ತಿಯವರ ವಿವರ ವಿಶ್ಲೇಷಣೆಯ ವರದಿ ಇಲ್ಲಿ.

ಚಿತ್ರದುರ್ಗ ಶ್ರೀ ಮುರುಘಾ ರಾಜೇಂದ್ರ ಬೃಹನ್ಮಠದ ಜಗದ್ಗುರು ಡಾ॥ ಶಿವಮೂರ್ತಿ ಮುರುಘಾ ಶರಣರ ಲೈಂಗಿಕ ಹಗರಣದ ಸ್ಫೋಟದಿಂದಾಗಿ ಕರ್ನಾಟಕ ಮಾತ್ರವಲ್ಲ, ಒಟ್ಟು ಭಾರತವೇ ಬೆಚ್ಚಿ ಬಿದ್ದಿದೆ! ದಕ್ಷಿಣ ಭಾರತದಲ್ಲೇ ಪ್ರಸಿದ್ಧ ವಿರಕ್ತ ಮಠಗಳಲ್ಲೊಂದಾದ ಮುರುಘಾ ಮಠ ವಿದೇಶದಲ್ಲಿಯೂ ತನ್ನ ಭಕ್ತ ಸಮುದಾಯವನ್ನು ಹೊಂದಿದೆ. ಹೀಗಾಗಿ ಮುರುಘಾ ಶರಣರ ಅಮಾನವೀಯವಾದ ವರ್ತನೆ ಆರೋಪಿತ ಪ್ರಕರಣ ಬಹುತೇಕರನ್ನು ಬೆಚ್ಚಿ ಬೀಳಿಸಿದೆ.

ಮುರುಘಾ ಮಠ ಪ್ರಾಚೀನ ಪರಂಪರೆಯ ಐತಿಹಾಸಿಕ ಮಠ. ವೀರಶೈವ–ಲಿಂಗಾಯತ ಸಮುದಾಯದವರು ಈ ಮಠದ ಭಕ್ತರಾದರೂ... ವಾಲ್ಮೀಕಿ ಸಮುದಾಯದ ಮದಕರಿ ವಂಶಸ್ಥರು ಈ ಮಠದ ಪ್ರಥಮ ಭಕ್ತರು! ಬಿಚ್ಚುಗತ್ತಿ ಭರಮಣ್ಣ ನಾಯಕ ಶ್ರೀಮಠಕ್ಕೆ ಭವ್ಯವಾದ ಗುರುಮನೆಯನ್ನು ಕಟ್ಟಿ ಕೊಟ್ಟ. ಹೀಗೆ ಅರಮನೆ–ಗುರುಮನೆಯನ್ನು ಕಟ್ಟಿಕೊಡುವ ಮೂಲಕ ತನ್ನ ಭಕ್ತಿಯ ಪಾರಮ್ಯವನ್ನು ಮೆರೆದ ಧೀಮಂತ ಕಲಿ. ಅರಮನೆ–ಗುರುಮನೆಯ ಅನ್ಯೋನ್ಯತೆಯ ಪರಂಪರೆಯಿಂದಾಗಿ ಈ ಮಠ ಜನಮುಖಿಯಾದ ಅವಿಮುಕ್ತ ಕ್ಷೇತ್ರವಾಗಿಯೇ ಇದುವರೆಗೂ ನಡೆದುಕೊಂಡು ಬಂದಿದೆ.

ಭರವಸೆಯ ಹೆಜ್ಜೆಗಳು

ಮುರುಘಾ ಪರಂಪರೆಯ ಶ್ರೀ ಜಯದೇವ ಜಗದ್ಗುರು, ಶ್ರೀ ಜಯವಿಭವ ಜಗದ್ಗುರು, ಶ್ರೀ ಜಯಮಲ್ಲಿಕಾರ್ಜುನ ಜಗದ್ಗುರುಗಳು ಕಾಶಿಯ ಬನಾರಸ್ ವಿಶ್ವವಿದ್ಯಾಲಯದಲ್ಲಿ ಸಂಸ್ಕೃತ ಅಧ್ಯಯನ ಮಾಡಿದ ಮಹಾನ್ ಪಂಡಿತರಾದರೂ... ಆಡಳಿತಾತ್ಮಕವಾಗಿಯೂ ಅಷ್ಟೇ ಚತುರರು. ಒಂದು ಶತಕದ ಅವಧಿಯಲ್ಲಿ ಈ ಮೂವರು ಶ್ರೀಮಠದ ಅಧಿಕಾರ ಸೂತ್ರವನ್ನು ಹಿಡಿದು ಪರಂಪರೆಯ ಧಾರ್ಮಿಕ, ಸಾಂಸ್ಕೃತಿಕ ಕೈಂಕರ್ಯದ ಜೊತೆಗೆ ಜನಮುಖಿಯಾದ ಅಭಿವೃದ್ಧಿಯ ಕಡೆಗೆ ತಮ್ಮನ್ನು–ತಾವು ಸಾಧ್ಯವಾದಷ್ಟು ತೆರೆದು ಕೊಂಡವರು. ಇವರ ತರುವಾಯ ಬರೋಬ್ಬರಿ ನಾಲ್ಕು ದಶಕದ ಕೆಳಗೆ, ಅಂದರೆ 1990 ರಲ್ಲಿ ಮುರುಘಾ ಪರಂಪರೆಯ ಜಗದ್ಗುರುವಾಗಿ ಪಟ್ಟವೇರಿದ ಶ್ರೀ ಶಿವಮೂರ್ತಿ ಮುರುಘಾ ಶರಣರು ಪ್ರಾಚೀನ ಪರಂಪರೆಯ ಮಠದಲ್ಲಿ ವೈಚಾರಿಕ ಹೆಜ್ಜೆ ಕದಲಿಸುವ ಮೂಲಕ ವಿಭಿನ್ನ ಭರವಸೆ ಮೂಡಿಸ ತೊಡಗಿದರು. ಮಠದ ಅರ್ಥಾತ್ ದೇವಸ್ಥಾನದ ಗರ್ಭಗುಡಿಗಳಿಗೆ ನಿಷಿದ್ಧವಿದ್ದ ಮಹಿಳೆಯರ ಪ್ರವೇಶವನ್ನು ಖಡಾಖಂಡಿತವಾಗಿ ಖಂಡಿಸಿ... ಪ್ರವೇಶಕ್ಕೆ ಅನುವು ಮಾಡಿಕೊಟ್ಟರು! ವಿಧವೆಯರಿಂದ ಶುಭಕಾರ್ಯಗಳ ಉದ್ಘಾಟನೆಗೆ ಅಸ್ತಿಭಾರ ಹಾಕಿಸಿದರು. ಕಲ್ಲು ನಾಗರಕ್ಕೆ ಹಾಲೆರೆಯುವ ಸಂಪ್ರದಾಯಕ್ಕೆ ಪರ್ಯಾಯವಾಗಿ, ಅದೇ ಹಾಲನ್ನು ಹಸುಮಕ್ಕಳಿಗೆ, ಅನಾರೋಗ್ಯಪೀಡಿತ ಆಸ್ಪತ್ರೆಯ ರೋಗಿಗಳಿಗೆ ವಿತರಿಸುವ ಮಾನವೀಯ ಕ್ರಮಕ್ಕೆ ಮುಂದಾದರು. ವಿಧವಾ ವಿವಾಹಗಳಿಗೆ ಅದ್ಯತೆಕೊಟ್ಟರು. ಹೀಗೆ ಅವರು ಇಟ್ಟ ಹೆಜ್ಜೆಗಳು ಸಂಪ್ರದಾಯವಾದಿಗಳ ಕೆಂಗಣ್ಣಿಗೆ ಗುರಿಯಾದರೂ... ಈ ನಾಡಿನ ಪ್ರಗತಿಪರ, ವೈಚಾರಿಕ ಮನಸುಗಳಿಗೆ ಪ್ರಿಯವಾದವು.

ಸಮಯ ಸಾಧಕರ ಕೂಟಗಳು!!

ಹನ್ನೆರಡನೇ ಶತಮಾನದ ಬಸವ ಪರಂಪರೆಯ ಶೂನ್ಯಪೀಠದ ಸೈದ್ಧಾಂತಿಕ ತತ್ವ ಬದ್ಧತೆಯ ಈ ಮಠಕ್ಕೆ ಅತ್ಯಂತ ಸೂಕ್ತವಾದ ಜಗದ್ಗುರುವೇ ಸಿಕ್ಕಿದ್ದಾರೆಂದು ಬಹುತೇಕರು ಒಪ್ಪಿ ಅಪ್ಪಿಕೊಂಡರು. ಸಹಜವಾಗಿಯೇ ಶರಣರ ವೈಚಾರಿಕ ಕೀರ್ತಿಪತಾಕೆ ಉತ್ತುಂಗದಲ್ಲಿ ವಿಜೃಂಭಿಸ ತೊಡಗಿತು. ದೊಡ್ಡ ಮಟ್ಟದ ಸಂಪರ್ಕಗಳು ಬೆಳೆಯ ತೊಡಗಿದವು. ಹಾಗೆಯೇ ಅವರ ಸುತ್ತ ಹಾದಿ ತಪ್ಪಿಸುವ ಸಮಯ ಸಾಧಕರು ಕೋಟೆ ಕಟ್ಟಿದರು. ಅವರ 'ಅಂತರಂಗದ ಅಪೇಕ್ಷೆ'ಗಳನ್ನು ಶ್ರದ್ಧಾಭಕ್ತಿಯಿಂದ ನೆರವೇರಿಸುವ ಭಕ್ತರು ಅಲ್ಲಲ್ಲಿ ಹುಟ್ಟಿಕೊಂಡರು. ಜಗದ್ಗುರುವಾಗಿ ಪೀಠವೇರಿದ ಮುರುಘಾ ಶರಣರು ಒಂದೂವರೆ ದಶಕ ನೈಜವಾಗಿ, ಕಳಕಳಿಯಿಂದ ಹೆಜ್ಜೆ ಕ್ರಮಿಸಿದರಾದರೂ... ಕಳೆದ ಎರಡೂವರೆ ದಶಕದ ಅವಧಿಯಲ್ಲಿ ಅವರು ಇಟ್ಟ ಹೆಜ್ಜೆಗಳೆಲ್ಲವೂ... ಅನುಮಾನ ಮೂಡಿಸುವಂತಿದ್ದವು. ಮುರುಘಾ ಪರಂಪರೆಯಲ್ಲಿ ಮಹಿಳೆಯರಿಗೆ ಕಾವಿಯ ದೀಕ್ಷಾ ಪದ್ಧತಿ ಇಲ್ಲದಿದ್ದರೂ... ಅವರಿಗೆ ಕಾವಿಕೊಟ್ಟು, ತಮ್ಮ ಅಂತರಂಗದಲ್ಲಿಯೇ ಪೋಷಿಸಿ... ಬೆಳೆಸ ತೊಡಗಿದರು. ಸಿಕ್ಕ–ಸಿಕ್ಕ ಕೆಲ ಅಮಾಯಕ ಮಹಿಳೆಯರಿಗೆ ಮಠದ ತಮ್ಮ ಇಶಾರೆಯಲ್ಲಿ ಆಶ್ರಯಕೊಟ್ಟು ಅವರುಗಳಿಗೆ ಕಾರು–ಬಂಗಲೆಯ ಸೌಭಾಗ್ಯ ನೆರವೇರಿಸಿದರು ಎಂದು ಮಾತನಾಡಿದರು. ಮಹಿಳೆಯರು ಮಾತ್ರವಲ್ಲದೆ ಕೆಲ ಬಡ ವಿದ್ಯಾರ್ಥಿನಿಯರನ್ನು ಪಳಗಿಸಿ... ಸದಾ ತಮ್ಮ ಎಡ–ಬಲದಲ್ಲಿಯೇ ಠಳಾಯಿಸುವಂತೆ ನೋಡಿಕೊಂಡು ಅವರಿಗೆ ಸ್ವೇಚ್ಛೆಯಾಗಿ ಹಣ, ಅಧಿಕಾರ ಕೊಟ್ಟರು.

ದೊಣೆಹಳ್ಳಿ ಗುರುಮೂರ್ತಿ

ಅವರನ್ನೂ ಹಾದಿ ತಪ್ಪಿಸುತ್ತಾ... ತಾವು ಹಾದಿ ತಪ್ಪತೊಡಗಿದರು ಎನ್ನುವ ಗಂಭೀರ ಟೀಕೆಗಳೂ ಇವೆ!!

ಶ್ರದ್ಧಾಕೇಂದ್ರವಾದ ಶ್ರೀಮಠದಲ್ಲಿ ಅನಾವಶ್ಯಕವಾಗಿ ಮಹಿಳೆಯರ ಓಡಾಟ ನಿಷಿದ್ಧವೆಂದಿದ್ದರೂ... ತಮ್ಮ ಶಯನ ಕೊಠಡಿಯ ಕೂಗಳತೆಯಲ್ಲಿಯೇ... ವಿದ್ಯಾರ್ಥಿನಿಯರ ವಸತಿ ನಿಲಯ "ಮಡಿಲು" ಇರುವಂತೆ ನೋಡಿಕೊಳ್ಳಲಾಯಿತು. ಆ ವಿದ್ಯಾರ್ಥಿ ನಿಲಯಕ್ಕೂ–ಶರಣರ ಶಯನಗೃಹಕ್ಕೂ ನೇರ ಸಂಪರ್ಕ ಎನ್ನುವಂತೆ ಪ್ರತ್ಯೇಕ "ಸ್ಕೈವಾಕ್" ನಿರ್ಮಿಸಲಾಯಿತು!! ಇಂತಹ ವಿಚಿತ್ರ ಸ್ಕೈವಾಕ್ ಯಾಕೆ? ಇದರ ಹಕೀಕತ್ ಏನು? ಶರಣರ ಕಾಮವಾಂಛೆಯ ಸ್ಪಷ್ಟಮಾರ್ಗ ಇದಲ್ಲವೇ?! ಎಂಬ ಅನುಮಾನಗಳು ಹುತ್ತದಂತೆ ಬೆಳೆದು ನಿಂತರೂ ಅಲ್ಲಿಯ ಯಾವೊಬ್ಬ ಅಧಿಕಾರಿಯಾಗಲಿ.., ಮಠಕ್ಕೆ ಭೇಟಿ ನೀಡುವ ಗಣ್ಯಮಾನ್ಯ ಭಕ್ತರಾಗಲಿ ಪ್ರಶ್ನಿಸಲಿಲ್ಲ. ಶರಣರ ಈ ವಾಂಛೆಯ ನಿರ್ಭಿಡೆ ಆಟಾಟೋಪಗಳು ಮಠದ ಚಿಕ್ಕ–ಚಿಕ್ಕ ಮಕ್ಕಳಲ್ಲಿಯೂ, ವ್ಯಂಗ್ಯದ, ಲೇವಡಿಯ, ಕುಹುಕದ ಚರ್ಚೆಗಳಾದರೂ... ಯಾರು., ಎಂದೆಂದಿಗೂ ತಲೆಕೆಡಿಸಿಕೊಳ್ಳಲಿಲ್ಲ.

ಶೋಷಿತ ದಿಟ್ಟ ಮಕ್ಕಳು

ದುರಂತವೆಂದರೆ, ಕಳೆದ ಐದಾರು ವರ್ಷಗಳಿಂದ ಶಿವಮೂರ್ತಿ ಮುರುಘಾ ಶರಣರ ಕಾಮಕುಂಡದಲ್ಲಿ ಹಗಲು–ರಾತ್ರಿಯೆನ್ನದೆ ಬೇಯುತ್ತಿದ್ದ ಅನೇಕ ಅಮಾಯಕ–ಮುಗ್ಧ ಅಪ್ರಾಪ್ತ ವಿದ್ಯಾರ್ಥಿನಿಯರು ಮೂಕ ಪಶುಗಳಾಗಿದ್ದರು ಎನ್ನಲಾಗುತ್ತಿದೆ. ಕೆಲವರು ವಿದ್ಯಾಭ್ಯಾಸಕ್ಕೆ ಶರಣು ಹೇಳಿ ತಮ್ಮ–ತಮ್ಮ ಊರುಗಳಿಗೆ ತೆರಳಿದರು. ತಂದೆ–ತಾಯಿ ಕಳೆದುಕೊಂಡ ಅನಾಥರು, ಕಿತ್ತು ತಿನ್ನುವ ಬಡತನದಲ್ಲಿದ್ದ ಹೆಣ್ಣುಮಕ್ಕಳು ಅನ್ಯಮಾರ್ಗವಿಲ್ಲದೆ 'ರಣಹದ್ದಿ'ಗೆ ನಿತ್ಯ ಆಹಾರವಾಗುತ್ತಿದ್ದರು!!

ಕಳೆದ ಐದಾರು ವರ್ಷದಿಂದ ಮುರುಘಾ ಶರಣರ ಲೈಂಗಿಕ ದೌರ್ಜನ್ಯಕ್ಕೊಳಗಾಗಿದ್ದ ಪಳಗಿದ ಹೆಣ್ಣುಮಗಳು ಮಠದ ಮಡಿಲು ವಿದ್ಯಾರ್ಥಿ ನಿಲಯದ ವಾರ್ಡನ್ ಆಗಿದ್ದಳು. ಮಠದ ವಾರ್ಡನ್ ಕೆಲಸಕ್ಕಿಂತ ಮುಖ್ಯವಾಗಿ ಶರಣರ ಪಲ್ಲಂಗಕ್ಕೆ ಅಮಾಯಕ–ಮುಗ್ಧ ವಿದ್ಯಾರ್ಥಿನಿಯರನ್ನು ತಳ್ಳುವುದು ಈಕೆಯ ಕಸುಬಾಗಿತ್ತು ಎನ್ನುವ ಆರೋಪ ಇದೆ. ಒಪ್ಪದಿದ್ದ ಮಕ್ಕಳು ಪಾಪ.., ಅವಮಾನವೀಯ ಶಿಕ್ಷೆಗೂ ಒಳಗಾಗುತ್ತಿದ್ದರು ಎನ್ನುವುದು ಈಗಿನ ಆರೋಪ. ಇಂತಹ ನರಕದಲ್ಲಿ ಬೇಯುವುದಕ್ಕಿಂತ... ಎಲ್ಲಿಯಾದರೂ ಓಡಿಹೋಗಿ ಜೀವ ಕಳೆದುಕೊಳ್ಳೋಣ ಎಂದು ತೀರ್ಮಾನಿಸಿ... ಆ ಇಬ್ಬರು ವಿದ್ಯಾರ್ಥಿನಿಯರು ರಾಜಧಾನಿ ಬೆಂಗಳೂರು ತಲುಪಿದ್ದರು.

ಚಿತ್ರದುರ್ಗವನ್ನು ಬಿಟ್ಟರೆ, ಬೇರೊಂದು ಊರು ಗೊತ್ತಿರದ ಈ ವಿದ್ಯಾರ್ಥಿನಿಯರು ಮಾಯಾನಗರಿ ಬೆಂಗಳೂರಿನಲ್ಲಿ ಅಕ್ಷರಶಃ ತಬ್ಬಲಿಯಾಗಿದ್ದರು. ಆಟೋ ಚಾಲಕರೊಬ್ಬರ ಕೈಗೆ ಸಿಕ್ಕು ಕಾಟನ್ ಪೇಟೆ ಪೊಲೀಸ್ ಸ್ಟೇಷನ್ ತಲುಪಿ... ತಮ್ಮ ಸಂಕಷ್ಟ ಹೇಳಿಕೊಂಡರು ಪೊಲೀಸರಾದವರೂ ಮತ್ತೆ ಮಠಕ್ಕೆ ಕಳುಹಿಸುವ ತೀರ್ಮಾನಕ್ಕೆ ಬಂದರಾದರೂ.. ಮಕ್ಕಳು ಒಪ್ಪಲಿಲ್ಲ. ಹಾಗಾದರೆ.. ಎಲ್ಲಿಗೆ ಹೋಗುತ್ತೀರಿ? ಎಂಬ ಪ್ರಶ್ನೆಗೆ ಮಠದ ಆಡಳಿತಾಧಿಕಾರಿ ಎಸ್. ಕೆ. ಬಸವರಾಜನ್ ಅವರ ಮೊಬೈಲ್ ಸಂಪರ್ಕ ಸಂಖ್ಯೆ ಕೊಟ್ಟರು. ಪೊಲೀಸರು ಫೋನಾಯಿಸಿ... ವಿಷಯ ತಿಳಿಸುತ್ತಿದ್ದಂತೆಯೇ, ಮರುದಿನ ಕಾಟನ್ ಪೇಟೆ ಪೊಲೀಸ್ ಠಾಣೆಗೆ ಬಂದ ಆಡಳಿತಾಧಿಕಾರಿ ಎಸ್.ಕೆ. ಬಸವರಾಜನ್, ಮತ್ತವರ ಪತ್ನಿ ಸೌಭಾಗ್ಯ ಬಸವರಾಜನ್ ಠಾಣೆಗೆ ಮುಚ್ಚಳಿಕೆ ಬರೆದುಕೊಟ್ಟು ಚಿತ್ರದುರ್ಗಕ್ಕೆ ಕರೆದೊಯ್ದರು.

ಮತ್ತೆ ನರಕದ ಸಹವಾಸ ಬೇಡ!?

ಮಕ್ಕಳನ್ನು ಮತ್ತೆ ಮಠದ ವಿದ್ಯಾರ್ಥಿನಿಲಯಕ್ಕೆ ಕಳುಹಿಸಲು ಬಸವರಾಜನ್ ದಂಪತಿಗಳು ಯತ್ನಿಸಿದರಾದರೂ, ಮಕ್ಕಳು ಅಕ್ಷರಶಃ ಬಿಕ್ಕಿ.. ಬಿಕ್ಕಿ.. ಅತ್ತರು! ಮತ್ತೆ ಆ ಕಾಮಕೂಪದ ನರಕಕ್ಕೆ ಹೋಗಲಾರೆವು ಎಂದು ಹಟ ಹಿಡಿದರು. ಈ ಘಟನೆಯ ಸಂದರ್ಭದಲ್ಲಿ ಮುರುಘಾ




ಮುರುಘಾಸ್ವಾಮಿ ಅತ್ಯಾಚಾರ ಪ್ರಕರಣ:

ಬಸವಶ್ರೀ ಪ್ರಶಸ್ತಿ ಹಿಂತಿರುಗಿಸಿದ ಪಿ.ಸಾಯಿನಾಥ್

ಮುರುಘಾಮಠದಿಂದ ಪಡೆದಿದ್ದ "ಬಸವಶ್ರೀ" ಪ್ರಶಸ್ತಿಯನ್ನು ಹಿರಿಯ ಪತ್ರಕರ್ತ ಪಿ.ಸಾಯಿನಾಥ್ ವಾಪಸ್ಸ ನೀಡುವ ಮೂಲಕ ಪ್ರತಿರೋಧ ತೋರಿಸಿದ್ದಾರೆ. ಮುರುಘಾ ಸ್ವಾಮೀಜಿ ವಿರುದ್ಧ ಕೇಳಿ ಬಂದಿರುವ ಲೈಂಗಿಕ ದೌರ್ಜನ್ಯವನ್ನು ಅವರು ಖಂಡಿಸಿದ್ದಾರೆ.

ಈ ಕುರಿತು ಪತ್ರಿಕಾ ಹೇಳಿಕೆ ಬಿಡುಗಡೆ ಮಾಡಿರುವ ಸಾಯಿನಾಥ್, ಚಿತ್ರದುರ್ಗದ ಶ್ರೀ ಮುರುಘಾಮಠದ ಮಠಾಧೀಶರಾದ ಶ್ರೀ ಶಿವಮೂರ್ತಿ ಮುರುಘಾ ಶರಣರು ಭಾಗಿಯಾಗಿರುವ ಲೈಂಗಿಕ ಪ್ರಕರಣದ ಸುದ್ದಿಯನ್ನು ನಾನು ಮಾಧ್ಯಮಗಳ ಮೂಲಕ ತಿಳಿದು ಹೆಚ್ಚು ವಿಚಲಿತನಾಗಿದ್ದೇನೆ ಎಂದಿದ್ದಾರೆ. ಅವರು ಈಗ ಪೋಕ್ಸೊ ಮತ್ತು ಎಸ್‌ಸಿ/ಎಸ್‌ಟಿ ಕಾಯ್ದೆಯಡಿ ಮಕ್ಕಳ ಮೇಲೆ, ವಿಶೇಷವಾಗಿ ಪ್ರೌಢಶಾಲಾ ಬಾಲಕಿಯರ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ್ದಾರೆ ಎಂಬ ಆರೋಪವನ್ನು ಎದುರಿಸುತ್ತಿದ್ದಾರೆ. ಇದರ ವಿರುದ್ಧ ದೇಶವ್ಯಾಪಿ ಪ್ರತಿರೋಧ ವ್ಯಕ್ತವಾಗುತ್ತಿದೆ. ಈ ಪ್ರತಿರೋಧಕ್ಕೆ ನಾನು ಕೈ ಜೋಡಿಸುತ್ತಿದ್ದು, 2017 ರಲ್ಲಿ ಮಠವು ನನಗೆ ನೀಡಿದ ಬಸವಶ್ರೀ ಪ್ರಶಸ್ತಿಯನ್ನು(ಪ್ರಶಸ್ತಿ ಫಲಕ, ಐದು ಲಕ್ಷ ರೂ. ಮೊತ್ತ) ಹಿಂದಿರುಗಿಸುತ್ತೇನೆ ಎಂದು ತಿಳಿಸಿದ್ದಾರೆ.

ಈ ಘೋರ ಘಟನೆಗಳನ್ನು ಬೆಳಕಿಗೆ ತಂದ ಮೈಸೂರು ಮೂಲದ ಎನ್‌ಜಿಒ "ಒಡನಾಡಿ"ಯ ಪ್ರಯತ್ನಗಳನ್ನು ಪಿ.ಸಾಯಿನಾಥ್ ಶ್ಲಾಘಿಸಿದ್ದಾರೆ. ಸಾಮಾಜಿಕ ಅನಿಷ್ಟಗಳ ವಿರುದ್ಧದ ಹೋರಾಟದ ಬಗ್ಗೆ ಮೆಚ್ಚುಗೆಯನ್ನು ದಾಖಲಿಸಿದ್ದಾರೆ. ಹಗರಣದ ತನಿಖೆಯನ್ನು ತೀವ್ರವಾಗಿ ಮುಂದುವರಿಸಬೇಕು ಮತ್ತು ಯಾವುದೋ ಒತ್ತಡಕ್ಕೆ ಮಣಿದು ರಾಜಿ ಮೂಲಕ ಈ ಪ್ರಕರಣವನ್ನು ಮುಚ್ಚಿ ಹಾಕಬಾರದೆಂದು ಕರ್ನಾಟಕ ಸರಕಾರವನ್ನು ಆಗ್ರಹಿಸಿದ್ದಾರೆ.



2017 ರಲ್ಲಿ ನೀಡಲಾಗಿದ್ದ ಬಸವಶ್ರೀ ಪ್ರಶಸ್ತಿ.

ಶರಣರು ಮಾರಿಷಸ್ ವಿದೇಶ ಪ್ರವಾಸದಲ್ಲಿದ್ದರು. ಐದಾರು ದಿನ ಬಿಟ್ಟು ಮಠಕ್ಕೆ ಮರಳಿ ವಿಷಯ ತಿಳಿದು ತಲ್ಲಣಿಸಿದರು. ನಖ-ಶಿಖಾಂತ ಉರಿದು ಹೋದರು. ಮಕ್ಕಳು ಏನೇನು ಸತ್ಯ ಹೇಳಿರಬಹುದೆಂಬ ಅವ್ಯಕ್ತ ಭಯಕ್ಕೂ ಒಳಗಾದರು. ಆದರೂ ಭಂಡ ಧೈರ್ಯ. ಬಸವರಾಜನ್ ಅವರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳದೆ, ಆತನ ಆಡಳಿತಾಧಿಕಾರಿ ಕಚೇರಿಗೆ ಬೀಗ ಜಡಿದರು. ಮತ್ತೆ ಮಠಕ್ಕೆ ಕಾಲಿಡದಂತೆ ಫರ್ಮಾನು ಹೊರಡಿಸಿದರು.

ಹದಿನಾಲ್ಕು ವರ್ಷ ಮಠದ ಹೊರಗಿದ್ದು ವನವಾಸ ಎದುರಿಸಿದ ಬಸವರಾಜನ್, ಮೂರ್‍ನಾಲ್ಕು ತಿಂಗಳ ಹಿಂದೆ ಮತ್ತೆ ಆಡಳಿತಾಧಿಕಾರಿಯಾಗಿ ಹಿಂದಿರುಗಿದರಾದರೂ.., ಹಳೆಯ ಅಧಿಕಾರ, ಸ್ವತಂತ್ರ ಸಿಕ್ಕದಾಗಿತ್ತು. ಹೀಗಾಗಿ ಕಾಮಕೂಟದ ತಂತ್ರವನ್ನು ಹೆಣೆದವರು ಇದೇ ಬಸವರಾಜನ್ ಆಗಿರಬಹುದೇ ಎಂಬ ಆರೋಪವಿದೆ. ಅದು ತನಿಖೆಯಿಂದ ಗೊತ್ತಾಗಬೇಕಿದೆ. ಆದರೆ ಮಕ್ಕಳು ಶರಣನ ಕಾಮಕೂಟದ ಬಲಿಪಶುಗಳಾಗಿರುವುದನ್ನು ಅಷ್ಟು ಸುಲಭದಲ್ಲಿ ತಳ್ಳಿ ಹಾಕುವಂತಿಲ್ಲ.

ಶರಣರಿಂದ ಲೈಂಗಿಕ ದೌರ್ಜನ್ಯಕ್ಕೊಳಗಾದ ಇಬ್ಬರು ಅಮಾಯಕ ವಿದ್ಯಾರ್ಥಿನಿಯರು ಆಡಳಿತಾಧಿಕಾರಿ ಬಸವರಾಜನ್ ಕೈಬಿಟ್ಟು, ಬೇರೆಯವರೊಂದಿಗೆ ಮೈಸೂರಿನ ಒಡನಾಡಿ ಸಂಸ್ಥೆಯ ಸ್ಟಾಂಲ್ಲಿ ಮತ್ತು ಪರಶುರಾಮ ಅವರನ್ನು ಭೇಟಿಯಾಗಿ ತಮಗಾದ ಅನ್ಯಾಯವನ್ನು... ಶೋಷಣೆಯನ್ನು... ಎಳೆ-ಎಳೆಯಾಗಿ ಬಿಚ್ಚಿಟ್ಟಿದ್ದಾರೆ. ಶರಣರ ಕಾಮವಾಂಛೆಗೆ ತಾವಷ್ಟೇ ಅಲ್ಲದೆ ನೂರಾರು ಮಕ್ಕಳು ಬಲಿಯಾಗಿದ್ದಾರೆ ಎಂದು ದೂರು ನೀಡಿದ್ದಾರೆ. ಇದು ಬೆಳಕಿಗೆ ಬಂದರೆ... ಇನ್ನೂ ಎಂಟ್ಹತ್ತು ಮಕ್ಕಳು ಸತ್ಯ ಹೇಳಲು ಸಿದ್ದರಿದ್ದಾರೆ ಎಂಬ ಸತ್ಯವನ್ನು ಬಿಚ್ಚಿಟ್ಟ ರೀತಿಯಿಂದಾಗಿ... ಬೆಚ್ಚಿಬಿದ್ದ ಒಡನಾಡಿ ಸಂಸ್ಥೆ ಸಿ.ಡಬ್ಲ್ಯು.ಸಿ. ಮೂಲಕ ಮೈಸೂರಿನ ನಜರಬಾದ್ ಠಾಣೆಯಲ್ಲಿ ಆಗಸ್ಟ್ 26 ರಂದು ಶರಣರ ಮೇಲೆ ನೀಡಿದ ದೂರಿನಿಂದಾಗಿ 'ಪೋಕ್ಸೋ' ಕಾಯ್ದೆ ಅಡಿಯಲ್ಲಿ ಲೈಂಗಿಕ ದೌರ್ಜನ್ಯ ಮತ್ತು ಶೋಷಣೆಯ ಮೊಕದ್ದಮೆ ದಾಖಲಾಗಿದೆ. ನಂತರ ಆ ಮೊಕದ್ದಮೆ ಚಿತ್ರದುರ್ಗ ಗ್ರಾಮಾಂತರ ಪೊಲೀಸ್ ಠಾಣೆ ವರ್ಗಾವಣೆಯಾಯ್ತು.

ಪೊಲೀಸ್ ವೈಫಲ್ಯ

ಮೊಕ್ಕದ್ದಮೆ ದಾಖಲಾಗುತ್ತಿದ್ದಂತೆ, ಶರಣರು ಕಳ್ಳನರಿಯಂತೆ ಮಠದಲ್ಲಿ ಅಡಗಿ ಕುಳಿತರು. ಮಾಧ್ಯಮಗಳಿಗೆ ಬೆನ್ನು ತಿರುಗಿಸಿದರು. ಪೋಕ್ಸೋ ಕಾಯ್ದೆ ಅಡಿ ಮೊಕದ್ದಮೆ ದಾಖಲಾಗುತ್ತಿದ್ದಂತೆ ತಕ್ಷಣ ಪೊಲೀಸರು ಜಾಗೃತರಾಗಿ ಆರೋಪಿ ಶರಣರನ್ನು ಬಂಧಿಸಬೇಕಿತ್ತು. ಅದನ್ನು ಬಿಟ್ಟು ಚಿತ್ರದುರ್ಗದ ಒಟ್ಟು ಪೊಲೀಸ್ ವ್ಯವಸ್ಥೆ ಆರೋಪಿಯನ್ನೇ ರಕ್ಷಿಸುವ ಮೇಲೋಡ್ರಾಮಾವನ್ನು ಸೃಷ್ಟಿಸಿತು. ಶರಣರು ಈ ಅರೋಪದಿಂದ ಮುಕ್ತರಾಗುತ್ತಾರೆಂದು ಸ್ವತಃ ಗೃಹಮಂತ್ರಿ ಅರಗ ಜ್ಞಾನೇಂದ್ರ ಅವರೇ ಜಡ್ಜ್‌ಮೆಂಟ್ ಕೊಡತೊಡಗಿದರು. ಕೇಂದ್ರ ಮಂತ್ರಿ ಪ್ರಹ್ಲಾದ್ ಜೋಷಿ, ನಿಕಟಪೂರ್ವ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಆರೋಪಿಯ ಪರವಾಗಿಯೇ ಭಜನೆ ಮಾಡಿದರು. ದೌರ್ಜನ್ಯಕ್ಕೊಳಗಾದ ಮಕ್ಕಳ ಪರ ನಿಂತು, ಪಾರದರ್ಶಕ ತನಿಖೆಗೆ ಒತ್ತಾಯ ಮಾಡಬೇಕಾದ ಚಿತ್ರದುರ್ಗದ ಶಾಸಕ ತಿಪ್ಪಾರೆಡ್ಡಿ, ಹೊಳಲ್ಕೆರೆ ಶಾಸಕ ಎಂ. ಚಂದ್ರಪ್ಪ ಮಠಕ್ಕೆ ಡಳಾಯಿಸಿ.. ಆರೋಪಿ ಶರಣನಿಗೆ ಸಾಂತ್ವನ ಹೇಳಿದರು!

ಕೆಲ ಮಾಧ್ಯಮಗಳು ಘಟನೆಯ ಸತ್ಯಸತ್ಯತೆ ಕನ್ನಡಿ ಹಿಡಿದವು. ರಾಷ್ಟ್ರೀಯ ಚಾನೆಲ್‌ಗಳೆರಡು ಆರೋಪಿ ವಿರುದ್ಧ ಟೊಂಕ ಕಟ್ಟಿ ನಿಂತವು. ಜನರ ಪ್ರತಿಭಟನೆಯ ಕಾವು ಭುಗಿಲೇಳತೊಡಗಿತು.

ಪರಿಸ್ಥಿತಿಯ ಗಂಭೀರತೆ ಅರಿತ ಮುರುಘಾಶರಣ ಎಫ್.ಐ.ಆರ್. ದಾಖಲಾದ... ನಾಲ್ಕನೇ ದಿನ ಬೆಳ್ಳಂ-ಬೆಳಗ್ಗೆ ಗಂಟು-ಮೂಟೆ ಕಟ್ಟಿಕೊಂಡು ತನ್ನ ಸಹಕಾರಿ ಮತ್ತೊಬ್ಬ ಕಾವಿಶಿಷ್ಯನೊಂದಿಗೆ ಪರಾರಿಯಾಗುವಾಗ ಧಾರವಾಡದ ಬಳಿಯ ಬಂಕಾಪುರ ಚೆಕ್‌ಪೋಸ್ಟ್ ಬಳಿ ಸಿಕ್ಕುಬಿದ್ದರು. ತಕ್ಷಣವೇ ಜಾಗೃತಗೊಂಡ ಪೊಲೀಸರು ಸೂಕ್ತ ರಕ್ಷಣೆಯ ಮೂಲಕ ಶರಣನನ್ನು ವಾಪಾಸ್ ದುರ್ಗದ ಮಠಕ್ಕೆ ಕರೆ ತಂದು ಕಾವಲು ಶುರುವಿಟ್ಟುಕೊಂಡರು.

ಶರಣ ಪತನ ಪ್ರತಾಪ

ಮತ್ತೆ ಭಂಡತನ ಪ್ರದರ್ಶಿಸಿದ ಶರಣ, "ನಾನು ತಪ್ಪೇ ಮಾಡಿಲ್ಲ" ಎಂದು ಸುಳ್ಳು ಹೇಳುತ್ತಾ... "ನನ್ನ ವಿರುದ್ಧ ಷಡ್ಯಂತ್ರ ನಡೆಯುತ್ತಿದೆ. ನಾನೊಬ್ಬ ದಾರ್ಶನಿಕ... ಹೀಗಾಗಿ ನನ್ನನ್ನೂ ಕೆಲವರು ಟಾರ್ಗೆಟ್ ಮಾಡಿದ್ದಾರೆ. ಇದು ಬುದ್ಧನನ್ನು, ಬಸವನನ್ನು, ಗಾಂಧಿಯನ್ನು ಕೊಂದ ನೆಲ. ಇನ್ನೂ ನನ್ನನ್ನೂ ಬಿಟ್ಟಾರೆಯೇ..?!" ಎಂದು ಆ ಮಹಾತ್ಮರ ಮಟ್ಟಕ್ಕೆ ತನ್ನನ್ನೂ.. ತಾನು ನವೀಕರಿಸಿಕೊಳ್ಳುವ ನಾಚಿಕೆಗೇಡಿನ ಆತ್ಮರತಿಗೆ ಇಳಿದದ್ದು ವಿಚಿತ್ರ!

ಇಷ್ಟು ಮಾತ್ರವಲ್ಲದೆ, ತಪ್ಪು ಮಾಡಿದ ಪಾಪಿಯಂತೆ, ಷಡ್ಯಂತ್ರಗಾರರೊಂದಿಗೆ... ನಾನು ಸಂಧಾನಕ್ಕೂ ಸೈ! ಸಂಘರ್ಷಕ್ಕೂ ಜೈ!! ಎನ್ನುವ ಪತನ ಪ್ರತಾಪದ ಭಾಷಣವನ್ನು ಮಾಡಿದ್ದು ಮತ್ತೂ ಆಶ್ಚರ್ಯ. ಯಾರೊಂದಿಗೆ ಸಂಧಾನ..? ಷಡ್ಯಂತ್ರಗಾರರೊಂದಿಗೋ..?! ಸಮರವೆಂದರೆ, ತನ್ನ ಕಾಮಕೂಟದ ನರಕದಲ್ಲಿ ಬೆಂದ ಅಮಾಯಕ ಮಕ್ಕಳೊಂದಿಗೊ?! ಎಂಬುದು ತನಿಖೆಯಿಂದಲೇ ಗೊತ್ತಾಗಬೇಕಿದೆ. ಇಷ್ಟೆಲ್ಲಾ ನಾಟಕೀಯ ಬೆಳವಣಿಗೆಗಳು ನಡೆದ ಮೇಲೆ ಶರಣನ ಬಂಧನವಾಗಿದೆ. ಬಂಧನಕ್ಕೂ ಮುನ್ನ ಆರೋಗ್ಯವಾಗಿಯೇ ಇದ್ದ 'ಹೃದಯಹೀನ' ಮುರುಘಾ ಶರಣರು, 'ಇಲ್ಲದ' ತನ್ನ ಹೃದಯದ ಅನಾರೋಗ್ಯವನ್ನು ಮುಂದಿಟ್ಟುಕೊಂಡು ಕಳ್ಳ ನರಿಯ ವೇಷ ತೊಟ್ಟ!!.

ಸಮಗ್ರ ತನಿಖೆಯಾಗಲಿ

ಕಾಲ-ಕಾಲಕ್ಕೆ ವೇಷ ತೊಡುವುದರಲ್ಲಿ ಅಕ್ಷರಶಃ ನಿಸ್ಸೀಮನಾದ ಶರಣ ಎಂಬ ಈ ಕಾಮಕ್ರಿಮಿಯ ಕಾಮಕೂಟದಲ್ಲಿ ನೂರಾರು ಅಮಾಯಕ ಹೆಣ್ಣುಗಳು ಕೌರವ ನರಕದಲ್ಲಿ ಬೆಂದು ಹೋಗಿರುವ ಭಾರೀ ಆರೋಪಗಳಿವೆ. ಅಂತಹ ನತದೃಷ್ಟರಿಗೆ ನ್ಯಾಯ ಸಿಗಬೇಕು. ನಮ್ಮ ಜನರ ಶ್ರದ್ಧಾ ಕೇಂದ್ರಗಳಾದ ಮಠಮಾನ್ಯಗಳು ಅವಿಮುಕ್ತ ಕ್ಷೇತ್ರಗಳಾಗಬೇಕೆಂದರೆ.. ಶರಣರ ಈ ಕಾಮಕಾಂಡ ಸಮಗ್ರ ತನಿಖೆಗೆ ಒಳಪಡಬೇಕಿದೆ.

ಇರುವೆಗೂ ಸಿಹಿ ವಿಷವಾದ ದಿನ

ಇಂದು
ಅಮೃತ ಮಹೋತ್ಸವದ
ಸಡಗರ, ಸಂಭ್ರಮ
ಮುಗಿಲೆತ್ತರಕೆ ಹಾರಿದ
ಭಾರತದ ಬಾವುಟ
ಜನಗಣ ಮನ ಹಾಡುವ ಸಮಯ
ಯಾವುದೋ ಅಪಸ್ವರ
ಗಾಂಧಿಯ ಕೊಂದವನಿಗೂ ಜೈ
ಎಂಬ ಜಯಕಾರ
ಎಲ್ಲೆಲ್ಲೂ ಗುಲ್ಲು
ಗಲ್ಲು ಶಿಕ್ಷೆಗೆ
ಗುರಿಯಾಗಬೇಕಾದವರ
ಬಿಡುಗಡೆಯ ಸುದ್ದಿ
ಜೈಲಿನಿಂದ ಹೊರಬಂದ
ಕೊಲೆಗಡುಕರು
ಅತ್ಯಾಚಾರಿಗಳ
ಕೊರಳಿಗೆ ಪುಷ್ಪಮಾಲೆ
ಯುದ್ಧ ಗೆದ್ದುಬಂದವರೇನೋ
ಎಂಬಂತೆ ಭವ್ಯ ಸ್ವಾಗತ
ಸಿಹಿ ಹಂಚಿಕೆಯ ಸಂಭ್ರಮ
ಸಂಭ್ರಮ ಪಟ್ಟವರು ಯಾರು
ಸಂಸ್ಕೃತಿ ರಕ್ಷಕರೆಂದು
ಹಣೆಪಟ್ಟಿ ಕಟ್ಟಿಕೊಂಡವರು
ಅವರು
ಸಿಹಿ ಹಂಚಿ ತಿನ್ನುವಾಗ
ಉದುರಿದ ತುಣುಕುಗಳನ್ನು
ಇರುವೆಯೂ ಮೂಸುತ್ತಿಲ್ಲ
ಸಿಹಿಯೂ ವಿಷವಾಗಿದೆ
ಇರುವೆಗೆ ಈ ದಿನ
ಅವರು
ವಿಕೃತಿ ಮೆರೆದ
ಈ ದಿನ
ಅಶೋಕನ ಧಮ್ಮಚಕ್ರ
ತಲೆತಗ್ಗಿಸಿದೆ
ನ್ಯಾಯಕ್ಕಾಗಿ ಹೋರಾಡಿದ
ಸಹೋದರಿ
ಬಿಲ್ಕಿಷ್ ಬಾನುವಿನ ಹೃದಯವೂ
ಒಡೆದು ಚೂರಾಗಿದೆ ಈ ದಿನ
ಈ ಹೇಯಕೃತ್ಯದ ಬಗ್ಗೆ
ಮಾತನಾಡಲು
ಶಬ್ದಗಳೇ ಇಲ್ಲ
ಭಾರತ ಮಾತೆಯ
ಕೊರಳಲ್ಲಿ

-ಹುಲಿಕಟ್ಟಿ ಚನ್ನಬಸಪ್ಪ

"ಜಾತಿಗೆ ಕುಮ್ಮಕ್ಕು ಕೊಡುವವನೇ ಜಗದ್ಗುರು. ಮಠ, ಜಗದ್ಗುರುಗಳ ಮೂಲದ ಕಲ್ಪನೆಯ ಬಗ್ಗೆ ಯಾರೇ ಎಂಥ ಭಾಷಣ ಕೊಟ್ಟರೂ ನಂಬಬೇಡಿ; ಧರ್ಮವನ್ನು ಜಾತಿಯನ್ನಾಗಿ ಮಾಡಿ ಜನರನ್ನು ಜನರಿಂದ ಪ್ರತ್ಯೇಕಿಸುವ ಸಂಸ್ಥೆ, ವ್ಯಕ್ತಿಗಳು ಇವೆಲ್ಲ. ಆದ್ದರಿಂದ ಒಂದು ಎಚ್ಚರಿಕೆಯ ಮಾತು ಹೇಳುತ್ತೇನೆ.

ಜಗದ್ಗುರುವೊಬ್ಬ ನೀಚನಾಗಿದ್ದಾಗ ಅವನ ಪ್ರಭಾವದಿಂದ ತಪ್ಪಿಸಿಕೊಳ್ಳುವುದು ಸುಲಭ; ಆತ ಅಪಾಯಕಾರಿಯೆಂದು ಎಲ್ಲರಿಗೂ ಗೊತ್ತಾಗುತ್ತದೆ. ಆದರೆ ಆತ ಬುದ್ಧಿಜೀವಿ, ವಿಚಾರವಾದಿ, ಕ್ರಾಂತಿಕಾರಿ ಎನ್ನುವಂತೆ ಮಾತನಾಡಿದಾಗಲೇ ಹೆಚ್ಚು ಅಪಾಯಕಾರಿ. ತಮ್ಮ ದುಷ್ಟ ಪ್ರಭಾವವನ್ನು ಮುಂದುವರೆಸಿಕೊಂಡು ಹೋಗಿ ಜನರನ್ನು ಮಾನಸಿಕ ಗುಲಾಮಗಿರಿಯಲ್ಲಿಡಲು ಬೇಕಾದ ಎಲ್ಲ ತಂತ್ರಗಳನ್ನು ಬಳಸುವ ಧೂರ್ತತನ ಇವರಲ್ಲಿರುತ್ತದೆ..."

-ಪಿ. ಲಂಕೇಶ್

ಉಲ್ಲೇಖ: -'ಒಂದು ನೀತಿ ಸಂಹಿತೆ' (ಅಕ್ಟೋಬರ್ 26, 1986) ಕೃಪೆ: -ಟೀಕೆ-ಟಿಪ್ಪಣಿ (ಸಂಪುಟ- 1)

ಅನ್ಯಾಯದ ವಿರುದ್ಧ ನ್ಯಾಯದ ಪರ ರಾಜ್ಯವ್ಯಾಪಿ ಮೊಳಗಿದ ಪ್ರತಿಭಟನೆ



ಬೆಂಗಳೂರು:
ದೇಶದಲ್ಲಿ ಮಹಿಳೆಯ ಘನತೆಗೆ ಎದುರಾಗುತ್ತಿರುವ ದಾಳಿಯಿಂದಾಗಿ ಆತಂಕದ ವಾತಾವರಣ ನಿರ್ಮಾಣವಾಗಿದೆ. ಇದರಿಂದ ಒಂದೆಡೆ ಅತ್ಯಾಚಾರಿ ಖೈದಿಗಳನ್ನು ಸನ್ನಡತೆ ಆಧಾರದಲ್ಲಿ ಬಿಡುಗಡೆ ಮಾಡಲಾಗುತ್ತಿದೆ. ಮತ್ತೊಂದೆಡೆ ಲೈಂಗಿಕ ದೌರ್ಜನ್ಯ ನಡೆಸಿದವರ ವಿರುದ್ಧ ಕೈಗೊಳ್ಳುವ ಕ್ರಮಗಳು ವಿಳಂಬತೆಯಿಂದಾಗಿ ಅನ್ಯಾಯಕ್ಕೆ ಒಳಗಾದವರಿಗೆ ನ್ಯಾಯದ ಭರವಸೆ ವಿಳಂಬವಾಗಲಿದೆ.

ಮಹಿಳೆಯರ ಘನತೆಯ ಬದುಕನ್ನು ಕಾಪಾಡುವುದು ದೇಶದ ಕರ್ತವ್ಯವೆಂದು ಪ್ರಧಾನಮಂತ್ರಿ ನರೇಂದ್ರಮೋದಿ ಸ್ವಾತಂತ್ರ್ಯ ದಿನದಂದು ರಾಷ್ಟ್ರ ಧ್ವಜವನ್ನು ಹಾರಿಸುವಾಗ ಕರೆ ಕೊಟ್ಟರು. ವಿಪರ್ಯಾಸವೆಂದರೆ ಅದೇ ದಿನ ತನ್ನ ಘನತೆಯನ್ನು ಮಣ್ಣು ಪಾಲು ಮಾಡಿದ ಪಾತಕಿಗಳ ವಿರುದ್ಧ ಸರಿಸುಮಾರು ಎರಡು ದಶಕಗಳ ಕಾಲ ಹೋರಾಟ ಮಾಡಿ ನ್ಯಾಯ ಪಡೆದ ಸಮಾಧಾನದಲ್ಲಿದ್ದ ಬಿಲ್ಕಿಸ್ ಬಾನೊಗೆ ಮತ್ತು ದೇಶದ ಎಲ್ಲ ಜೀವಪರ ಮನುಷ್ಯರಿಗೆ ಆಘಾತ ಕಾದಿತ್ತು. ಅತ್ಯಾಚಾರಿ ಆರೋಪಿಗಳನ್ನು ಬಿಡುಗಡೆಗೊಳಿಸಲಾಯಿತು.

ಹಾಗೆಯೇ ರಾಜ್ಯದಲ್ಲಿ ಬಾಲಕಿಯರ ಮೇಲೆ ಲೈಂಗಿಕ ದೌರ್ಜನ್ಯ ನಡೆಸಿ ಪೋಕ್ಸೋ ಕಾಯ್ದೆಯಡಿ ಆರೋಪಿಯಾಗಿರುವ ಚಿತ್ರದುರ್ಗದ ಮುರುಘಾ ಮಠದ ಪೀಠಾಧ್ಯಕ್ಷ ಶಿವಮೂರ್ತಿ ಶರಣರನ್ನು ಕಠಿಣ ಕಾನೂನಿನ ವಿಚಾರಣೆಗೆ ಒಳಪಡಿಸಿ ಕಠಿಣ ಶಿಕ್ಷೆ ನೀಡುವಂತೆ ಆಗ್ರಹಿಸಿ ರಾಜ್ಯದಲ್ಲಿ ಇಂದು(ಸೆಪ್ಟಂಬರ್ 02) ಅನ್ಯಾಯದ ವಿರುದ್ಧ ನ್ಯಾಯದ ಪರ ಆಗ್ರಹಿಸಿ ಪ್ರತಿಭಟನೆಗಳು ಮೊಳಗಿದವು.

2002ರಲ್ಲಿ ಗುಜರಾತ್ ನಲ್ಲಿ ಐದು ತಿಂಗಳ ಗರ್ಭಿಣಿ ಬಿಲ್ಕಿಸ್ ಬಾನೊ ಮತ್ತವಳ ತಂಗಿ, ತಾಯಿಯರ ಮೇಲೆ ಸಾಮೂಹಿಕ ಅತ್ಯಾಚಾರ ಮಾಡಿ ಬಿಲ್ಕಿಸ್ ಬಾನೊ ಅವಳ ಮೂರು ವರ್ಷದ ಕೂಸನ್ನು ಕಲ್ಲಿಗೆ ಬಡಿದು ಸಾಯಿಸಿದ ಅಪರಾಧ ಸಾಬೀತಾಗಿ ಜೀವಾವಧಿ ಶಿಕ್ಷೆ ಅನುಭವಿಸುತ್ತಿದ್ದ 11 ಜನರನ್ನು ಗುಜರಾತ್ ಬಿ.ಜೆ.ಪಿ. ರಾಜ್ಯ ಸರಕಾರ ಆಗಸ್ಟ್ 15ರಂದು ಸ್ವಾತಂತ್ರ್ಯ ದಿನದಂದು ಬಿಡುಗಡೆ ಗೊಳಿಸಿತು. ಇನ್ನು ರಾಜಸ್ಥಾನದಲ್ಲಿ ದಲಿತ ಬಾಲಕ ಕುಡಿಯುವ ನೀರನ್ನು ಮುಟ್ಟಿದನೆಂದು ಶಿಕ್ಷಕನೇ ಹೊಡೆದು ಕೊಂದ ಹೃದಯ ವಿದ್ರಾವಕ ಘಟನೆ ನಡೆದಿದೆ.

ಅಲ್ಲದೇ ಸ್ವಾತಂತ್ರ್ಯ ದಿನದಂದು ಮಹಿಳೆಯರ ಘನತೆಯ ರಕ್ಷಣೆಯ ಕುರಿತು ಭಾಷಣ ಮಾಡಿದ ಪ್ರಧಾನಮಂತ್ರಿ ನರೇಂದ್ರ ಮೋದಿ ಇದುವರೆಗೂ ಈ ಅವಮಾನದ ವಿರುದ್ಧ ಚಕಾರ ಶಬ್ದವೆತ್ತಿಲ್ಲ.

ಅದೇ ರೀತಿ ಕರ್ನಾಟಕದಲ್ಲಿ ಚಿತ್ರದುರ್ಗದ ಮುರುಘಾಮಠದ ಸ್ವಾಮಿಯ ಮೇಲೆ ಅಪ್ರಾಪ್ತ ಹೆಣ್ಣುಮಕ್ಕಳ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ ಆರೋಪವಿದೆ. ಪೋಕ್ಸೋ ಮತ್ತು ಎಸ್.ಸಿ.ಎಸ್.ಟಿ. ದೌರ್ಜನ್ಯ ತಡೆ ಕಾಯ್ದೆಯ ಅನ್ವಯ ದೂರು ದಾಖಲಾಗಿದೆ.

ಇಂತಹ ಘಟನೆಗಳು ಘೋರ ಅನ್ಯಾಯ ಮತ್ತು ಮಹಿಳಾ ಕುಲಕ್ಕೆ ಮಾಡಿದ ಅವಮಾನ ಎಂದು ಪ್ರತಿಭಟನಾಕಾರರು ಆಗ್ರಹಿಸಿದರು.

ಬಿಲ್ಕಿಸ್ ಬಾನೊಗೆ ನ್ಯಾಯ ಒದಗಿಸಲು 11 ಜನ ಅಪರಾಧಿಗಳ ಬಿಡುಗಡೆಯನ್ನು ರದ್ದು ಮಾಡಿ ತಕ್ಷಣವೇ ಜೈಲಿಗಟ್ಟಬೇಕು. ಅಮರಣಾಂತ ಕಠಿಣ ಸಜೆಗೆ ಒಳಪಡಿಸಬೇಕು ಎಂದು ಆಗ್ರಹಿಸಿದರು. ಅದೇ ರೀತಿ ರಾಜಸ್ಥಾನದಲ್ಲಿ ದಲಿತ ಬಾಲಕನನ್ನು ಸಾಯ ಹೊಡೆದ ಶಿಕ್ಷಕನಿಗೆ ಕಠಿಣ ಶಿಕ್ಷೆ ವಿಧಿಸಬೇಕು ಎಂದು ಆಗ್ರಹಿಸಿದರು.

ಜನರ ಒತ್ತಡದ ನಂತರವಷ್ಟೇ ಬಂಧನವಾದ ಮುರುಘರಾಜೇಂದ್ರ ಮಠದ ಸ್ವಾಮಿಗೆ ಯಾವುದೇ ಕಾರಣಕ್ಕೂ ಜಾಮೀನು ಸಿಗಲಾರದಂತೆ ಸೂಕ್ತ ಕ್ರಮ ಕೈಗೊಳ್ಳಬೇಕು. ಲೈಂಗಿಕ ದೌರ್ಜನ್ಯಕ್ಕೆ ಒಳಗಾದ ಅಪ್ರಾಪ್ತ ಬಾಲಕಿಯರಿಗೆ ಕಾನೂನು ರೀತ್ಯಾ ದೊರೆಯಬೇಕಾದ ಎಲ್ಲ ಸೌಲಭ್ಯಗಳನ್ನು ಕೂಡಲೇ ಒದಗಿಸಬೇಕು. ಪ್ರಕರಣಕ್ಕೆ ಸಂಬಂಧಿಸಿದ ಬಾಲಕಿಯರಿಗೆ ಮತ್ತು ಹಾಸ್ಟೆಲ್ ನಲ್ಲಿ ಇರುವ ಇತರ ವಿದ್ಯಾರ್ಥಿನಿಯರಿಗೆ ಮತ್ತು ಅವರ ಪೋಷಕರಿಗೆ ಸೂಕ್ತ ರಕ್ಷಣೆ ನೀಡಬೇಕು ಎಂದು ಆಗ್ರಹಿಸಿದರು.

ಪ್ರತಿಭಟನೆಯಲ್ಲಿ ಲೇಖಕಿ ಡಾ. ವಿಜಯಮ್ಮ, ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಮಾಜಿ ಅಧ್ಯಕ್ಷ ಎಸ್.ಜಿ. ಸಿದ್ದರಾಮಯ್ಯ, ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ ರಾಜ್ಯ ಉಪಾಧ್ಯಕ್ಷೆ ಕೆ.ಎಸ್. ವಿಮಲಾ, ಹೋರಾಟಗಾರ್ತಿ ಕೃಪಾ ಆಳ್ವ, ಲೇಖಕಿ ಕೆ.ಷರೀಫಾ, ದಲಿತ ಸಂಘರ್ಷ ಸಮಿತಿ (ಅಂಬೇಡ್ಕರ್ ವಾದ) ರಾಜ್ಯ ಸಂಚಾಲಕ ಮಾವಳ್ಳಿ ಶಂಕರ್, ರಿಪಬ್ಲಿಕ್ ಪಾರ್ಟಿ ಆಫ್ ಇಂಡಿಯಾ ಅಧ್ಯಕ್ಷ ಆರ್. ಮೋಹನ್ ರಾಜ್, ದಲಿತ ಹಕ್ಕುಗಳ ಸಮಿತಿ ರಾಜ್ಯ ಸಂಚಾಲಕ ಗೋಪಾಲಕೃಷ್ಣ ಅರಳಹಳ್ಳಿ, ಹೋರಾಟಗಾರರಾದ ಪ್ರಫುಲ್ಲಾ ಮಧುಕರ್, ಪುಷ್ಪಾ ಅಮರನಾಥ್, ಕವಯಿತ್ರಿ ವಸುಂಧರ ಭೂಪತಿ, ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ ರಾಜ್ಯ ಮುಖಂಡೆ ಗೌರಮ್ಮ, ಎಸ್ಎಫ್ಐ ರಾಜ್ಯ ಸಹ ಕಾರ್ಯದರ್ಶಿ ಭೀಮನಗೌಡ, ಎಸ್ಎಫ್ಐ ಮುಖಂಡ ಶಿವಕುಮಾರ್ ಸೇರಿದಂತೆ ಜನಪರ ಸಂಘಟನೆಗಳ ಕಾರ್ಯಕರ್ತರು ಇದ್ದರು.

ಹಾಸನ:
ಜಿಲ್ಲಾಧಿಕಾರಿ ಕಛೇರಿ ಎದುರು ದಲಿತ ಮತ್ತು ಜನಪರ ಸಂಘಟನೆಗಳ ಒಕ್ಕೂಟದ ನೇತೃತ್ವದಲ್ಲಿ ಪ್ರತಿಭಟನೆಯಲ್ಲಿ ಪೋಕ್ಸೋ ಕಾಯ್ದೆಯಡಿ ಆರೋಪಿಯಾಗಿರುವ ಶಿವಮೂರ್ತಿ ಶರಣರನ್ನು ಕಠಿಣ ಕಾನೂನಿನ ವಿಚಾರಣೆಗೆ ಒಳಪಡಿಸಿ ಕಠಿಣ ಶಿಕ್ಷೆ ನೀಡಬೇಕು ಮತ್ತು ಸಂತ್ರಸ್ತ ಬಾಲಕಿಯರು ಹಾಗೂ ಅವರ ಕುಟುಂಬಗಳಿಗೆ ಸೂಕ್ತ ರಕ್ಷಣೆ ಮತ್ತು ಪರಿಹಾರ ನೀಡುವಂತೆ ಆಗ್ರಹಿಸಿದರು.

ಗುಜರಾತಿನಲ್ಲಿ ಬಿಲ್ಕಿಸ್ ಬಾನೊ ಪ್ರಕರಣದ ಸಾಮೂಹಿಕ ಅತ್ಯಾಚಾರ ಪ್ರಕರಣದ ಖೈದಿಗಳಿಗೆ 'ಸನ್ನಡತೆಯ' ಆಧಾರದಲ್ಲಿ ಬಿಡುಗಡೆ ಮಾಡಿರುವ ಗುಜರಾತಿನ ಬಿಜೆಪಿ ಸರ್ಕಾರದ ಕ್ರಮವನ್ನು ಖಂಡಿಸಿದರು ಮತ್ತು ಕೂಡಲೇ ಅವರನ್ನು ಬಂಧಿಸಿ ಜೈಲಿಗೆ ಕಳುಹಿಸಬೇಕೆಂದು ಆಗ್ರಹಿಸಿದರು.

ಮಂಡ್ಯ:
ಜಿಲ್ಲಾಧಿಕಾರಿ ಕಛೇರಿ ಮುಂಭಾಗ ಸೇರಲಾದ ಪ್ರತಿಭಟನೆಯ ಸಂದರ್ಭದಲ್ಲಿ ಪೊಲೀಸರು ಬಲವಂತವಾಗಿ ಪ್ರತಿಭಟನಾಕಾರರನ್ನು ಎಳೆದಾಡಿದ್ದಾರೆ. ಪ್ರತಿಭಟನಾ ನಿರತ ಮಹಿಳೆಯನ್ನು ಮುಟ್ಟಿ ಬಲವಾಗಿ ನೂಕುತ್ತಿರುವ ಪುರುಷ ಪೊಲೀಸರ ಮೇಲೆ ತಕ್ಷಣ ಮಂಡ್ಯ ಪೊಲೀಸ್ ವರಿಷ್ಠಾಧಿಕಾರಿಗಳು ಕಾನೂನು ಕ್ರಮ ಜರುಗಿಸಬೇಕು ಹಾಗೂ ಮಂಡ್ಯ ಜಿಲ್ಲಾಧಿಕಾರಿಗಳು ಕಛೇರಿ ಸುತ್ತ ಹಾಕಲಾಗಿರುವ ಬೇಲಿ ತೆರವುಗೊಳಿಸಬೇಕು ಎಂದು ಸಹ ಆಗ್ರಹಿಸಲಾಗಿದೆ.

ಬಳ್ಳಾರಿ: ಗೋಪುರದ ರಾಜಕಾರಣ

ಜೆ.ಸತ್ಯಬಾಬು

ಬಳ್ಳಾರಿ ನಗರದ ಗಡಿಗಿ ಚೆನ್ನಪ್ಪ ವೃತ ದಲ್ಲಿ ಭವ್ಯವಾದ ಹೊಸ ಗಡಿಯಾರ ಗೋಪುರವನ್ನು ನಿರ್ಮಾಣ ಮಾಡುತ್ತೇವೆ ಎಂದು ಹೇಳಿಕೆ ನೀಡುತ್ತಿರುವ ಸಚಿವ ಶ್ರೀರಾಮಲು ಅವರು ಬಳ್ಳಾರಿ ಜನತೆಗೆ ಮಂಕುಬೂದಿ ಹಚ್ಚುತ್ತಿದ್ದಾರೆ.

ಬಳ್ಳಾರಿ ನಗರದಲ್ಲಿ ಗಡಿಗಿ ಚೆನ್ನಪ್ಪ ನವರ ಕೊಡುಗೆ, ಕರ್ನಾಟಕ ಏಕೀಕರಣದ ನೆನಪಿಗಾಗಿ ಕಟ್ಟಲಾಗಿದ್ದ ಗಡಿಯಾರ ಗೋಪುರವನ್ನು 2008 ಜೂನ್ 21ರಂದು ರಾತ್ರಿ ಇದ್ದಕ್ಕಿಂದಂತೆ 'ಮಾಯ'ವಾಗಿಸಿದ್ದು ಬಳ್ಳಾರಿ ಜನತೆ ಇನ್ನೂ ಮರೆತಿಲ್ಲ. ಒಡೆದ ಆ ಗೋಪುರದ ಅವಶೇಷಗಳು ಎಲ್ಲಿ ಮಾಯವಾದವು? ಎಂಬ ಯಕ್ಷ ಪ್ರಶ್ನೆ ಇನ್ನೂ ಹಾಗೇ ಉಳಿದಿದೆ.

ಆ ಕುಕೃತ್ಯವನ್ನು ಅಂದು ಸಿಪಿಎಂ ಪಕ್ಷದ ಬಳ್ಳಾರಿ ಸಮಿತಿ ತೀವ್ರವಾಗಿ ಪ್ರತಿಭಟನೆ ಮಾಡಿತ್ತು. ಬಳ್ಳಾರಿ ಜನತೆಯ ಭಾವನಾತ್ಮಕವಾಗಿ ಸಂಬಂದ ಇರುವ, ಬಳ್ಳಾರಿಯ ಪ್ರತಿಷ್ಠೆಯ ಒಂದು ಸಂಕೇತವಾಗಿಯೂ ತಲೆ ಎತ್ತಿ ನಿಂತಿದ್ದ ಗಡಿಯಾರ ಗೋಪುರ ಸ್ತಂಭವನ್ನು ಮಾಯ ಮಾಡಿರುವ ಕಿಡಿಗೇಡಿಗಳನ್ನು ಗುರುತಿಸಿ ಅವರ ಮೇಲೆ ಕಾನೂನು ಕ್ರಮವನ್ನು ಜಾರಿಗೊಳಿಸಬೇಕು ಎಂದು ಆಡಳಿತ ಮಂಡಳಿಗೆ ಅಂದು ಒತ್ತಾಯ ಮಾಡಿದ್ದೆವು.

ಕರ್ನಾಟಕ ವಿಧಾನಸಭೆಯಲ್ಲಿ ಬಳ್ಳಾರಿ ನಗರದ ಗಡಿಯಾರ ಗೋಪುರ ರಾತ್ರೋ ರಾತ್ರಿ ಮಾಯವಾಗಿರುವುದು ಚರ್ಚೆಯಾಗಿ ದೊಡ್ಡ ಕೋಲಾಹಲ ಉಂಟು ಮಾಡಿತ್ತು. ಅಂದಿನ ಬಿಜೆಪಿ ನೇತೃತ್ವದ ಬಿ ಎಸ್ ಯಡಿಯೂರಪ್ಪನವರ ಸರ್ಕಾರ ತನಿಖೆ ಮಾಡಲು ಒಂದು ಸಮಿತಿ ಯನ್ನು ರಚನೆ ಮಾಡಿತ್ತು. ಗಡಿಯಾರ ಗೋಪುರವನ್ನು ಉರುಳಿಸಿ, ಮಾಯ ಮಾಡಿದ ಘಟನೆಗೆ ಸಂಬಂಧಪಟ್ಟಂತೆ ತನಿಖೆ ಮಾಡುತ್ತೇವೆ ಎಂದು ಸದನದಲ್ಲಿ ಸರ್ಕಾರ ಹೇಳಿಕೆ ನೀಡಿ ಪ್ರಶ್ನೆಗಳನ್ನು ಪಕ್ಕಕ್ಕೆ ದಾಟಿಸಿ 'ಕಿಡಿಗೇಡಿ' ಗಳನ್ನು ರಕ್ಷಣೆ ಮಾಡಿತು. ಆದರೆ ಅಂದು ಗಡಿಯಾರ ಗೋಪುರ ಮಾಯ ಮಾಡಿದವರನ್ನು ಗುರುತಿಸಿ ಕ್ರಮ ವಹಿಸಲು ಸರ್ಕಾರಕ್ಕೆ ಸಾಧ್ಯ ವಾಗದೇ ಇರುವುದು ಸರಕಾರದ ಅಸಮರ್ಥತೆಯೋ ಅಥವಾ ಎಲ್ಲವನ್ನು ಮಾಯ ಮಾಡುತ್ತಲೇ ಮೆರೆಯುತ್ತಿರುವ 'ಪ್ರತಿಷ್ಠಿತರ' ರಕ್ಷಣೆಯ ಮಹಿಮೆಯೋ ಎಂಬುದು ತಿಳಿಯಬೇಕಾಗಿದೆ. ಇವರನ್ನು ಪತ್ತೆ ಹಚ್ಚಲು ಬಳ್ಳಾರಿಯ ಯಾವ ಅಧಿಕಾರಿಗಳಿಗೂ ಸಾಧ್ಯವಾಗಿಲ್ಲ.

1965 ನೇ ಇಸ್ವಿಯಲ್ಲಿ ಅಂದಿನ ಮುಖ್ಯಮಂತ್ರಿಗಳಾಗಿದ್ದ ಎಸ್ ನಿಜಲಿಂಗಪ್ಪ ನವರು ಮತ್ತು ಆಂಧ್ರಪ್ರದೇಶದ ಮುಖ್ಯಮಂತ್ರಿಗಳಾದ ನೀಲಂ ಸಂಜೀವರೆಡ್ಡಿಯವರು ಚನ್ನಪ್ಪ ಅವರ ಜನ್ಮದಿನದ ಸಮಾರಂಭದಲ್ಲಿ ಕರ್ನಾಟಕದ ಏಕೀಕರಣದ ನೆನಪು ಇರುವಂತಹ ಗಡಿಗಿ ಚೆನ್ನಪ್ಪ ವೃತ್ತ ಅನಾವರಣ ಮಾಡಿದ್ದರು. ಅಂತಹ ಐತಿಹಾಸಿಕ ಹಿನ್ನೆಲೆ ಇರುವ ಗಡಿಯಾರ ಗೋಪುರವನ್ನು ಜನ ಮಲಗಿರುವಾಗ ನೆಲಸಮ ಮಾಡಲಾಗಿತ್ತು. ಕೆಲವು ದಿನಗಳಾದ ನಂತರ ಅದೇ ಸ್ಥಳದಲ್ಲಿ 9.3 ಲಕ್ಷದಲ್ಲಿ ಸುಮಾರು 25 ಅಡಿ ಎತ್ತರದ ಒಂದು ಸಣ್ಣ ಗಡಿಯಾರ ಕಂಬವನ್ನು ನಿರ್ಮಿಸಲಾಗಿತ್ತು. ಆದರೆ ಇಂದು ಉಸ್ತುವಾರಿ ಸಚಿವರಾದ ಬಿ. ಶ್ರೀರಾಮುಲು ಅವರು ಬಳ್ಳಾರಿ ನಗರವನ್ನು ಸುಂದರೀಕರಣ ಮಾಡುತ್ತೇವೆ ಎಂದು ಹೇಳಿ ಆ ಭಾಗದಲ್ಲಿ ಸುಮಾರು 12 ಕೋಟಿ ವೆಚ್ಚದಲ್ಲಿ ಅತ್ಯಂತ ಎತ್ತರವಾದ ವಿದೇಶ ನಮೂನೆಯಲ್ಲಿರುವ ಗಡಿಯಾರ ಗೋಪುರ ವನ್ನು ನಿರ್ಮಾಣ ಮಾಡುತ್ತೇವೆ ಎಂದು ಹೇಳುತ್ತಿರುವುದು 40 % ಕಮಿಷನ್ ಚರ್ಚೆಯ ಸಂದರ್ಭದಲ್ಲಿ ಮುಂದಾಗಿದ್ದಾರಾ? ಗಡಿಗಿ ಚೆನ್ನಪ್ಪನವರ ಹೆಸರನ್ನೇ ಅಳಿಸಲು ಬಯಸುತ್ತಿದ್ದಾರಾ ಎಂದು ಅನುಮಾನ ಕಾಡುತ್ತಿದೆ. ಸಚಿವರು ಹಾಗೂ ಬಿಜೆಪಿ ನಾಯಕರ 'ಸುಂದರೀಕರಣ'ದ ಹೇಳಿಕೆಗಳು ಜನರಿಗೆ ಮಂಕುಬೂದಿಯನ್ನು ಎರಚುತ್ತವೆ.

ಬಳ್ಳಾರಿ ನಗರದ ಶಾಸಕರಾದ ಗಾಲಿ ಸೋಮಶೇಖರರೆಡ್ಡಿ ಯವರು ಮೊನ್ನೆ ಒಂದು ಪತ್ರಿಕೆ ಹೇಳಿಕೆ ನೀಡುತ್ತಾ ಗಡಿಗಿ ಚೆನ್ನಪ್ಪ ವೃತ್ತದಲ್ಲಿ ಹಳೆಯದಾದ ಗಡಿಯಾರ ಗೋಪುರವನ್ನು ತೆಗೆದು ಹೊಸ ಗಡಿಯಾರ ಗೋಪುರ ನಿರ್ಮಾಣ ಮಾಡಬೇಕೆಂದು ಅಂದು ಗಾಲಿ ಜನಾರ್ದನ್ ರೆಡ್ಡಿ ಯವರು ಹೇಳಿದ್ದು, ಆ ಬಗ್ಗೆ ನಾವು ಚರ್ಚೆ ಮಾಡಿದ್ದೆವು ಎಂದಿದ್ದಾರೆ. ಗೋಪುರವು ಹಳೆಯದಾಗಿದೆ ಗಡಿಯಾರವು ನಡೆಯುತ್ತಿಲ್ಲ, ಹೊಸದಾಗಿ ಸುಂದರ ಗೋಪುರ ಕಟ್ಟ ಎಂದು ಅಂದು ಸಚಿರಾಗಿದ್ದ ಜನಾರ್ದನರೆಡ್ಡಿ ಅವರು ಮತ್ತು ಜನರು ಅಭಿಪ್ರಾಯ ವ್ಯಕ್ತಪಡಿಸಿದ್ದರು. ಹೀಗಾಗಿ ಗೋಪುರ ತೆರವುಗೊಳಿಸಲಾಯಿತು ಎಂದು ಶಾಸಕರಾದ ಸೋಮಶೇಖರ ರೆಡ್ಡಿ ಅವರು ಹೇಳಿಕೆ ನೀಡಿದ್ದಾರೆ. ಒಂದು ರಾತ್ರೋರಾತ್ರಿ ಮಾಯವಾಗಿರುವ ಗಡಿಯಾರ ಗೋಪುರದ ನಾಶ ಮಾಡಿರುವ ವ್ಯಕ್ತಿಗಳು ಯಾರು ಎಂದು ಗುರುತಿಸಲು ಸರಕಾರಕ್ಕೆ ಸಾಧ್ಯವಾಗದಿರುವಾಗ ಇಂದು ಶಾಸಕರು ನಾವೇ ತೆಗೆದಿದ್ದೇವೆ ಎಂದು ಹೇಳಿಕೆ ನೀಡಿದ್ದು ಬಚ್ಚಿಟ್ಟ ಸತ್ಯ ಹೊರಬಂತಾಗಿದೆ. ಇಷ್ಟು ದಿನ ಮುಚ್ಚಿಟ್ಟಿದ್ದು ಯಾಕೆ ಎಂದು ಬಳ್ಳಾರಿ ಜನತೆಗೆ ಅಚ್ಚರಿ ಮೂಡಿಸಿದೆ. ಪ್ರಕರಣ ದಾಖಲಿಸಿಕೊಂಡು ಈ ಬಗ್ಗೆ ಇನ್ನಷ್ಟು ಹೆಚ್ಚಿನ ತನಿಖೆ ನಡೆದರೆ ಮತ್ತಷ್ಟು ಸತ್ಯಗಳು ಹೊರಬರಬಹುದು.

ಬಳ್ಳಾರಿ ನಗರದಲ್ಲಿ ಗಡಿಗಿ ಚೆನ್ನಪ್ಪ ವೃತ ದಲ್ಲಿ ಹೊಸ ಗಡಿಯಾರ ಗೋಪುರದ ನಿರ್ಮಾಣ ಯೋಜನೆ ವೈಜ್ಞಾನಿಕವಾಗಿದೆಯೇ ಎಂದು ಪರಿಶೀಲಿಸಬೇಕು. ರಸ್ತೆಗೆ ಆ ಭಾರ ಹೊರುವ ಶಕ್ತಿ ಇದೆಯಾ? ಆ ಪ್ರದೇಶದಲ್ಲಿ ಜನ ಸಾಮಾನ್ಯರಿಗೂ ರಸ್ತೆಯಲ್ಲಿ ಸುಗಮವಾಗಿ ಸಾಗಲು ಸಾಧ್ಯವಾಗಬೇಕು. ಹಳೆಯ ಗಡಿಯಾರ ಗೋಪುರ ನಾಶ ಮಾಡಿರುವುದರಿಂದ ಸುಮಾರು 20 ಲಕ್ಷ ರೂಪಾಯಿಗಳು ವ್ಯರ್ಥವಾಗಿವೆ. ಬಳ್ಳಾರಿ ಸುಂದರೀಕರಣ ಮಾಡಲು ಹೊರಟಿರುವ ಸಚಿವರು ಬಳ್ಳಾರಿ ನಗರದಲ್ಲಿ ಹತ್ತಾರು ಕೊಳಚೆ ಪ್ರದೇಶಗಳಿವೆ. ಅವನ್ನು ಅಭಿವೃದ್ಧಿ ಪಡಿಸುವುದರತ್ತ ಗಮನಹರಿಸಬೇಕು. ಬಳ್ಳಾರಿ ಯಲ್ಲಿ ಇರುವ ರಸ್ತೆಗಳು ಹದಗೆಟ್ಟು ಹೋಗಿವೆ. ಸಾವಿರಾರು ಜನರಿಗೆ ಸ್ವಂತ ಸೂರಿಲ್ಲದೆ ಜೀವನ ನಡೆಸುತ್ತಿದ್ದಾರೆ. ನಗರದಲ್ಲಿ ಕುಡಿಯುವ ನೀರು ಸಮರ್ಪಕವಾಗಿ ಸಿಗುತ್ತಿಲ್ಲ. ಅಮೃತ ಯೋಜನೆ ಎಂದು ಕೋಟಿಗಟ್ಟಲೆ ಹಣ ಖರ್ಚು ಮಾಡಿದ್ದರೂ 247 ಮನೆ ಮನೆಗೆ ನೀರು ಸರಬರಾಜು ಮಾಡುತ್ತೇವೆ ಎಂದು ಹೇಳಿಕೆ ನೀಡಿದ್ದರೂ ಇಲ್ಲಿವರೆಗೂ ಅದು ಸಾಧ್ಯವಾಗಲಿಲ್ಲ. ಬಳ್ಳಾರಿಯಲ್ಲಿ ಡ್ರೈನೇಜ್ ಕಾಲುವೆ ಪಕ್ಕದಲ್ಲಿ ಕಡು ಬಡ ಜನ ವಾಸ ಮಾಡುತ್ತಿದ್ದಾರೆ. ಆ ದೊಡ್ಡ ಡ್ರೈನೇಜ್ ಕಾಲುವೆಯು ತೆರೆದಿದ್ದು ಅದರ ಮೇಲೆ ಬಂಡೆ ಹಾಕಿ ಮುಚ್ಚುವುದಕ್ಕೆ, ಮೂಲಭೂತ ಸಮಸ್ಯೆಗಳು ಪರಿಹರಿಸಲು ಬಳ್ಳಾರಿ ನಗರ ಪಾಲಿಕೆ ಮುಂದಾಗುತ್ತಿಲ್ಲ. ಇಂಥ ಗಂಭೀರ ಪುಟ 15 ಕ್ಕೆ





ತಿರುಪತಿಯಲ್ಲಿ ಕಾರ್ಮಿಕ ಮಂತ್ರಿಗಳು–ಅಧಿಕಾರಿಗಳ ಸಮಾವೇಶ–ಹೊರಗೆ ಅದಕ್ಕೆ ಕಾರ್ಮಿಕರ ಪ್ರತಿಭಟನೆ

ಕಾರ್ಮಿಕರ ಸಂಘಗಳನ್ನೇ ಹೊರಗಿಟ್ಟ ತಿರುಪತಿ 'ರಾಷ್ಟ್ರೀಯ ಕಾರ್ಮಿಕ ಸಮ್ಮೇಳನ'!

ತ್ರಿಪಕ್ಷೀಯ ಐ.ಎಲ್.ಸಿ. ಅಧಿವೇಶನ ನಡೆಸದ ವೈಫಲ್ಯವನ್ನು ಮರೆಮಾಚುವ ತಂತ್ರ–ಸಿಐಟಿಯು

ತಿರುಪತಿಯಲ್ಲಿ ಕಾರ್ಮಿಕರಿಗೆ ಸಂಬಂಧಪಟ್ಟ ವಿಷಯಗಳ ಮೇಲೆ ಎರಡು ದಿನಗಳ ಮಂತ್ರಿ–ಅಧಿಕಾರಿಗಳ ಸಮಾವೇಶ ನಡೆಯಿತು. ಇದಕ್ಕೆ ರಾಷ್ಟ್ರೀಯ ಕಾರ್ಮಿಕ ಸಮ್ಮೇಳನ ಎಂಬ ಹೆಸರು ಕೊಡಲಾಗಿತ್ತು. ಆದರೆ ಇದನ್ನು ಹಾಗೆಂದು ಕರೆಯಲು ಸಾಧ್ಯವಿಲ್ಲ, ಇದು ಕೇವಲ ಮಂತ್ರಿಗಳು ಮತ್ತು ಅಧಿಕಾರಶಾಹಿಗಳ ಒಂದು ಸಭೆಯಷ್ಟೇ ಆಗಿತ್ತು ಎಂದು ಸಿಐಟಿಯು ವರ್ಣಿಸಿದೆ. ವ್ಯಾಪಕವಾದ ವಂಚಕ ಮಾಧ್ಯಮ ಪ್ರಚಾರದ ಮೂಲಕ ಇದನ್ನು ರಾಷ್ಟ್ರೀಯ ಕಾರ್ಮಿಕ ಸಮ್ಮೇಳನ ಎಂದು ಹೆಸರಿಸಿ ಮೋದಿ ನೇತೃತ್ವದ ಸರಕಾರ ತನ್ನ ನಿರ್ಲಜ್ಜ ಕಾರ್ಮಿಕ ವಿರೋಧಿ ನೀತಿಗಳ ಬಗ್ಗೆ ಜನರನ್ನು ದಾರಿತಪ್ಪಿಸುವ ಮತ್ತು ಗೊಂದಲಗೊಳಿಸುವ ಹತಾಶ ಪ್ರಯತ್ನವನ್ನು ಮಾಡುತ್ತಿದೆ ಎಂದು ಅದು ಬಲವಾಗಿ ಖಂಡಿಸಿದೆ.

ದುಡಿಮೆಯ ಪ್ರಪಂಚದ ಅತಿದೊಡ್ಡ ಭಾಗವಾದ ಕಾರ್ಮಿಕರು ಮತ್ತು ಅವರ ಸಂಘಗಳನ್ನು ಹೊರಗಿಟ್ಟು ನಡೆಸುವ ರಾಜ್ಯ ಮತ್ತು ಕೇಂದ್ರ ಕಾರ್ಮಿಕ ಮಂತ್ರಿಗಳು ಮತ್ತು ಅಧಿಕಾರಶಾಹಿಗಳನ್ನು ಒಳಗೊಂಡ ಮಂತ್ರಿ–ಅಧಿಕಾರಶಾಹಿಗಳ ಸಮಾವೇಶವನ್ನು ರಾಷ್ಟ್ರೀಯ ಕಾರ್ಮಿಕ ಸಮ್ಮೇಳನ ಎಂದು ಕರೆಯಲಾಗುವುದಿಲ್ಲ. ಈ ತಿರುಪತಿ ಸಮಾವೇಶವನ್ನು ರಾಷ್ಟ್ರೀಯ ಕಾರ್ಮಿಕ ಸಮ್ಮೇಳನ ಎಂದು ಬಿಂಬಿಸುವ ಮೋಸದ ಹಿಂದೆ, ಈ ಸರಕಾರ 2015 ರಿಂದ ಕಳೆದ ಏಳು ವರ್ಷಗಳಲ್ಲಿ, ಪ್ರತಿವರ್ಷ ನಡೆಯಬೇಕಾದ ತ್ರಿಪಕ್ಷೀಯ 'ಭಾರತೀಯ ಕಾರ್ಮಿಕ ಸಮ್ಮೇಳನ' (ಐ.ಎಲ್.ಸಿ.) ವನ್ನು ನಡಸದೆ ವಿಫಲವಾಗಿದೆ, ಅದಕ್ಕಿಂತಲೂ ಹೆಚ್ಚಾಗಿ ನಡೆಸಲು ಹಿಂದೇಟು ಹಾಕಿದೆ ಎಂಬ ಸತ್ಯವನ್ನು ಮುಚ್ಚಿ ಹಾಕಲು ಪ್ರಧಾನ ಮಂತ್ರಿಗಳೂ ಸೇರಿದಂತೆ ಕೇಂದ್ರ ಮಂತ್ರಿಗಳು ನಡೆಸಿರುವ ಹತಾಶ ಪ್ರಯತ್ನ ಕಾಣುತ್ತದೆ ಎಂದು ಸಿಐಟಿಯು ಕಟುವಾಗಿ ಟಿಪ್ಪಣಿ ಮಾಡಿದೆ.:

ಪ್ರಧಾನಿಗಳಿಂದಲೇ ತಪ್ಪು ಹೇಳಿಕೆಗಳ ಮಿಂಚಿನ ಪ್ರಚಾರ

ಕೇಂದ್ರದಲ್ಲಿ ಸರ್ಕಾರದ ಈ ನವ–ನವೀನ ಕಸರತ್ತಿನ ಉದ್ದೇಶ ತನ್ನ ಮಿಂಚಿನ ಪ್ರಚಾರದ ಮೂಲಕ ಜನರನ್ನು ದಾರಿತಪ್ಪಿಸುವುದು; ಸತ್ಯಗಳಿಂದಲ್ಲ, ಬದಲಾಗಿ ರಾಷ್ಟ್ರೀಯ ಸಂಪತ್ತನ್ನು ವಾಸ್ತವವಾಗಿ ಉತ್ಪಾದಿಸುವ ಮತ್ತು ಉತ್ಪತ್ತಿ ಮಾಡುವ, ಆದರೆ ಹಿಂಡಿ ಹಾಕಲಾಗುತ್ತಿರುವ, ಅಪಾರವಾದ ಅಭಾವ ಮತ್ತು ಸಂಕಟಕ್ಕೆ ಒಳಗಾಗಿರುವ ಕಾರ್ಮಿಕರ ಹಕ್ಕುಗಳು ಮತ್ತು ಪರಿಸ್ಥಿತಿಗಳ ಬಗ್ಗೆ ತಪ್ಪು ಹೇಳಿಕೆಗಳ ಮೂಲಕ; ಅದು ಕೂಡ ಸ್ವತಃ ದೇಶದ ಆಡಳಿತದಲ್ಲಿನ ಅತ್ಯುನ್ನತ ಸ್ಥಾನದಲ್ಲಿರುವ ವ್ಯಕ್ತಿಯಿಂದ. ಇವೆಲ್ಲವೂ ಕೇವಲ ಬೆರಳೆಣಿಕೆಯಷ್ಟು ಖಾಸಗಿ ಕಾರ್ಪೊರೇಟ್‌ಗಳ ಜೇಬುಗಳನ್ನು ತುಂಬಿಸಲು ಮತ್ತು ಕಾರ್ಮಿಕರ ಮೇಲೆ ಗುಲಾಮಗಿರಿಯ ಷರತ್ತುಗಳನ್ನು ಹೇರಲು ಎಂದು ತಮ್ಮ ಕಟು ಟೀಕೆಯನ್ನು ಮುಂದುವರೆಸುತ್ತ ಸಿಐಟಿಯು ಪ್ರಧಾನ ಕಾರ್ಯದರ್ಶಿ ತಪನ್ ಸೆನ್ ಹೇಳುತ್ತಾರೆ.

ದೂರದ ದಿಲ್ಲಿಯಿಂದಲೇ ಮಂತ್ರಿ–ಅಧಿಕಾರಶಾಹಿಗಳ ತಿರುಪತಿ ಸಮಾವೇಶಕ್ಕೆ ಮಾಡಿದ ಉದ್ಘಾಟನಾ ಭಾಷಣವು ಕಾರ್ಮಿಕ ಸಂಹಿತೆಗಳನ್ನು ಜಾರಿಗೊಳಿಸುವ ಮೂಲಕ "ಗುಲಾಮಗಿರಿಯ ಅವಧಿಯ ಕಾನೂನುಗಳನ್ನು ರದ್ದುಗೊಳಿಸಲಾಗಿದೆ" ಎಂದು ಹೇಳಿಕೊಂಡಿತು. ವಾಸ್ತವವು ತದ್ವಿರುದ್ಧವಾಗಿಯೇ ಇದೆ. ಬಹುಪಾಲು ಕೊವಿಡ್ ಮಹಾಸೋಂಕಿನ ಲಾಕ್‌ಡೌನ್ ಕಾಲದಲ್ಲಿ ಸಂಸತ್ತಿನಲ್ಲಿ ಯಾವುದೇ ಚರ್ಚೆಯಿಲ್ಲದೆ ಬಲವಂತವಾಗಿ ತಂದಿರುವ ಈ ಕ್ರೂರ ಕಾರ್ಮಿಕ ಸಂಹಿತೆಗಳ ಮೂಲಕ, ಅಸ್ತಿತ್ವದಲ್ಲಿರುವ 29 ಕಾರ್ಮಿಕ ಕಾನೂನುಗಳಲ್ಲಿ ಕರಾರುವಾಕ್ಕಾಗಿ ಕಾರ್ಮಿಕರಿಗೆ ಹೆಚ್ಚಿನ ಹಕ್ಕುಗಳು ಮತ್ತು ಹಕ್ಕುಗಳಿಗೆ ಸಂಬಂಧಿಸಿದ ನಿಬಂಧನೆಗಳನ್ನು ದುರ್ಬಲಗೊಳಿಸಲಾಗಿದೆ ಮತ್ತು ತೆಗೆದುಹಾಕಲಾಗಿದೆ. ಈ ಕಾರ್ಮಿಕ ಸಂಹಿತೆಗಳು ಇಡೀ ದುಡಿಯುವ ಜನರ ಮೇಲೆ ಗುಲಾಮಗಿರಿಯ ಷರತ್ತುಗಳನ್ನು ವಿಧಿಸಲು ಪ್ರಯತ್ನಿಸುತ್ತವೆ ಮತ್ತು ಕಾರ್ಮಿಕರ ಮೇಲೆ ಪ್ರತೀಕಾರ ತೀರಿಸಲಾಗುತ್ತಿದ್ದೆಯೋ ಎಂಬಂತೆ ದುಡಿಸಿಕೊಳ್ಳುವ ಮಾಲಕ ವರ್ಗವನ್ನು ಸಶಕ್ತಗೊಳಿಸುತ್ತವೆ. ಎಲ್ಲಾ ನಾಲ್ಕು ಕಾರ್ಮಿಕ ಸಂಹಿತೆಗಳ ಬಹುಪಾಲು ಮಹತ್ವದ ನಿಬಂಧನೆಗಳ ಬದಲಾವಣೆಗಳಿಗೆ ಸಂಬಂಧಿಸಿದಂತೆಯೂ, ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಮುಕ್ತ ಅಧಿಕಾರವನ್ನು ನೀಡಲಾಗಿದೆ, ಆ ಮೂಲಕ ಸಂಸತ್ತಿನ ಮೂಲಕ ನಡೆಸಬೇಕಾದ ಸಮಸ್ತ ಪ್ರಜಾಸತ್ತಾತ್ಮಕ ಶಾಸಕಾಂಗ ಪ್ರಕ್ರಿಯೆಯನ್ನು ತುಳಿದು ಹಾಕಲಾಗಿದೆ ಎಂದು ತಪನ್ ಸೆನ್ ಹೇಳಿದ್ದಾರೆ.

ಕಾರ್ಮಿಕರ ಸಬಲೀಕರಣ ಎಂಬ ಹಸಿಹಸಿ ಸುಳ್ಳು

ರದ್ದುಗೊಳಿಸಿರುವ ಈ 29 ಕಾರ್ಮಿಕ ಕಾನೂನುಗಳಲ್ಲಿ ಹೆಚ್ಚಿನ ಶಾಸನಗಳು ರೂಪಿತವಾದದ್ದು ಮತ್ತು ನಂತರ ತಿದ್ದುಪಡಿಗಳು ಬಂದದ್ದು ದುಡಿಯುವ ಜನರ ಹೋರಾಟಗಳಿಂದಾಗಿಯೇ, ಇವುಗಳಲ್ಲಿ ಅನೇಕ ಮಿತಿಗಳು ಮತ್ತು ಲೋಪದೋಷಗಳು ಇದ್ದರೂ ಕೂಡ, ಇವು ದುಡಿಯುವ ಜನರಿಗೆ ಕನಿಷ್ಠ ವೇತನ, ಉದ್ಯೋಗ ಭದ್ರತೆ, ಕೆಲಸದ ಪರಿಸ್ಥಿತಿಗಳು, ಕೆಲವು ಮೂಲಭೂತ ಶಾಸನಬದ್ಧ ಹಕ್ಕುಗಳು, ಸಾಮಾಜಿಕ ಭದ್ರತೆ, ಸುರಕ್ಷತೆ, ವಲಸೆ ಇತ್ಯಾದಿಗಳನ್ನು, ಸಂಘಟಿಸುವ ಮತ್ತು ಸಾಮೂಹಿಕವಾಗಿ ಪ್ರತಿಪಾದಿಸುವ ಮತ್ತು ಪ್ರತಿನಿಧಿಸುವ ಹಕ್ಕುಗಳನ್ನು ಒದಗಿಸಿವೆ. ಈಗ ಈ ಎಲ್ಲಾ ಹಕ್ಕುಗಳು ಮತ್ತು ಅರ್ಹತೆಗಳಿಗೆ ಸಂಬಂಧಿಸಿದ ನಿಬಂಧನೆಗಳನ್ನು ಸಂಪೂರ್ಣವಾಗಿ ದುರ್ಬಲಗೊಳಿಸಲಾಗಿದೆ ಮತ್ತು ಖಾಸಗಿ ಕಾರ್ಪೊರೇಟ್/ದೊಡ್ಡ ಬಂಡವಾಳಿಗ ಮಾಲಕ ವರ್ಗದ ಪ್ರಯೋಜನಕ್ಕಾಗಿ ಮತ್ತು ಅವರನ್ನು ಅಧಿಕಾರ ಸಂಪನ್ನರಾಗಿ ಮಾಡಲಿಕ್ಕಾಗಿಯೇ ಈ ಕಾರ್ಮಿಕ ಸಂಹಿತೆಗಳಲ್ಲಿ ಅವನ್ನೆಲ್ಲಾ ಕಿತ್ತು ಹಾಕಲಾಗಿದೆ.

ಕಾರ್ಮಿಕ ಸಂಹಿತೆಗಳು "ಕನಿಷ್ಠ ವೇತನ, ಉದ್ಯೋಗ ಭದ್ರತೆ, ಸಾಮಾಜಿಕ ಭದ್ರತೆ ಮತ್ತು ಆರೋಗ್ಯ ಭದ್ರತೆಯ ಮೂಲಕ ಕಾರ್ಮಿಕರ ಸಬಲೀಕರಣವನ್ನು ಖಾತ್ರಿಪಡಿಸುತ್ತವೆ" ಎಂದು ಉದ್ಘಾಟನಾ ಭಾಷಣದಲ್ಲಿ ಪ್ರಧಾನ ಮಂತ್ರಿಯವರ ಬಡಾಯಿ ಸಂಪೂರ್ಣವಾಗಿ ಹಸಿ–ಹಸಿ ಸುಳ್ಳು

ಉತ್ತುಂಗಕ್ಕೇರಿದ ಬೂಟಾಟಿಕೆ ಪ್ರದರ್ಶನ

ಅವರ ಭಾಷಣದಲ್ಲಿ ಮತ್ತು ಈ ಸಮಾವೇಶದ ಕಲಾಪಗಳಲ್ಲಿಯೂ ದೊಡ್ಡ ಸದ್ದು ಮಾಡಿದ 'ಕೆಲಸದ ಪರಿಸ್ಥಿತಿಗಳಲ್ಲಿ ಹೊಂದಿಕೆ' (ಫ್ಲೆಕ್ಸಿಬಿಲಿಟಿ) ಎಂಬುದು ಕಾನೂನಾತ್ಮಕ ಕೆಲಸದ ಸಮಯ, ಕನಿಷ್ಠ ವೇತನ, ಸಾಮಾಜಿಕ ಭದ್ರತೆ ಇತ್ಯಾದಿ ಪರಿಕಲ್ಪನೆಗಳನ್ನು ಸಂಪೂರ್ಣವಾಗಿ ಹೊರಗಟ್ಟುವ ಮೋಸದ ತಂತ್ರವಲ್ಲದೆ ಬೇರೇನೂ ಅಲ್ಲ. ಆ ಮೂಲಕ ಕಾರ್ಪೊರೇಟ್ ಮಾಲಕ ವರ್ಗಕ್ಕೆ ಆ ಎಲ್ಲಾ ಅಂಶಗಳಲ್ಲಿ ಅವರ ಎಲ್ಲಾ ಜವಾಬ್ದಾರಿಗಳಿಂದ ವಿನಾಯಿತಿ ನೀಡಲಾಗುತ್ತದೆ ಮತ್ತು ತನ್ಮೂಲಕ ಕೆಲಸದ ಸ್ಥಳಗಳಲ್ಲಿ ಗುಲಾಮಗಿರಿಯ ಅಡಿಪಾಯವನ್ನೇ ಹಾಕುತ್ತದೆ. ಮಹಿಳಾ ಕಾರ್ಮಿಕರ ಹಕ್ಕುಗಳು ಮತ್ತು ಅವಕಾಶಗಳ ಬಗ್ಗೆ ಉದ್ಘಾಟನಾ ಭಾಷಣದಲ್ಲಿ ತುಂಬಾ ಅದ್ದೂರಿಯ ಮಾತುಗಳಿವೆ. ಆದರೆ ಅಂಗನವಾಡಿಗಳು, ಮಧ್ಯಾಹ್ನದ ಊಟ, ಆಶಾ ಮತ್ತು ಇತರ ಸರ್ಕಾರಿ ಯೋಜನೆಗಳಲ್ಲಿ ದುಡಿಯುವ ಲಕ್ಷಾಂತರ ಯೋಜನಾ ಕಾರ್ಯಕರ್ತರು, ಪ್ರಧಾನವಾಗಿ ಮಹಿಳೆಯರೇ ಆಗಿದ್ದರೂ, ಇವರೆಲ್ಲರಿಗೆ ಕಾರ್ಮಿಕರೆಂಬ ಸ್ಥಾನಮಾನ, ಮತ್ತು ಅದಕ್ಕೆ ಅನುಗುಣವಾಗಿ ಶಾಸನಬದ್ಧ ಕನಿಷ್ಠ ವೇತನ ಮತ್ತು ಸಾಮಾಜಿಕ ಭದ್ರತೆಯ ಹಕ್ಕುಗಳನ್ನು ನೀಡಬೇಕು ಎಂಬ 'ಭಾರತೀಯ ಕಾರ್ಮಿಕ ಸಮ್ಮೇಳನ'(ಐ.ಎಲ್.ಸಿ.)ದ ಒಮ್ಮತದ ಶಿಫಾರಸನ್ನು ಜಾರಿಗೊಳಿಸುವ ತನ್ನ ಹೊಣೆಗಾರಿಕೆಯಿಂದ ಸರಕಾರ ನಾಚಿಕೆಯಿಲ್ಲದೆ ನುಣುಚಿಕೊಳ್ಳುತ್ತದೆ.

ಇತ್ತ ದೇಶಾದ್ಯಂತ ದುಡಿಮೆಯ ಕ್ಷೇತ್ರದಲ್ಲಿ ಮಹಿಳೆಯರ ಭಾಗವಹಿಸುವಿಕೆ ಎಲ್ಲ ವಲಯಗಳಲ್ಲಿ ಸತತವಾಗಿ ತೀವ್ರವಾಗಿ ಕುಸಿಯುತ್ತಿದ್ದರೂ, ಅದನ್ನು ತಡೆಯುವ ಗೋಜಿಗೂ ಈ ಸರಕಾರ ಹೋಗುತ್ತಿಲ್ಲ. ಈ ತಥಾಕಥಿತ 'ತಿರುಪತಿ ಸಮಾವೇಶ'ದಲ್ಲಿ ಬೂಟಾಟಿಕೆಯ ಪ್ರದರ್ಶನ ಉತ್ತುಂಗಕ್ಕೇರಿದೆ ಎಂದು ಸಿಐಟಿಯು ಖೇದ ವ್ಯಕ್ತಪಡಿಸಿದೆ.

ಸಮಸ್ತ ಕಾರ್ಮಿಕ ಆಂದೋಲನವು ಈ ಕರಾಳ ಕಾರ್ಮಿಕ ಸಂಹಿತೆಗಳನ್ನು ರದ್ದುಗೊಳಿಸಬೇಕೆಂದು ಒಮ್ಮತದಿಂದ ಒತ್ತಾಯಿಸುತ್ತಿರುವುದು ಕಾರಣಗಳಿಲ್ಲದೆ ಅಲ್ಲ. ದುಡಿಯುವ ಜನರ ಮೇಲೆ ಗುಲಾಮಗಿರಿಯನ್ನು ಹೇರುವ ಅವರ ಯೋಜನೆಯ ವಿರುದ್ಧ ನಾವು ಒಗ್ಗಟ್ಟಿನ ಹೋರಾಟವನ್ನು ಮುಂದುವರಿಸುತ್ತೇವೆ ಮತ್ತು ಆಡಳಿತದಲ್ಲಿ ತಮ್ಮ ಏಜೆಂಟರ ಮೂಲಕಲ್ನಡೆಸುತ್ತಿರುವ ಕಾರ್ಪೊರೇಟ್ ಯಜಮಾನರ ನೀಚ ತಂತ್ರಗಳನ್ನು ಪ್ರತಿರೋಧಿಸುತ್ತೇವೆ ಎಂದು ಸಿಐಟಿಯು ಪುನರುಚ್ಚರಿಸಿದೆ.

ಎನ್‌ಡಿಟಿವಿ ಖರೀದಿ–ಮುಖ್ಯವಾಹಿನಿಯ ಕೊನೆಯ ಸ್ವತಂತ್ರ ಸುದ್ದಿ ಬುರುಜನ್ನು ಉರುಳಿಸುವ ಪ್ರಯತ್ನ: ಡಿ.ಯು.ಜೆ. ಖೇದ

"ಆಳುವ ಪಕ್ಷದ ಸಂಕುಚಿತ, ಏಕಧ್ರುವ ಕಣ್ಣೋಟವನ್ನು ಬಲಪಡಿಸುತ್ತದೆ, ಅದನ್ನು ನಾಗರಿಕರ ಮೇಲೆ ಹೇರುತ್ತದೆ"

ಎನ್‌ಡಿಟಿವಿಯನ್ನು ಅದಾನಿ ಗುಂಪು ಖರೀದಿಸುತ್ತಿದೆ ಎಂಬ ಸುದ್ದಿ ವರದಿಗಳು ಆಘಾತವುಂಟು ಮಾಡಿವೆ ಎಂದು ದಿಲ್ಲಿ ಪತ್ರಕರ್ತರ ಸಂಘ (ಡಿಯುಜೆ) ಹೇಳಿದೆ, ಭಾರತೀಯ ಅರ್ಥವ್ಯವಸ್ಥೆಯ ಇಬ್ಬರು ಪಾಳೇಗಾರರು ತಮ್ಮ ನಡುವೆ ಸಮಸ್ತ ಮಾಧ್ಯಮ ಉದ್ಯಮವನ್ನು ಹಂಚಿಕೊಳ್ಳಲು ನಿರ್ಧರಿಸಿದ್ದಾರೆ ಎಂಬುದು ಸ್ಪಷ್ಟವಾಗಿದೆ, ಸ್ವತಂತ್ರ ಪ್ರಯತ್ನಗಳಿಗೆ ಅವಕಾಶವಿಲ್ಲದಂತೆ ಮಾಡಲಾಗುತ್ತಿದೆ ಎಂದು ಖೇದ ವ್ಯಕ್ತಪಡಿಸಿರುವ ಡಿಯುಜೆ ಈ ಪ್ರಯತ್ನ ಮಾಧ್ಯಮಗಳಿಂದಾಗಲೀ, ಅಥವ ನಾಗರಿಕ ಸಮಾಜ ಅಥವಾ ರಾಜಕೀಯ ವಿರೋಧಿಗಳಿಂದಾಗಲೀ, ಯಾವುದೇ ವಿರೋಧವನ್ನು ಸಹಿಸದ ಪ್ರಸಕ್ತ ಸರ್ಕಾರದ ಆದೇಶದ ಮೇರೆಗೆ ನಡೆಯುತ್ತಿದೆ ಎಂಬುದರಲ್ಲಿ ಸಂದೇಹವಿಲ್ಲ, ಈ ನಡೆಯು ಆಳುವ ಪಕ್ಷದ ಸಂಕುಚಿತ, ಏಕಧ್ರುವ ಕಣ್ಣೋಟವನ್ನು ಬಲಪಡಿಸುತ್ತದೆ ಮತ್ತು ಅದನ್ನು ನಾಗರಿಕರ ಮೇಲೆ ಹೇರುತ್ತದೆ ಎಂದು ಹೇಳಿದೆ.

ಟಿವಿ ಮಾಧ್ಯಮಗಳು ಹೆಚ್ಚೆಚ್ಚಾಗಿ ಪುಟ 12 ಕ್ಕೆ

ಉಚಿತ ಕೊಡುಗೆ ಮತ್ತು ಅಭಿವೃದ್ಧಿ

ಪುಟ 6 ರಿಂದ

ರಾಜ್ಯಗಳ ಪಾಲು ಇರುವುದರಿಂದ ಅವು ಕೂಡ ಹಲವು ಕೋಟಿ ತೆರಿಗೆ ನಷ್ಟ ಅನುಭವಿಸಬೇಕಾಯಿತು. ಹೀಗೆ ಕೇಂದ್ರ ಸರಕಾರ ಸಂಪನ್ಮೂಲವನ್ನು ತನ್ನಲ್ಲೇ ಕೇಂದ್ರೀಕರಿಸಿಕೊಂಡ ಕಾರಣ ಮತ್ತು ಕೆಲವು ರಾಜ್ಯಗಳು ತಮ್ಮ ಹಣಕಾಸನ್ನು ಶಿಸ್ತುಬದ್ಧವಾಗಿ ನಿರ್ವಹಿಸಿದೆ ಇದ್ದುದರಿಂದ ರಾಜ್ಯಗಳ ಹಣಕಾಸು ಸ್ಥಿತಿ ಬಿಗಾಡಯಿಸಿದೆ. ಬಡವರಿಗೆ ನೀಡುವ ಸವಲತ್ತುಗಳಿಗೆ ರಾಜ್ಯಗಳು ತಮ್ಮ ಒಟ್ಟು ಖರ್ಚಿನ ಶೇ.10ರಷ್ಟು ವಿನಿಯೋಜಿಸಿದ ಉದಾಹರಣೆಗಳೇ ಹೆಚ್ಚು. ವಾಸ್ತವ ಹೀಗಿರುವಾಗ ಬಡವರಿಗೆ ನೀಡುವ ಅಲ್ಪಸ್ವಲ್ಪ ಸವಲತ್ತುಗಳನ್ನು ರಾಜ್ಯಗಳ ಹಣಕಾಸು ಸ್ಥಿತಿ ಬಿಗಡಾಯಿಸಲು ಕಾರಣ ಮಾಡುವುದು ಸರಿಯಲ್ಲ.

ಅನುಕೂಲಸ್ಥರ ಸವಲತ್ತುಗಳು

ಕೊನೆಯ ಪ್ರಶ್ನೆ ಕೇವಲ ಬಡವರು ಮಾತ್ರ ಸರಕಾರದಿಂದ ಉಚಿತ ಕೊಡುಗೆ ಪಡೆಯುವುದೇ? ಅನಕೂಲಸ್ಥರು ಪಡೆಯುವುದಿಲ್ಲವೇ? ಬಡವರು ಮಾತ್ರ ಅಲ್ಲ ಉಚಿತ ಸವಲತ್ತು ಪಡೆಯುವ ಅನುಕೂಲಸ್ಥರ ದೊಡ್ಡ ಸಾಲೇ ಇದೆ. ಜನಪ್ರತಿನಿಧಿಗಳು, ಸರಕಾರಿ ಅಧಿಕಾರಿಗಳು, ಉದ್ದಿಮೆಗಳು ಮತ್ತು ಮಧ್ಯಮ ವರ್ಗಗಳು ಪಡೆಯುವ ಉಚಿತ ಸವಲತ್ತುಗಳಿಗೆ ಹೋಲಿಸಿದರೆ ಬಡವರು ಪಡೆಯುವ ಉಚಿತ ಸವಲತ್ತುಗಳು ಏನೇನೂ ಅಲ್ಲ. ನಮ್ಮ ಪ್ರತಿನಿಧಿಗಳು (ಎಂಪಿ, ಎಮ್‌ಎಲ್‌ಎಗಳು) ಸಂಬಳ, ಪಿಂಚಣಿಗಳ ಜೊತೆ ತಿಂಗಳಿಗೆ ರೂ.45000 ಕಚೇರಿ ಭತ್ಯೆ, ರೂ.45000 ಕ್ಷೇತ್ರ ಭತ್ಯೆ, ಪಾರ್ಲಿಮೆಂಟ್ ನಡೆಯುವ ಪ್ರತಿ ದಿನ ರೂ.2000 ದಿನಭತ್ಯೆಗಳನ್ನು ಪಡೆಯುತ್ತಾರೆ. ಜನರಿಗೆ ನೀಡುವ ಉಚಿತ ವಿದ್ಯುತ್, ನೀರಿನ ಬಗ್ಗೆ ತಕರಾರು ಎತ್ತುವ ಜನಪ್ರತಿನಿಧಿಗಳು ಇವನ್ನು ಉಚಿತವಾಗಿಯೇ ಪಡೆಯುತ್ತಿದ್ದಾರೆ. ಇವುಗಳ ಜೊತೆಗೆ ಉಚಿತ ಸಾರಿಗೆ, ಉಚಿತ ಸಂಪರ್ಕ, ಉಚಿತ ವಸತಿ, ಕಡಿಮೆ ಬೆಲೆಗೆ ಆಹಾರ, ಮೆಡಿಕಲ್ ಸವಲತ್ತುಗಳನ್ನು ಸೇರಿಸಬಹುದು.

ಉನ್ನತ ಮಟ್ಟದ ಐಎಸ್, ಕೆಎಎಸ್ ಅಧಿಕಾರಿಗಳು ಜನ ಪ್ರತಿನಿಧಿಗಳ ರೀತಿಯಲ್ಲೆ ಹಲವು ಉಚಿತ ಸವಲತ್ತುಗಳನ್ನು ಪಡೆಯುತ್ತಾರೆ. ವಸತಿ, ಪ್ರಯಾಣಕ್ಕೆ ವಾಹನ, ವಾಹನ ಓಡಿಸಲು ಚಾಲಕ, ದಿನ ಭತ್ಯೆ, ಮನೆ ಭತ್ಯೆ, ಅತಿಥಿ ಭತ್ಯೆ ಹೀಗೆ ಹಲವು ಭತ್ಯೆಗಳು. ನಗರಗಳಲ್ಲಿ ಶೇ.40ರಷ್ಟು ಮಂದಿ ಸ್ಲಮ್‌ಗಳಲ್ಲಿ ಉಸಿರಾಡುತ್ತಿದ್ದರೆ ಕೆಲವು ಅಧಿಕಾರಿಗಳು ಎಕರೆಗಟ್ಟಲೆ ಪ್ರದೇಶದಲ್ಲಿ ವಾಸದ ಬಂಗ್ಲೆ, ತಾವು ಸುತ್ತಾಡಲು ಮತ್ತು ತಮ್ಮ ಸಾಕು ಪ್ರಾಣಿಯನ್ನು ಸುತ್ತಾಡಿಸಲು ವಿಸ್ತಾರವಾದ ಜಾಗಗಳನ್ನು ಹೊಂದಿದ್ದಾರೆ. ಇವರಿಗೆಲ್ಲ ಈ ಸವಲತ್ತುಗಳನ್ನು ಕೊಡುವುದು ಏಕೆ? ನಮ್ಮ ಅರ್ಥ, ಶಿಕ್ಷಣ, ಆರೋಗ್ಯ ಮತ್ತು ಇತರ ಮೂಲಸೌಕರ್ಯಗಳನ್ನು ನಿರ್ವಹಿಸಲು. ಜನಪ್ರತಿನಿಧಿಗಳು ಮತ್ತು ಅಧಿಕಾರಿಗಳು ನಮ್ಮ ಅರ್ಥ, ಸಾಮಾಜಿಕ, ಆರ್ಥಿಕ ಮೂಲಸೌಕರ್ಯಗಳನ್ನು ಚೆನ್ನಾಗಿ ನಿರ್ವಹಿಸಿದರೆ ಜನರು ಉದ್ಯೋಗ ಪಡೆಯಲು ಸಾಧ್ಯ, ಗುಣಮಟ್ಟದ ಶಿಕ್ಷಣ, ಆರೋಗ್ಯ, ವಸತಿ ಇತ್ಯಾದಿ ಮೂಲಸೌಕರ್ಯಗಳನ್ನು ಪಡೆಯಲು ಸಾಧ್ಯ.

ಇವರಿಗೆ ಇಷ್ಟೆಲ್ಲ ಸವಲತ್ತುಗಳನ್ನು ಉಚಿತವಾಗಿ ನೀಡಿದರೂ ಇವರು ನಮ್ಮ ಅರ್ಥ ವ್ಯವಸ್ಥೆಯನ್ನು ಸಮರ್ಪಕವಾಗಿ ನಿರ್ವಹಿಸುತ್ತಿಲ್ಲ. ಇದಿಂದ ಜಿಡಿಪಿ ದಿನದಿಂದ ದಿನಕ್ಕೆ ಕುಸಿಯುತ್ತದೆ, ಗುಣಮಟ್ಟದ ಉದ್ಯೋಗ ಸೃಷ್ಟಿ ಆಗುತ್ತಿಲ್ಲ. ಶಿಕ್ಷಣ, ಆರೋಗ್ಯ ಮತ್ತು ಇತರ ಮೂಲಸೌಕರ್ಯಗಳನ್ನು ಇವರು ನಿರ್ವಹಿಸಲು ಅಸಫಲರಾದ ಕಾರಣ ಜನರು ತಾವು ಕಷ್ಟಪಟ್ಟು ಗಳಿಸಿದ ಅಲ್ಪಸ್ವಲ್ಪ ಆದಾಯವನ್ನು ಮೂಲಸೌಕರ್ಯಗಳನ್ನು ದುಬಾರಿ ಬೆಲೆಗೆ ಮಾರುಕಟ್ಟೆಯಲ್ಲಿ ಖರೀದಿಸಿ ಬಳಸಬೇಕಾಗಿದೆ. ಹೀಗೆ ಜನ ಸಾಮಾನ್ಯರಿಗೆ ಎರಡು ನಷ್ಟಗಳು? ಒಂದು, ತಾವು ಕಟ್ಟಿದ ತೆರಿಗೆ ಆಯೋಗ್ಯ ಜನಪ್ರತಿನಿಧಿಗಳು ಮತ್ತು ಅಧಿಕಾರಗಳನ್ನು ಸಾಕಲು ಬಳಕೆ ಆಗುವುದು ಮತ್ತು ಎರಡು, ಕಷ್ಟಪಟ್ಟು ದುಡಿದ ಅಲ್ಪಸ್ವಲ್ಪ ಆದಾಯ ಸರಕಾರ ನೀಡಬೇಕಾದ ಸವಲತ್ತುಗಳನ್ನು ಮಾರುಕಟ್ಟೆಯಲ್ಲಿ ಖರೀದಿಸಿ ಬಳಸುವ ಅನಿವಾರ್ಯತೆ ಇದೆ.

ಅತ್ಯಂತ ಹೆಚ್ಚು ಉಚಿತ ಸವಲತ್ತು ಪಡೆಯುವ ಮತ್ತೊಂದು ಗುಂಪು ಉದ್ದಿಮೆಗಳು. ಇವರಿಗೆ ಕಡಿಮೆ ಬೆಲೆಗೆ ಭೂಮಿ, ಕಡಿಮೆ ಬಡ್ಡಿಗೆ ಸಾಲ, ಪಡೆದ ಸಾಲ ಕಟ್ಟದಿದ್ದರೆ ಸಾಲ ಮನ್ನಾ, ತೆರಿಗೆ ಮನ್ನಾ ಎಲ್ಲವೂ ಇದೆ. ಪ್ರತಿ ವರ್ಷ ಹಲವು ಕೋಟಿ ತೆರಿಗೆ ವಿನಾಯಿತಿ ಇದೆ ಇವರಿಗೆ. ಉದಾಹರಣೆಗೆ 2016–17ರಲ್ಲಿ ರೂ.83,492 ಕೋಟಿ, 2018–19ರಲ್ಲಿ ರೂ.1,08,113 ಕೋಟಿ ಮತ್ತು 2019–20ರಲ್ಲಿ ರೂ. 99,842 ಕೋಟಿ ತೆರಿಗೆ ವಿನಾಯಿತಿ ಇವರಿಗೆ ನೀಡಲಾಗಿದೆ. ಸರಕಾರಿ ಸಾಲದ ಬಹುಭಾಗವನ್ನು (ಶೇ.70ನ್ನು) ಬೃಹತ್ ಉದ್ದಿಮೆ ಮತ್ತು ದೊಡ್ಡ ಕೃಷಿಕರೇ ಪಡೆಯುತ್ತಾರೆ. ಸಾಲ ಪಡೆದು ಇವರು ಕಾಲಕಾಲಕ್ಕೆ ಸಂದಾಯ ಮಾಡಿದರೆ ಮತ್ತು ಉದ್ಯೋಗ ಸೃಷ್ಟಿಸಿದರೆ ಅಥವಾ ಕಡಿಮೆ ಬೆಲೆಗೆ ಸರಕು ಸೇವೆಗಳನ್ನು ಪೂರೈಸಿದರೆ ಇವರಿಗೆ ನೀಡುವ ಸಾಲದ ಬಗ್ಗೆ ತಕರಾರು ಎತ್ತುವ ಅಗತ್ಯವಿಲ್ಲ. ಆದರೆ ವಾಸ್ತವ ಆ ರೀತಿ ಇಲ್ಲ. ವರ್ಷದಿಂದ ವರ್ಷಕ್ಕೆ ಸರಕು ಸೇವೆಗಳ ಉತ್ಪಾದನ ಪ್ರಮಾಣ ಕುಸಿಯುತ್ತಿದೆ. ಆರ್‌ಬಿಐ ಅಧ್ಯಯನ ಪ್ರಕಾರ 1980–9ರಲ್ಲಿ ಶೇ.1ರಷ್ಟು ಜಿಡಿಪಿ ಏರಿಕೆ ಆದಾಗ 2 ಲಕ್ಷ ಗುಣಮಟ್ಟದ ಉದ್ಯೋಗ ಸೃಷ್ಟಿ ಆಗುತ್ತಿತ್ತು. 1990–2000ದಲ್ಲಿ ಪ್ರತಿ ಶೇ.1 ಜಿಡಿಪಿ ಏರಿಕೆಗೆ ಸೃಷ್ಟಿಯಾಗುವ ಗುಣಮಟ್ಟದ ಉದ್ಯೋಗ 1 ಲಕ್ಷಕ್ಕೆ ಇಳಿದಿದೆ. 2000–2010ರಲ್ಲಿ ಗುಣಮಟ್ಟದ ಉದ್ಯೋಗ ಸೃಷ್ಟಿ 52,000ಕ್ಕೆ ಇಳಿದಿದೆ. ಅಂದರೆ ಹೆಚ್ಚು ಹೆಚ್ಚು ಮೆಶಿನರಿ ಬಳಸಿ ಉತ್ಪಾದನೆ ನಡೆಯುತ್ತಿದೆ.

ಕಡಿಮೆ ಬೆಲೆಗೆ ಸರಕು ಸೇವೆಗಳ ಪೂರೈಕೆ ಇಲ್ಲ, ಗುಣಮಟ್ಟದ ಉದ್ಯೋಗ ಸೃಷ್ಟಿ ಇಲ್ಲ, ಓಕೆ ಬ್ಯಾಂಕ್ ಸಾಲವನ್ನಾದರೂ ಕಟ್ಟಿದ್ದಾರೋ ನೋಡಿದರೆ ಅಲ್ಲೂ ಇವರ ಸಾಧನೆ ಶೂನ್ಯ. ಇವತ್ತು ಸರಕಾರಿ ಬ್ಯಾಂಕ್‌ಗಳಲ್ಲಿ ನೀಡಿದ ಸಾಲದಲ್ಲಿ ಶೇ.10ರಷ್ಟು ಕೆಟ್ಟ ಸಾಲಗಳಿವೆ. ಕೆಟ್ಟ ಸಾಲದಿಂದ ಬ್ಯಾಂಕ್‌ಗಳನ್ನು ದಿವಾಳಿ ಆಗುವುದನ್ನು ತಪ್ಪಿಸಲು ನಾವು ನೀವು ಕಟ್ಟಿದ ತೆರಿಗೆ ಹಣವನ್ನು ಸರಕಾರ ಬ್ಯಾಂಕ್‌ಗಳಿಗೆ ತುಂಬುತ್ತಿದೆ. ಕಳೆದ 7 ವರ್ಷಗಳಲ್ಲಿ ಉದ್ದಿಮೆಗಳ ರೂ.10.72 ಲಕ್ಷ ಕೋಟಿಯಷ್ಟು ಕೆಟ್ಟ ಸಾಲವನ್ನು ಸರಕಾರ ಮನ್ನಾ ಮಾಡಿದೆ. ಹಲವು ಲಕ್ಷ ಕೋಟಿ ತೆರಿಗೆ ಮೊತ್ತವನ್ನು ಉದ್ದಿಮೆಗಳ ಸಾಲದಿಂದ ಬಸವಳಿದ ಬ್ಯಾಂಕ್‌ಗಳನ್ನು ಸುಧಾರಿಸಲು ಸರಕಾರ ತುಂಬಿದೆ. ದಿನಾ ಟಿವಿಯಲ್ಲಿ, ಪತ್ರಿಕೆಗಳಲ್ಲಿ ಬಡವರಿಂದಲೇ ಈ ದೇಶದ ಅರ್ಥಿಕ ಸ್ಥಿತಿ ಬಿಗಾಡಯಿಸುತ್ತಿದೆ ಎಂದು ತುತ್ತೂರಿ ಊದುವ ಮಧ್ಯಮ ವರ್ಗಕ್ಕೆ ಸೇರಿದ ಒಂದು ಗುಂಪು ಇದೆ. ಇವರಿಗೂ ಸರಕಾರ ಹಲವು ರಿಯಾಯಿತಿಗಳನ್ನು ನೀಡುತ್ತಿದೆ. ಬ್ಯಾಂಕ್‌ಗಳು ಇವರನ್ನು ಹುಡುಕಿ ಹುಡುಕಿ ಮನೆ ಕಟ್ಟಲು, ವಾಹನ ಖರೀದಿಸಲು ಮತ್ತು ಇತರ ಗೃಹ ಬಳಕೆ ಸರಕುಗಳನ್ನು ಖರೀದಿಸಲು ರಿಯಾಯಿತು ದರದಲ್ಲಿ ಸಾಲ ನೀಡುತ್ತಿವೆ. ಹೀಗೆ ಪಡೆದ ಸಾಲವನ್ನು ಕಟ್ಟದಿರುವವರು ಮಧ್ಯವ ವರ್ಗದವರೂ ಇದ್ದಾರೆ. ಇವರ ಪ್ರಮಾಣ ಕಡಿಮೆ ಇದೆ ಎನ್ನುವುದು ಸಮಧಾನದ ಸಂಗತಿ. ಇವರಿಗೂ ಹಲವು ತೆರಿಗೆ ವಿನಾಯಿತಿಗಳಿವೆ. 2016–17ರಲ್ಲಿ ಇವರಿಗೆ 74,384 ಕೋಟಿಯಷ್ಟು ತೆರಿಗೆ ವಿನಾಯಿತಿ ನೀಡಲಾಗಿದೆ.




ಸಮರೋಪ

ಮೇಲಿನ ಚರ್ಚೆಯ ಹಿನ್ನೆಲೆಯಲ್ಲಿ ಮೂರುನಾಲ್ಕು ತೀರ್ಮಾನಗಳನ್ನು ತಳೆಯಬಹುದು. ಒಂದು, ಜನರಿಗೆ ಭೂಮಿ, ಬಂಡವಾಳ ಅಥವಾ ಗುಣಮಟ್ಟದ ಶಿಕ್ಷಣ, ಆರೋಗ್ಯಗಳನ್ನು ಕೊಟ್ಟು ಮೂಲಸೌಕರ್ಯಗಳನ್ನು ಜನರೇ ದುಡಿದು ಗಳಿಸುವ ಪರಿಸರ ಸೃಷ್ಟಿಸುವ ಅಭಿವೃದ್ಧಿಯನ್ನು ಎಲ್ಲ ಪಕ್ಷಗಳು ಇಂದು ಮರೆತಿವೆ. ಮೂಲಸೌಕರ್ಯಗಳನ್ನು ಜನರು ದುಡಿದು ಗಳಿಸುವ ಬದಲು ಕಳಪೆ ಗುಣಮಟ್ಟದ ಮೂಲಸೌಕರ್ಯಗಳನ್ನು ಅರೆಬರೆ ಪ್ರಮಾಣದಲ್ಲಿ ಜನರಿಗೆ ನೀಡಿ ಮತ ಗಳಿಸುವುದು ಇಂದಿನ ರಾಜಕೀಯದ ಗುರಿ. ಎರಡು, ಸರಕಾರ ನೀಡುವ ಸವಲತ್ತು ಅದರ ಬಲದಲ್ಲೇ ಪ್ರೊಡಕ್ಟಿವ್ ಅಥವಾ ಅನ್‌ಪ್ರೊಡಕ್ಟಿವ್ ಆಗುವುದಿಲ್ಲ. ನಿರ್ದಿಷ್ಟ ಸವಲತ್ತನ್ನು ನೋಡುವ ಕಣ್ಣಲ್ಲಿ ಸವಲತ್ತು ಪ್ರೊಡಕ್ಟಿವ್ ಅಥವಾ ಅನ್‌ಪ್ರೊಡಕ್ಟಿವ್ ಆಗಬಹುದು. ಉದ್ದಿಮೆಗಳಿಗೆ ನೀಡುವ ತೆರಿಗೆ ರಿಯಾಯಿತಿ ಅಥವಾ ಸಾಲಮನ್ನಾಗಳನ್ನು ಉದ್ದಿಮೆಗಳ ಕಣ್ಣಲ್ಲಿ ಅಭಿವೃದ್ಧಿಯನ್ನು ನೋಡಿದರೆ ಅದು ಪ್ರೊಡಕ್ಟಿವ್ ಆಗಬಹುದು. ಬಡವರ ಜಾಗದಲ್ಲಿ ನಿಂತು ನೋಡಿದರೆ ಅನ್‌ಪ್ರೊಡಕ್ಟಿವ್ ಆಗಬಹುದು. ಅದೇ ರೀತಿ ಬಡವರಿಗೆ ನೀಡುವ ಮಧ್ಯಾಹ್ನದ ಬಿಸಿಯೂಟ ಅಥವಾ ಲ್ಯಾಪ್‌ಟಾಪ್‌ನ್ನು ಬಡವರ ಜಾಗದಲ್ಲಿ ನಿಂತು ನೋಡಿದರೆ ಪ್ರೊಡಕ್ಟಿವ್ ಆಗುತ್ತದೆ. ಆದರೆ ಅನುಕೂಲಸ್ಥರ ಜಾಗದಲ್ಲಿ ನಿಂತು ನೋಡಿದರೆ ಅನ್‌ಪ್ರೊಡಕ್ಟಿವ್ ಆಗಬಹುದು. ಮೂರು, ಅಭಿವೃದ್ಧಿಯನ್ನು ಜಿಡಿಪಿಗೆ ಸೀಮಿತಗೊಳಿಸಿದರೆ ಬಡವರಿಗೆ ನೀಡುವ ಸವಲತ್ತುಗಳು ಅನ್‌ಪ್ರೊಡಕ್ಟಿವ್ ಆಗಬಹುದು. ಒಂದು ವೇಳೆ ಅಭಿವೃದ್ಧಿಯ ಅಂತಿಮ ಗುರಿ ಜನರೆಂದು ತಿಳಿದು ಅವರ ಸಾಮರ್ಥ್ಯ ವೃದ್ಧಿಸುವುದು ಕೂಡ ಒಂದು ವಿನಿಯೋಜನೆ ಎಂದು ತಿಳಿದರೆ ಬಡವರಿಗೆ ನೀಡುವ ಸವಲತ್ತುಗಳು ಪ್ರೊಡಕ್ಟಿವ್ ಆಗುತ್ತದೆ. ನಾಲ್ಕು, ಚುನಾವಣೆ ಗೆಲ್ಲಲು ಜಾತಿ, ಧರ್ಮಗಳನ್ನು ಅವಲಂಬಿಸುವ ಪಕ್ಷಗಳು ಬಡಜನರಿಗೆ ಸವಲತ್ತು ನೀಡುವುದು ಅನಿವಾರ್ಯವೆಂದು ತಿಳಿದಿಲ್ಲ.

ಎನ್‌ಡಿಟಿವಿ ಖರೀದಿ–ಮುಖ್ಯವಾಹಿನಿಯ ಕೊನೆಯ ಸ್ವತಂತ್ರ ಸುದ್ದಿ ಬುರುಜನ್ನು ಉರುಳಿಸುವ ಪ್ರಯತ್ನ: ಡಿ.ಯು.ಜೆ. ಖೇದ

ಕಾರ್ಪೊರೇಟ್‌ಗಳು ಮತ್ತು ಕೆಲವು ರಾಜಕೀಯ ಪಕ್ಷಗಳ ಧ್ವನಿಯಾಗಿ ಮಾರ್ಪಟ್ಟಿವೆ. ವಿವಿಧ ಮಾಧ್ಯಮಗಳಲ್ಲಿ ಹಿಡುವಳಿಗಳು ಮತ್ತು ಮಾಧ್ಯಮ ಏಕಸ್ವಾಮ್ಯಗಳು ಸರ್ಕಾರ ಮತ್ತು ದೊಡ್ಡ ಬಂಡವಳಿಗರ ಅಭಿಪ್ರಾಯಗಳನ್ನೇ ಎಲ್ಲ ವಾಹಿನಿಗಳಲ್ಲೂ ಪುನರಾವರ್ತನೆಗೊಳಿಸುವಂತೆ ನೋಡಿಕೊಳ್ಳುತ್ತಿವೆ. ಪಕ್ಷಪಾತ ಎಷ್ಟು ಸ್ಪಷ್ಟವಾಗಿದೆಯೆಂದರೆ, ಪ್ರತಿ ಜನಾಂದೋಲನದ ಸಮಯದಲ್ಲಿ ಸಂಬಂಧಪಟ್ಟ ಜನವಿಭಾಗಗಳು ಕೆಲವು ಟಿವಿ ಚಾನೆಲ್‌ಗಳು ಮತ್ತು ಅವುಗಳ ನಿರೂಪಕರುಗಳನ್ನು ಬಹಿರಂಗವಾಗಿ ತಿರಸ್ಕರಿಸುವಂತಾಗಿದೆ.. ಪೌರತ್ವ ತಿದ್ದುಪಡಿ ಕಾಯ್ದೆ (ಸಿಎಎ) ಪ್ರತಿಭಟನೆಗಳು ಮತ್ತು ರೈತರ ಹೋರಾಟದ ಸಮಯದಲ್ಲಿ, ಜನರು ಈ ಚಾನೆಲ್‌ಗಳ ಅಪಪ್ರಚಾರದ ಮಿಂಚುದಾಳಿಗಳನ್ನು ಜೋರಾಗಿ ಪ್ರಶ್ನಿಸಿದರು. ಕೆಲವು ಮಾಧ್ಯಮ ನಿರೂಪಕರು ವಹಿಸಿದ ಪಕ್ಷಪಾತದ ಪಾತ್ರ ಮಾಧ್ಯಮದ ವಿಶ್ವಾಸಾರ್ಹತೆಯನ್ನು ಸಾರ್ವಕಾಲಿಕ ಕೆಳಮಟ್ಟಕ್ಕೆ ತಂದಿರುವ ಬಗ್ಗೆ ವಿಷಾಧ ವ್ಯಕ್ತಪಡಿಸುತ್ತ ಡಿಯುಜೆ. ಸಮತೋಲಿತ, ನೈತಿಕ ವರದಿಗಾರಿಕೆ, ವಿಶ್ಲೇಷಣೆ ಮತ್ತು ಚರ್ಚೆಯ ಬದಲು ಕರ್ಕಶ ಅಪಪ್ರಚಾರವನ್ನು ನಡೆಸಲಾಗುತ್ತಿದೆ ಎಂದು ಖೇದ ವ್ಯಕ್ತಪಡಿಸಿದೆ.



“ಬ್ರೇಕಿಂಗ್ ನ್ಯೂಸ್”–ವ್ಯಂಗ್ಯಚಿತ್ರ ಕೃಪೆ: ಸಜಿತ್ ಕುಮಾರ್, ಡೆಕ್ಕನ್ ಹೆರಾಲ್ಡ್

ಕೊನೆಯ ಸ್ವತಂತ್ರ ಮುಖ್ಯವಾಹಿನಿಯಾಗಿ ಉಳಿದಿರುವ ಎನ್.ಡಿ.ಟಿ.ವಿ.ಯನ್ನು ವಶಪಡಿಸಿಕೊಳ್ಳುವ ಪ್ರಯತ್ನ ತಮ್ಮಂತಹ ವೃತ್ತಿಪರ ಪತ್ರಕರ್ತರಲ್ಲಿ ತೀವ್ರ ನಿರಾಶೆಮತ್ತು ನಿರುತ್ಸಾಹ ಉಂಟುಮಾಡಿದೆ ಎಂದಿರುವ ಡಿಯುಜೆ ಇನ್ನು ಮುಂದೆ ಎನ್.ಡಿ.ಟಿ.ವಿ.ಯನ್ನು ಈಗ ದೇಶ ಮತ್ತು ವಿದೇಶಗಳಲ್ಲಿ ಅನೇಕ ವ್ಯಾಪಾರ ಉದ್ಯಮಗಳನ್ನು ವ್ಯಾಪಿಸಿರುವ ಅದಾನಿ ಸಾಮ್ರಾಜ್ಯವನ್ನು ಪ್ರಾಯೋಜಿಸಲು ಬಳಸಲಾಗುತ್ತದೆ. ಗಣಿಗಾರಿಕೆಯಿಂದ ಹಿಡಿದು ಬಂದರುಗಳು, ವಿಮಾನ ನಿಲ್ದಾಣಗಳು, ಆಹಾರ ಧಾನ್ಯಗಳು, ಖಾದ್ಯ ತೈಲಗಳು, ಸಿಮೆಂಟ್ ಮತ್ತು ಇಂಧನದ ವರೆಗಿನ ಅನೇಕ ವಲಯಗಳಲ್ಲಿನ ಬೆಳವಣಿಗೆಗಳ ನ್ಯಾಯಯುತ ವರದಿ ಅಸಾಧ್ಯವಾಗುತ್ತದೆ ಎಂದು ಡಿಯುಜೆ ಆತಂಕ ವ್ಯಕ್ತಪಡಿಸಿದೆ.

“ಈ ಹಿಂದಿನ ವರ್ಷಗಳಲ್ಲಿ ಎನ್.ಡಿ.ಟಿ.ವಿ.ಯ ಕೆಚ್ಚೆದೆಯ ಸಿಬ್ಬಂದಿ ಮತ್ತು ಆಡಳಿತದ ಮಂದಿ ಅನೇಕ ಒತ್ತಡಗಳು ಮತ್ತು ಸವಾಲುಗಳನ್ನು ಎದುರಿಸಿಯೂ ವೃತ್ತಿಪರ ದೃಷ್ಟಿಕೋನದಿಂದ ನಮಗೆ ಸುದ್ದಿ ಮತ್ತು ಅಭಿಪ್ರಾಯಗಳನ್ನು ತಂದು ಕೊಟ್ಟಿದ್ದಾರೆ, ಅದಕ್ಕಾಗಿ ಅವರನ್ನು ನಾವು ವಂದಿಸುತ್ತೇವೆ” ಎಂದಿರುವ ದಿಲ್ಲಿ ಪತ್ರಕರ್ತರ ಸಂಘ, ಈಗ ಸ್ವತಂತ್ರ ಪತ್ರಕರ್ತರನ್ನು ತೆಗೆದು ಹಾಕುವುದು ಅಥವ ಬಲವಂತದ ರಾಜೀನಾಮೆಗಳು ನಡೆಯುತ್ತವೆ ಎಂಬ ಭಯವನ್ನು ವ್ಯಕ್ತಪಡಿಸುತ್ತ ಅವರ ಭವಿಷ್ಯದ ಬಗ್ಗೆ ಅತೀವ ಕಾಳಜಿ ವ್ಯಕ್ತಪಡಿಸಿದೆ.

ಎನ್.ಡಿ.ಟಿ.ವಿ. ಯನ್ನು ಸ್ವಾಧೀನಪಡಿಸಿಕೊಳ್ಳುವ ಈ ಪ್ರಯತ್ನ ಮಾಧ್ಯಮಗಳಿಂದಾಗಲೀ, ಅಥವ ನಾಗರಿಕ ಸಮಾಜ ಅಥವಾ ರಾಜಕೀಯ ವಿರೋಧಿಗಳಿಂದಾಗಲೀ, ಯಾವುದೇ ವಿರೋಧವನ್ನು ಸಹಿಸದ ಪ್ರಸಕ್ತ ಸರ್ಕಾರದ ಆದೇಶದ ಮೇರೆಗೆ ನಡೆಯುತ್ತಿದೆ ಎಂಬುದರಲ್ಲಿ ಸಂದೇಹವಿಲ್ಲ. ಈ ನಡೆಯು ಆಳುವ ಪಕ್ಷದ ಸಂಕುಚಿತ, ಏಕಧ್ರುವ ಕಣ್ಣೋಟವನ್ನು ಬಲಪಡಿಸುತ್ತದೆ ಮತ್ತು ಅದನ್ನು ನಾಗರಿಕರ ಮೇಲೆ ಹೇರುತ್ತದೆ. ಭಾರತ ಇನ್ನೂ ಪ್ರಜಾಪ್ರಭುತ್ವವಾಗಿದೆ ಎಂಬ ಭ್ರಮೆ ಈಗ ನುಚ್ಚುನೂರಾಗಿದೆ ಎಂದು ದಿಲ್ಲಿಪತ್ರಕರ್ತರ ಸಂಘ ಖೇದದಿಂದ ಹೇಳಿದೆ.



ಆರ್ಥಿಕ ನಿರ್ಬಂಧಗಳಿಂದ ಡಾಲರ್ ಪಾರಮ್ಯಕ್ಕೇ ಕುತ್ತು

ಆಗಸ್ಟ್ 2021 ರಿಂದ ಆಗಸ್ಟ್ 2022 ರವರೆಗಿನ 12 ತಿಂಗಳ ಅವಧಿಯಲ್ಲಿ, ಡಾಲರ್‌ಗೆ ಎದುರಾಗಿ ರೂಬಲ್‌ನ ಮೌಲ್ಯವು ಶೇ.22 ಕ್ಕಿಂತಲೂ ಹೆಚ್ಚು ವೃದ್ಧಿಸಿದೆ. ರಷ್ಯಾದ ಮೇಲೆ ಹೇರಿದ ನಿರ್ಬಂಧಗಳು, ಕೇವಲ ಐರೋಪ್ಯ ಒಕ್ಕೂಟಕ್ಕೆ ಮಾತ್ರವಲ್ಲ, ಅಮೆರಿಕ ಸಂಯುಕ್ತ ಸಂಸ್ಥಾನಕ್ಕೂ ಸಹ, 'ಸೆಲ್ಫ್ ಗೋಲ್' ಆಗಿ ಪರಿಣಮಿಸಿ, ನವ-ಉದಾರವಾದ ಹೇರಿರುವ ಮತ್ತು ಅದರ ಜೀವಾಳವಾದ ಬಹುಪಕ್ಷೀಯತೆಯಿಂದ ದೂರ ಸರಿದು ದ್ವಿಪಕ್ಷೀಯ ವ್ಯವಸ್ಥೆಯ ಪ್ರಸರಣವನ್ನು ತ್ವರಿತಗೊಳಿಸಿವೆ. ನಿಜ, ಇದರ ಆಧಾರದ ಮೇಲೆ, ಡಾಲರ್‌ನ ಅವನತಿಯು ಅಂತಿಮ ಹಂತವನ್ನು ತಲುಪಿದೆ ಎಂಬ ತೀರ್ಮಾನಕ್ಕೆ ಬರುವುದು ಪೂರ್ಣವಾಗಿ ಅಕಾಲಿಕವಾಗುತ್ತದೆ. ಆದರೂ ಅದರ ಮೂಲಕ ಬಹುಪಕ್ಷೀಯತೆಯನ್ನು ಜಗತ್ತಿನಾದ್ಯಂತ ಹೇರಿದ ನವ-ಉದಾರವಾದಿ ವ್ಯವಸ್ಥೆಯು ಕೊನೆಗೊಳ್ಳಲಿದೆ ಎಂಬುದಂತೂ ಖರೇ.

ಪ್ರೊ.ಪ್ರಭಾತ್ ಪಟ್ನಾಯಕ್ ಅನು: **ಕೆ.ಎಂ.ನಾಗರಾಜ್**

ಬ್ರೆಟನ್‌ವುಡ್ಸ್ ವ್ಯವಸ್ಥೆಯ ಪ್ರಕಾರವಾಗಿ ಡಾಲರನ್ನು ನಿಗದಿಪಡಿಸಿದ ಒಂದು ದರದಲ್ಲಿ ಚಿನ್ನವಾಗಿ ಪರಿವರ್ತಿಸುವುದು ಸಾಧ್ಯವಿಲ್ಲದಿದ್ದರೂ ಸಹ ಮತ್ತು ಈ ವ್ಯವಸ್ಥೆಯ ಕುಸಿತದ ನಂತರವೂ, ವಿಶ್ವದ ಹಣವಂತರು ಡಾಲರನ್ನು "ಚಿನ್ನಕ್ಕೆ ಸಮಾನ" ಎಂದು ಪರಿಗಣಿಸುತ್ತಿದ್ದ ಕಾರಣದಿಂದ ಅಮೆರಿಕಾದ ಡಾಲರ್‌ನ ಆಧಿಪತ್ಯವು ಮುಂದುವರೆದಿತ್ತು. ಈ ಹಣವಂತರನ್ನು ಎರಡು ಗುಂಪುಗಳಾಗಿ ವಿಂಗಡಿಸಬಹುದು: ಮೊದಲನೆಯ ಗುಂಪಿನಲ್ಲಿ ಖಾಸಗಿ ವ್ಯಕ್ತಿಗಳು ಹಾಗೂ ಸಂಸ್ಥೆಗಳು ಬರುತ್ತವೆ ಮತ್ತು ಎರಡನೆಯ ಗುಂಪಿನಲ್ಲಿ, ತಮ್ಮ ತಮ್ಮ ದೇಶಗಳ ವಿದೇಶಿ ವಿನಿಮಯ ಮೀಸಲು ಸಂಗ್ರಹವನ್ನು ಹೊಂದಿರುವ ಕೇಂದ್ರೀಯ ಬ್ಯಾಂಕುಗಳು ಬರುತ್ತವೆ.

ಡಾಲರನ್ನು 'ಚಿನ್ನದಷ್ಟೇ ಉತ್ತಮ'ವೆಂದು ಏಕೆ ಪರಿಗಣಿಸಲಾಯಿತು ಎಂದರೆ, ಚಿನ್ನದ ಬೆಲೆಯು ಸಾಮಾನ್ಯವಾಗಿ ಸರಕುಗಳ ಮತ್ತು ಸೇವೆಗಳ ಬೆಲೆಗಳ ಜೊತೆಯಲ್ಲೇ ಚಲಿಸುತ್ತದೆಯಾದರೂ, ಸರಕು-ಸೇವೆಗಳ ಡಾಲರ್ ರೂಪದ ಬೆಲೆಗಳು ಅನಗತ್ಯವಾಗಿ ಏರುವುದಿಲ್ಲ ಎಂದು ನಿರೀಕ್ಷಿಸಲಾಗಿತ್ತು. ಕಾರ್ಮಿಕರ ಒಂದು ಮೀಸಲು ಪಡೆಯನ್ನು ಕಟ್ಟಿಕೊಳ್ಳುವ ಮೂಲಕ ಅಮೆರಿಕದಲ್ಲಿ ಡಾಲರ್ ವೇತನ ದರಗಳನ್ನು ನಿಯಂತ್ರಣದಲ್ಲಿಡಲಾಗಿದೆ ಎಂದು ನಂಬಲಾಗಿತ್ತು. ಡಾಲರ್ ಬೆಲೆಯು ಪ್ರಮುಖವಾಗಿ ತೈಲ ಬೆಲೆ ಆಧಾರಿತವಾಗಿದ್ದರೂ, ತೈಲ ಬೆಲೆಗಳ ಅಲ್ಪಾವಧಿ ಏರಿಳಿತಗಳ ಹೊರತಾಗಿಯೂ, ತೈಲ ಉತ್ಪಾದಕರ ಮೇಲೆ "ಶಿಸ್ತು" ಹೇರುವ ಅಮೆರಿಕದ ಸಾಮರ್ಥ್ಯದಿಂದಾಗಿ ಕಾಲಾನಂತರದಲ್ಲಿ ಡಾಲರ್ ಬೆಲೆ ಸ್ಥಿರವಾಗಿ ಉಳಿಯುತ್ತದೆ ಎಂದೇ ಭಾವಿಸಲಾಗಿತ್ತು.

ಕೇಂದ್ರೀಯ ಬ್ಯಾಂಕುಗಳ ವಿಷಯದಲ್ಲಿ, ಇನ್ನೂ ಒಂದು ಅಧಿಕ ಅಂಶವಿತ್ತು. ಅಂತಾರಾಷ್ಟ್ರೀಯ ವ್ಯಾಪಾರ-ವಹಿವಾಟುಗಳ ಸ್ವರೂಪವು ಬಹುಪಕ್ಷೀಯವಾಗಿರುವ ಸಹಜ ಕಾರಣದಿಂದಾಗಿ ಮತ್ತು ಹೆಚ್ಚಿನ ವ್ಯವಹಾರಗಳು ಡಾಲರ್ ಕರೆನ್ಸಿಯಲ್ಲೇ ನಡೆಯುತ್ತಿದುದರಿಂದಾಗಿ, ಕೇಂದ್ರೀಯ ಬ್ಯಾಂಕುಗಳು ತಮ್ಮ ಮೀಸಲು ಸಂಗ್ರಹವನ್ನು ಡಾಲರ್ ಕರೆನ್ಸಿಯಲ್ಲೇ ಇಟ್ಟುಕೊಳ್ಳುತ್ತವೆ. ದ್ವಿಪಕ್ಷೀಯ ವ್ಯಾಪಾರ ವ್ಯವಸ್ಥೆಗಳ ಮೂಲಕ ಕೈಗೊಳ್ಳುತ್ತಿದ್ದ ವ್ಯವಹಾರಗಳಲ್ಲಿ, ಪ್ರತಿಯೊಂದು ದೇಶವೂ ಮತ್ತೊಂದು ದೇಶದ ಕರೆನ್ಸಿಯಲ್ಲಿ ದಾವೆಗಳನ್ನು ಹೊಂದುತ್ತಿದ್ದವು, ಈ ದಾವೆಗಳು ಕಾಲಾನಂತರದಲ್ಲಿ ಪರಸ್ಪರ ಸರಿದೂಗಿಸಲ್ಪಡುತ್ತವೆ ಎಂಬ ನಂಬಿಕೆಯ ಮೇಲೆ. ಆದರೆ, ಬಹುಪಕ್ಷೀಯ ವ್ಯಾಪಾರ-ವಹಿವಾಟುಗಳ ಸಂದರ್ಭದಲ್ಲಿ, ದ್ವಿಪಕ್ಷೀಯ ವ್ಯವಹಾರಗಳ ರೀತಿಯಲ್ಲಿ ಪರಸ್ಪರ ಸರಿದೂಗಿಸಲ್ಪಡುವ ಅವಕಾಶವೇ ಇಲ್ಲದಿರುವಾಗ, ಮೀಸಲುಗಳನ್ನು ಇಟ್ಟುಕೊಳ್ಳಲು ಒಂದು ಸಾಮಾನ್ಯ ಕರೆನ್ಸಿಯ ಅಗತ್ಯವಿರುತ್ತದೆ. ಅದಕ್ಕಾಗಿ ಒಂದು ಕರೆನ್ಸಿಯನ್ನು ಆಯ್ಕೆ ಮಾಡಿಕೊಳ್ಳಬೇಕಾಗುತ್ತದೆ. ಸರಕುಗಳ ವಿಷಯದಲ್ಲಿ ಯಾವ ಕರೆನ್ಸಿಯ ಮೌಲ್ಯವು ಅನಗತ್ಯವಾಗಿ ಕುಸಿಯುವುದಿಲ್ಲವೋ ಅಂತಹ ಒಂದು ಕರೆನ್ಸಿಯನ್ನೇ ಆಯ್ಕೆ ಮಾಡಿಕೊಳ್ಳಬೇಕಾಗುತ್ತದೆ. ಈ ಪ್ರಕಾರವಾಗಿ, ಡಾಲರನ್ನು ಆಯ್ಕೆ ಮಾಡಲಾಗಿತ್ತು. ಅದರಲ್ಲಿ ಆಶ್ಚರ್ಯವೇನಿಲ್ಲ.

ತೈಲ-ಡಾಲರ್-ರೂಬಲ್

ಈ ಪರಿಸ್ಥಿತಿ ಮೆಲ್ಲ ಮೆಲ್ಲನೇ ಬದಲಾಗತೊಡಗಿತ್ತು. ಉಕ್ರೇನ್ ಯುದ್ಧದ ಹಿನ್ನೆಲೆಯಲ್ಲಿ ರಷ್ಯಾದ ಮೇಲೆ ನಿರ್ಬಂಧಗಳ ಹೇರಿಕೆಯು ಈ ಬದಲಾವಣೆಯ ವೇಗವನ್ನು ಹೆಚ್ಚಿಸಿತು. ನಿರ್ಬಂಧಗಳು ತೈಲದ ಮತ್ತು ನೈಸರ್ಗಿಕ ಅನಿಲದ ಬೆಲೆಗಳನ್ನು ತೀವ್ರವಾಗಿ ಹೆಚ್ಚಿಸಿವೆ. ರಷ್ಯಾವು ತೈಲ ಮತ್ತು ನೈಸರ್ಗಿಕ ಅನಿಲಗಳ ಪ್ರಮುಖ ರಫ್ತುದಾರ ದೇಶ. ಆದರೆ ತೈಲ ಮತ್ತು ನೈಸರ್ಗಿಕ ಅನಿಲಗಳ ಬೆಲೆಗಳು ಏರಿಕೆಯಾಗಿರುವುದು ಈ ಸರಕುಗಳ ನೈಜ ಕೊರತೆಯಿಂದಾಗಿ ಅಲ್ಲ. ಈ ಸರಕುಗಳನ್ನು ರಷ್ಯಾದಿಂದ ಕೊಳ್ಳದಂತೆ ಅಮೆರಿಕಾ ಹೇರಿದ ನಿರ್ಬಂಧದಿಂದಾಗಿ ಮತ್ತು ಭವಿಷ್ಯದಲ್ಲಿ ತೈಲ ಮತ್ತು ನೈಸರ್ಗಿಕ ಅನಿಲಗಳ ಬೆಲೆಗಳು ಏರುವ ನಿರೀಕ್ಷೆಯ ಮೇಲೆ ಹುಟ್ಟಿಕೊಂಡ ಜೂಜುಕೋರ ಚಟುವಟಿಕೆಗಳ ಮಾರ್ಗವಾಗಿ. ಗಣನೀಯ ಪ್ರಮಾಣದಲ್ಲಿ ಹೆಚ್ಚಿದ ಅಮೆರಿಕದ ತೈಲ ಕಂಪನಿಗಳ ಲಾಭವು ಹಣದುಬ್ಬರದ ತೀವ್ರ ಏರಿಕೆಯಾಗಿ ಪರಿಣಮಿಸಿದೆ. ಸಂಕ್ಷಿಪ್ತವಾಗಿ ಹೇಳುವುದಾದರೆ, ತೈಲ ಮತ್ತು ಡಾಲರ್ ಇವುಗಳ ನಡುವೆ ಅಂತರ್ಗತವಾಗಿದ್ದ ಸಂಬಂಧವು ಮುರಿದುಹೋದ ಪರಿಣಾಮವಾಗಿ ಡಾಲರ್ ಒತ್ತಡಕ್ಕೆ ಸಿಲುಕಿದೆ. ಇದಕ್ಕೆ ವ್ಯತಿರಿಕ್ತವಾಗಿ, ರಷ್ಯಾವು ತನ್ನ ತೈಲದ ಬೆಲೆಯನ್ನು ರೂಬಲ್ ಕರೆನ್ಸಿಯಲ್ಲಿ ನಿಗದಿಪಡಿಸಿರುವುದರಿಂದ, ರೂಬಲ್ "ತೈಲದಷ್ಟು ಉತ್ತಮ"ವಾಗಿರುವುದರಿಂದ ಅದು "ಚಿನ್ನದಷ್ಟೇ ಉತ್ತಮ"ವಾಗುತ್ತದೆ. ಹಾಗಾಗಿ ಅದು ಒಂದು ನೆಚ್ಚಿನ ಕರೆನ್ಸಿಯಾಗಿ ಹೊರಹೊಮ್ಮಿದೆ.

ತೈಲವನ್ನು ಮತ್ತು ನೈಸರ್ಗಿಕ ಅನಿಲವನ್ನು ರೂಬಲ್ ಕರೆನ್ಸಿಯಲ್ಲಿ ಪಾವತಿಸುವವರಿಗೆ ಮಾತ್ರ ಮಾರಾಟ ಮಾಡುವುದಾಗಿ ರಷ್ಯಾ ಹಿಡಿದ ಪಟ್ಟಿನಿಂದಾಗಿ ರೂಬಲ್‌ಗಳ ಮೇಲಿನ ಬೇಡಿಕೆ ಮತ್ತಷ್ಟು ಹೆಚ್ಚಿದೆ. ಹಾಗಾಗಿ, ರಷ್ಯಾದ ತೈಲವನ್ನು ಮತ್ತು ಅನಿಲವನ್ನು ಕೊಳ್ಳಲು ಡಾಲರ್ ಉಪಯೋಗಕ್ಕೆ ಬರುವುದಿಲ್ಲ ಎಂದಾದರೆ, ಸಂಭಾವ್ಯ ಖರೀದಿದಾರರು ಡಾಲರ್‌ಗಳ ಬದಲಿಗೆ ರೂಬಲ್‌ಗಳನ್ನು ಪಡೆಯಲು ಧಾವಿಸುತ್ತಾರೆ.

ಈ ಎರಡು ಅಂಶಗಳು, ಅವು ಎಷ್ಟೇ ಮುಖ್ಯವಾಗಿದ್ದರೂ ಸಹ, ಅವೇ ಎಲ್ಲವೂ ಅಲ್ಲ. ಭಾರತವೂ ಸೇರಿದಂತೆ ಹಲವಾರು ದೇಶಗಳು ರಷ್ಯಾದೊಂದಿಗೆ ದ್ವಿಪಕ್ಷೀಯ ವ್ಯಾಪಾರ ಒಪ್ಪಂದಗಳನ್ನು ಪುನರಾರಂಭಿಸಿವೆ. ಈ ಹಿಂದೆ ಸೋವಿಯತ್ ಒಕ್ಕೂಟವು ಅಸ್ತಿತ್ವದಲ್ಲಿದ್ದಾಗ ಇಂತಹ ಏರ್ಪಾಟುಗಳಿದ್ದವು ಮತ್ತು ಸೋವಿಯತ್ ಒಕ್ಕೂಟದ ಪತನದಿಂದಾಗಿಯೇ ಕೊನೆಗೊಂಡವು. ಅಂತಹ ಏರ್ಪಾಟಿನ ಅಡಿಯಲ್ಲಿ ಕೈಗೊಳ್ಳುವ ವ್ಯವಹಾರಗಳಿಗೆ ಅಮೆರಿಕಾದ ಡಾಲರ್ ಅಪ್ರಸ್ತುತವಾಗುತ್ತದೆ ಮತ್ತು ಎರಡು ಕರೆನ್ಸಿಗಳ (ಉದಾ:ರೂಪಾಯಿ-ರೂಬಲ್) ನಡುವೆ ಒಂದು ಒಪ್ಪಿತ ನಿರ್ದಿಷ್ಟ ವಿನಿಮಯ ದರವನ್ನು ನಿಗದಿಪಡಿಸಲಾಗುತ್ತದೆ. ಈ ಎರಡು ದೇಶಗಳ ನಡುವಿನ ವ್ಯಾಪಾರದಲ್ಲಿ ಒಂದು ದೇಶವು ಹೊಂದಿದ್ದ ಇನ್ನೊಂದು ದೇಶದ ಕರೆನ್ಸಿಯ ಕೊರತೆ ಸಂಭವಿಸಿದರೆ, ಅದನ್ನು ಕೊರತೆಯ ದೇಶದ ಕರೆನ್ಸಿಯಲ್ಲಿ ಇರಿಸಲಾಗುತ್ತಿತ್ತು. ಮತ್ತು, ಕರೆನ್ಸಿಯ ಹೆಚ್ಚುವರಿಗಳು "ಮೀಸಲುಗಳಿಗೆ" ಹೋಲುವುದರಿಂದ, ದ್ವಿಪಕ್ಷೀಯತೆಯ ಪ್ರಸರಣದ ಸಮಯದಲ್ಲೇ, ಈ ಮೀಸಲುಗಳನ್ನು ಇತರ ಕರೆನ್ಸಿಗಳಲ್ಲಿ (ವಿಶೇಷವಾಗಿ ರೂಬಲ್‌ಗಳಲ್ಲಿ) ಹೊಂದುವಂತಾಯಿತು.

ಈ ಎಲ್ಲಾ ಕಾರಣಗಳು, ಉಳಿದ ಅಂಶಗಳು ಇದ್ದ ಸ್ಥಿತಿಯಲ್ಲೇ ಇದ್ದಾಗ, ರೂಬಲ್‌ಗಳ ಮೇಲಿನ ಬೇಡಿಕೆಯನ್ನು ಹೆಚ್ಚಿಸುತ್ತವೆ. ನಿರ್ಬಂಧಗಳ ಘೋಷಣೆಯಾದ ತಕ್ಷಣವೇ ಕುಸಿದಿದ್ದ ರೂಬಲ್ ವಿನಿಮಯ ದರವು ಅನೇಕ ವರ್ಷಗಳ ಅವಧಿಯಲ್ಲಿ ಕಾಣದ ಒಂದು ಅಭೂತಪೂರ್ವ ಮಟ್ಟಕ್ಕೆ ಈಗ ಚೇತರಗೊಂಡಿರುವುದು ಆಶ್ಚರ್ಯವೇನಲ್ಲ. ಆಗಸ್ಟ್ 2021 ರಲ್ಲಿ, ಒಂದು ಡಾಲರ್‌ಗೆ ಸಮನಾಗಿ ಸುಮಾರು 72 ರೂಬಲ್‌ಗಳ ವಿನಿಮಯ ದರ ಇತ್ತು. ನಿರ್ಬಂಧಗಳ ಘೋಷಣೆಯ ನಂತರ, ವಿನಿಮಯ ದರವು ಡಾಲರ್ ಪರವಾಗಿತ್ತು. ಒಂದು ಡಾಲರ್‌ನ ವಿನಿಮಯ ದರವು ಸುಮಾರು 136 ರೂಬಲ್‌ಗಳ ವರೆಗೆ ಏರಿತು. ತದನಂತರ, ರೂಬಲ್ ತೀವ್ರವಾಗಿ ಏರಿಕೆಯಾಗಿದೆ. ಆಗಸ್ಟ್ 11, 2022 ರಂದು, ಡಾಲರ್‌ನ ವಿನಿಮಯ ದರವು ಸುಮಾರು 61 ರೂಬಲ್ ಮಟ್ಟದಲ್ಲಿತ್ತು (ನಿಖರವಾಗಿ ಹೇಳಬೇಕೆಂದರೆ 60.6957). ಆಗಸ್ಟ್ 2021 ರಿಂದ ಆಗಸ್ಟ್ 2022 ರವರೆಗಿನ 12 ತಿಂಗಳ ಅವಧಿಯಲ್ಲಿ, ಡಾಲರ್‌ಗೆ ಹೋಲಿಸಿದರೆ, ರೂಬಲ್‌ನ ಮೌಲ್ಯವು ಶೇ.22 ಕ್ಕಿಂತಲೂ ಹೆಚ್ಚು ವೃದ್ಧಿಸಿದೆ.

ದ್ವಿಪಕ್ಷೀಯತೆಯತ್ತ

ಬೇರೆ ಮಾತುಗಳಲ್ಲಿ ಹೇಳುವುದಾದರೆ, ರಷ್ಯಾದ ಮೇಲೆ ಹೇರಿದ ನಿರ್ಬಂಧಗಳು, ಕೇವಲ ಐರೋಪ್ಯ ಒಕ್ಕೂಟಕ್ಕೆ ಮಾತ್ರವಲ್ಲ, ಅಮೆರಿಕ ಸಂಯುಕ್ತ ಸಂಸ್ಥಾನಕ್ಕೂ ಸಹ, ತನ್ನ ಗೋಲಿನೊಳಗೇ ತಾನೇ ಚೆಂಡು ಹೊಡೆದ ಆಟವಾಗಿ ಪರಿಣಮಿಸಿವೆ. ಎಲ್ಲಕ್ಕಿಂತ ಮುಖ್ಯವಾಗಿ, ಈ ನಿರ್ಬಂಧಗಳು ಬಹುಪಕ್ಷೀಯತೆಯಿಂದ ದೂರ ಸರಿದು ದ್ವಿಪಕ್ಷೀಯ ವ್ಯವಸ್ಥೆಯ ಪ್ರಸರಣವನ್ನು ತ್ವರಿತಗೊಳಿಸಿವೆ.

ಇದು ನವ-ಉದಾರವಾದಿ ವ್ಯವಸ್ಥೆಯು ಒಂದು ಹೀನಸ್ಥಿತಿಯನ್ನು ತಲುಪಿದೆ ಎಂಬುದನ್ನೂ ಸೂಚಿಸುತ್ತದೆ. ಬಹುಪಕ್ಷೀಯತೆಯ ಹೇರಿಕೆಯು ನವ-ಉದಾರವಾದಿ ವ್ಯವಸ್ಥೆಯ ಸಾರವಾಗಿತ್ತು. ವಾಸ್ತವವಾಗಿ, ಯುಎಸ್ ನೇತೃತ್ವದ ಪಾಶ್ಚಾತ್ಯ ಸಾಮ್ರಾಜ್ಯಶಾಹಿಯ ಪ್ರಾಬಲ್ಯವನ್ನು ಮತ್ತು ಡಾಲರ್ ಕರೆನ್ಸಿಯ ಮೂಲಕ ಅದರ ಪಾರಮ್ಯವನ್ನು ಎತ್ತಿಹಿಡಿಯಬಯಸಿದ ನವ-ಉದಾರವಾದಿ ವ್ಯವಸ್ಥೆಯು ಬಹುಪಕ್ಷೀಯ ವ್ಯವಸ್ಥೆಯನ್ನು ಹೇರುವ ಮೂಲಕ ಅದನ್ನು ಸಾಧಿಸಿತು.

ರಷ್ಯಾದ ಮೇಲೆ ಹೇರಿದ ನಿರ್ಬಂಧಗಳು ತಾವೇ ಹೊಡೆದುಕೊಂಡ ಗೋಲಾಗಿ (own goal) ಪಾಶ್ಚಾತ್ಯ ದೇಶಗಳಿಗೆ ಪರಿಣಮಿಸಿದವು. ಏಕೆಂದರೆ, ಈ ನಿರ್ಬಂಧಗಳ ಲೆಕ್ಕಾಚಾರವೇ ತಪ್ಪಾಗಿತ್ತು. ಈ ನಿರ್ಬಂಧಗಳು, ರಷ್ಯಾವನ್ನು ಮಂಡಿಯೂರುವಂತೆ ಎಷ್ಟು ಬೇಗನೇ ಮಾಡುತ್ತವೆ ಎಂದರೆ ಉಕ್ರೇನ್‌ನಲ್ಲಿ ಅದರ ಮಿಲಿಟರಿ ಕಾರ್ಯಾಚರಣೆಯು ಅಷ್ಟೇ ಬೇಗನೆ ಮುಗಿಯುತ್ತದೆ ಎಂದು ಭಾವಿಸಲಾಗಿತ್ತು. ರಷ್ಯಾದಲ್ಲಿ ಆಡಳಿತ ಬದಲಾವಣೆಯ ಬಗ್ಗೆಯೂ ಚರ್ಚೆ ನಡೆಯಿತು. ಆದರೆ ಇವೆಲ್ಲವೂ ಸಂಪೂರ್ಣವಾಗಿ ಅವಾಸ್ತವಿಕವಾಗಿದ್ದವು. ನಿರ್ಬಂಧಗಳು ಸ್ವಭಾವತಃ ಬಹುಪಕ್ಷೀಯತೆಯನ್ನು ಉಲ್ಲಂಘಿಸುತ್ತವೆ. ಬಹುಪಕ್ಷೀಯತೆಯ ಉಲ್ಲಂಘನೆಯನ್ನು, ಈ ಬಹುಪಕ್ಷೀಯ ವ್ಯವಸ್ಥೆಯಿಂದ ಹೊರಹಾಕಲ್ಪಟ್ಟ ಒಂದು ದೇಶದ ನಿರ್ದಿಷ್ಟ ಸಂದರ್ಭಗಳಿಗೆ ಮಾತ್ರ ಸೀಮಿತಗೊಳಿಸಿ, ತಮ್ಮ ಉದ್ದೇಶವನ್ನು ತ್ವರಿತವಾಗಿ ಸಾಧಿಸಿಕೊಳ್ಳಲಾಗುವುದು ಎಂಬುದಾಗಿ ಪಾಶ್ಚಾತ್ಯ ದೇಶಗಳು ಊಹಿಸಿದ್ದವು. ಈ ಊಹೆಯು ತಪ್ಪಾದಾಗ, ಬಹುಪಕ್ಷೀಯತೆಯ ಉಲ್ಲಂಘನೆಯು ಒಂದು ಸಾಂಕ್ರಾಮಿಕವಾಗಿ ಪರಿಣಮಿಸುತ್ತದೆ. ಅದು ಬಹಳವಾಗಿ ವೃದ್ಧಿಸುತ್ತದೆ ಮತ್ತು ಬೇಗನೆ ಹರಡುತ್ತದೆ. ಇಡೀ ವ್ಯವಸ್ಥೆಯನ್ನು ಅಪಾಯಕ್ಕೆ ಸಿಲುಕಿಸುತ್ತದೆ. ವಾಸ್ತವವಾಗಿ ಇದು ಸಂಭವಿಸುತ್ತಿದೆ ಕೂಡ.

ಬರಲಿರುವ ವಿದ್ಯಮಾನಗಳ ಮುನ್ಸೂಚನೆ

ಈ ಮೊದಲು ಹೇಳಿದ ಅಂಶಗಳ ಆಧಾರದ ಮೇಲೆ, ಡಾಲರಿನ ಅವನತಿಯು ಅಂತಿಮ ಹಂತವನ್ನು ತಲುಪಿದೆ ಎಂಬ ತೀರ್ಮಾನಕ್ಕೆ ಬರುವುದು ಪೂರ್ಣವಾಗಿ ಅಕಾಲಿಕವಾಗುತ್ತದೆ. ವ್ಯಕ್ತಿಗಳು ಮತ್ತು ಸಂಸ್ಥೆಗಳನ್ನು ಒಳಗೊಂಡ ವಿಶ್ವದ ಹಣವಂತರಿಗೆ, ಡಾಲರ್

ಪುಟ 14 ಕ್ಕೆ





ಪಶ್ಚಿಮ ಬಂಗಾಳದಲ್ಲಿ ಪ್ರತಿಭಟನಾಕಾರರ ಮೇಲೆ ಪೋಲೀಸರ ಕ್ರೂರ ಹಲ್ಲೆ: ಸಿಪಿಐ(ಎಂ) ಮುಖಂಡರನ್ನು ಬಿಡುಗಡೆಗೊಳಿಸಲು ಆಗ್ರಹ

ಪಶ್ಚಿಮ ಬಂಗಾಳದ ಪೂರ್ಬ ಬರ್ಧಮಾನ್ ಜಿಲ್ಲಾ ಕೇಂದ್ರದಲ್ಲಿ ಸೆಪ್ಟಂಬರ್ 2ರಂದು ಶಾಂತಿಯುತ ಪ್ರತಿಭಟನೆಯ ಮೇಲೆ ಪೋಲೀಸರಿಂದ ಕ್ರೂರ ಹಲ್ಲೆ ನಡೆದಿದೆ. ಇದನ್ನು ಸಿಪಿಐ(ಎಂ) ಪಾಲಿಟ್ ಬ್ಯೂರೋ ಖಂಡಿಸಿದೆ. 250ಕ್ಕೂ ಹೆಚ್ಚು ಸಿಪಿಐ(ಎಂ) ಕಾರ್ಯಕರ್ತರು ಮತ್ತು ಮುಖಂಡರು ಗಂಭೀರವಾಗಿ ಗಾಯಗೊಂಡಿದ್ದು, 170ಕ್ಕೂ ಹೆಚ್ಚು ಮಂದಿಯನ್ನು ಬಂಧಿಸಲಾಗಿದೆ. ಇವರಲ್ಲಿ ಸಿಪಿಐ(ಎಂ)ನ ಕೇಂದ್ರ ಸಮಿತಿ ಸದಸ್ಯ ಅಭಾಸ್ ರಾಯ್ ಚೌಧರಿ ಸೇರಿದಂತೆ 41 ಮಂದಿಗೆ ಜಾಮೀನು ನಿರಾಕರಿಸಿ ಅವರನ್ನು ಜೈಲಿಗೆ ಹಾಕಲಾಗಿದೆ.

ಪ್ರತಿ ವರ್ಷ ಆಗಸ್ಟ್ 31 ರಂದು, 1959 ರಲ್ಲಿ ಐತಿಹಾಸಿಕ ಆಹಾರ ಚಳುವಳಿಯಲ್ಲಿ ಕೊಲ್ಲಲ್ಪಟ್ಟ 80 ಕ್ಕೂ ಹೆಚ್ಚು ಜನರ ಬಲಿದಾನದ ಸ್ಮರಣೆಗೆ ಬಂಗಾಳದ ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿ ನಾಗರಿಕ ಅಸಹಕಾರ ಚಳುವಳಿಗಳು ನಡೆಯುತ್ತವೆ. ಈ ವರ್ಷ ಈ ಸಂದರ್ಭದಲ್ಲಿ ಪೂರ್ಬ ಬರ್ಧಮಾನ್‌ನಲ್ಲಿ ಜಿಲ್ಲಾ ಮ್ಯಾಜಿಸ್ಟ್ರೇಟ್ ಅವರನ್ನು ಅವರ ಕಚೇರಿಯಲ್ಲಿ ಭೇಟಿಯಾಗಲು ಮೆರವಣಿಗೆ ನಡೆಸುತ್ತಿದ್ದ ಶಾಂತಿಯುತ ಪ್ರತಿಭಟನಾಕಾರರ ಮೇಲೆ ಶಾಂತಿಯುತವಾಗಿ ಪ್ರತಿಭಟಿಸುತ್ತಿದ್ದ ಜನಗಳ ಮೇಲೆ ಪೊಲೀಸರು ಪ್ರಚೋದನೆ ಇಲ್ಲದೆ, ಮೊದಲು ಜಲಫಿರಂಗಿಗಳನ್ನು ಹರಿಸಿದರು, ನಂತರ ಕ್ರೂರ ಲಾಠಿ ಪ್ರಹಾರ ಮತ್ತು ಅಶ್ರುವಾಯು ಪ್ರಯೋಗ ನಡೆಸಿದರು. ಚಾರ್ಜ್ ಮತ್ತು ಅಶ್ರುವಾಯು ಪ್ರಯೋಗಿಸಿದರು.

ಶಾಂತಿಯುತ ಪ್ರತಿಭಟನಾಕಾರರು ಮತ್ತು ಜನರ ಪ್ರಜಾಪ್ರಭುತ್ವ ಹಕ್ಕುಗಳ ಮೇಲೆ ಇಂತಹ ದಾಳಿ ಒಪ್ಪತಕ್ಕದ್ದಲ್ಲ ಎಂದಿರುವ ಪೊಲಿಟ್‌ಬ್ಯೂರೋ, ಸಿಪಿಐ(ಎಂ) ನಾಯಕರನ್ನು ಬೇಷರತ್ತಾಗಿ ಬಿಡುಗಡೆಗೊಳಿಸಬೇಕು, ಸುಳ್ಳು ಪ್ರಕರಣಗಳನ್ನು ಹಿಂಪಡೆಯಬೇಕು ಮತ್ತು ಈ ಅಪ್ರಚೋದಿತ ಹಲ್ಲೆಗೆ ಕಾರಣರಾದ ಪೊಲೀಸ್ ಸಿಬ್ಬಂದಿ ವಿರುದ್ಧ ಅಗತ್ಯ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದೆ.

ಅಗ್ರಗಣ್ಯ ಕೃಷಿ ಅರ್ಥಶಾಸ್ತ್ರಜ್ಞ ಪ್ರೊ. ಅಭಿಜಿತ್ ಸೇನ್ ನಿಧನ

ಪುಟ 10 ರಿಂದ

ವಿಶ್ವವಿದ್ಯಾಲಯದಲ್ಲಿ ಅರ್ಥಶಾಸ್ತ್ರದ ಬೋಧಕರಾಗಿ ದುಡಿದರು ಮತ್ತು ಯುಪಿಎ ಮತ್ತು ಎನ್‌ಡಿಎ ಸರ್ಕಾರಗಳ ಅಡಿಯಲ್ಲಿ ಹಲವಾರು ಪ್ರಮುಖ ಸರ್ಕಾರಿ ಹುದ್ದೆಗಳನ್ನು ಅಲಂಕರಿಸಿದರು. ಅಲ್ಲದೆ ಅವರು ಯುಎನ್‌ಡಿಪಿ, ಆಹಾರ ಮತ್ತು ಕೃಷಿ ಸಂಸ್ಥೆ, ಕೃಷಿ ಅಭಿವೃದ್ಧಿಗಾಗಿ ಅಂತರರಾಷ್ಟ್ರೀಯ ನಿಧಿ ಮತ್ತು ಏಷ್ಯನ್ ಡೆವಲಪ್‌ಮೆಂಟ್ ಬ್ಯಾಂಕ್‌ನಲ್ಲಿ ವಿವಿಧ ಹುದ್ದೆಗಳಲ್ಲಿ ಸೇವೆ ಸಲ್ಲಿಸಿದ್ದಾರೆ. ಅವರು ಪಶ್ಚಿಮ ಬಂಗಾಳ ಮತ್ತು ತ್ರಿಪುರಾದಲ್ಲಿ ರಾಜ್ಯ ಯೋಜನಾ ಮಂಡಳಿಗಳ ಸದಸ್ಯರಾಗಿಯೂ ಕೊಡುಗೆ ನೀಡಿದ್ದಾರೆ.

2010 ರಲ್ಲಿ ಸಾರ್ವಜನಿಕ ಸೇವೆಗಾಗಿ ಅವರಿಗೆ ಪದ್ಮಭೂಷಣ ಪ್ರಶಸ್ತಿಯನ್ನು ನೀಡಲಾಗಿತ್ತು.

ಅವರು ರೈತರ ಮಿತ್ರ ಅರ್ಥಶಾಸ್ತ್ರಜ್ಞರಾಗಿದ್ದರು, ಅವರ ನಿಧನದಿಂದ ರೈತಾಪಿ ವರ್ಗ ತನ್ನ ಮಿತ್ರನನ್ನು ಕಳೆದುಕೊಂಡಿದೆ ಎಂದು ಅಖಿಲ ಭಾರತ ಕಿಸಾನ್ ಸಭಾ (ಎಐಕೆಎಸ್) ಗೌರವಾರ್ಪಣೆ ಮಾಡಿದೆ. ಅವರು ಎಐಕೆಸ್‌ನೊಂದಿಗೆ ನಿಕಟ ಸಂಬಂಧ ಹೊಂದಿದ್ದರು ಮತ್ತು ಮತ್ತು ಸರ್ಕಾರದಲ್ಲಿ ವಿವಿಧ ಹುದ್ದೆಗಳಲ್ಲಿ ರೈತರ ಹಿತಾಸಕ್ತಿಗಳನ್ನು ಪ್ರತಿನಿಧಿಸಿದ್ದವರು. ಹಲವು ಬಾರಿ ಅವರು ಸರಕಾರದ ನಿಲುವುಗಳ ವಿರುದ್ಧ ಭಿನ್ನಮತವನ್ನೂ ವ್ಯಕ್ತಪಡಿಸಿದ್ದರು. ಯೋಜನಾ ಆಯೋಗದಲ್ಲಿ ಅವರು ಸಾರ್ವತ್ರಿಕ ಸಾರ್ವಜನಿಕ ವಿತರಣಾ ವ್ಯವಸ್ಥೆ, ಕೃಷಿಯ ಮೇಲಿನ ಸಾರ್ವಜನಿಕ ವೆಚ್ಚದಲ್ಲಿ ಏರಿಕೆ ಮತ್ತು ಕೃಷಿಯನ್ನು ಪ್ರತಿಫಲದಾಯಕಗೊಳಿಸಬೇಕೆಂದು ಸತತವಾಗಿ ಪ್ರತಿಪಾದಿಸಿಕೊಂಡು ಬಂದವರು. ಆಹಾರ ಧಾನ್ಯ ನೀತಿ, ಗ್ರಾಮೀಣ ಸಾಲ, ರಸಗೊಬ್ಬರ ನೀತಿ, ಕೃಷಿ ಮಾರುಕಟ್ಟೆ ಇತ್ಯಾದಿಗಳನ್ನು ಕುರಿತ ಪ್ರಮುಖ ಸಂಸ್ಥೆ-ಸಮಿತಿಗಳ ಮುಖ್ಯಸ್ಥರಾಗಿದ್ದ ಪ್ರೊ.ಅಭಿಜಿತ್ ಸೇನ್ 14 ನೇ ಹಣಕಾಸು ಆಯೋಗದ ಸದಸ್ಯರೂ ಆಗಿದ್ದರು. ಪ್ರೊ.ಸೇನ್ ನೇತೃತ್ವದ ದೀರ್ಘಾವಧಿಯ ಧಾನ್ಯ ನೀತಿ ಕುರಿತ ತಜ್ಞರ ಉನ್ನತ ಮಟ್ಟದ ಸಮಿತಿಯು ಅಕ್ಕಿ ಮತ್ತು ಗೋಧಿಗೆ ಸಾರ್ವತ್ರಿಕ ಸಾರ್ವಜನಿಕ ವಿತರಣಾ ವ್ಯವಸ್ಥೆ ಇರಬೇಕು ಮತ್ತು ಸಿ.ಎ.ಸಿ.ಪಿ.ಯನ್ನು ಶಾಸನಬದ್ಧ ಸಂಸ್ಥೆಯನ್ನಾಗಿ ಮಾಡಲು ಶಿಫಾರಸು ಮಾಡಿದೆ. ಈ ಮೂಲಕ ಸಿಎಸಿಪಿಯ ಶಿಫಾರಸುಗಳ ಜಾರಿಗೆ ಸರಕಾರ ಬದ್ಧವಾಗುವಂತೆ ಮಾಡಬೇಕೆಂದು ಅವರು ಹೇಳಿದ್ದರು.

ನವ ಉದಾರವಾದಿ ಆರ್ಥಿಕ ನೀತಿಗಳ ಅನುಷ್ಠಾನದ ನಂತರ ಬಡತನ, ಉದ್ಯೋಗ ಮತ್ತು ಅಸಮಾನತೆಯ ಕುರಿತಾದ ಅವರ ಮೂಲ ಶೋಧನೆ ಮತ್ತು ವಿವಿಧ ಬರಹಗಳು ಭಾರತೀಯ ಆರ್ಥಿಕತೆಯನ್ನು ಅರ್ಥಮಾಡಿಕೊಳ್ಳಲು ಪ್ರಮುಖ ಕೊಡುಗೆಗಳಾಗಿವೆ. ಅನೇಕ ಸಂದರ್ಭಗಳಲ್ಲಿ ಅವರು ಎಐಕೆಎಸ್ ನ ಚರ್ಚೆಗಳಿಗೆ ಕೊಡುಗೆ ನೀಡಿದ್ದಾರೆ ಮತ್ತು ವಿವಿಧ ವಿಷಯಗಳ ಬಗ್ಗೆ ಎಐಕೆಎಸ್ ನಿಲುವನ್ನು ರೂಪಿಸುವಲ್ಲಿ ಹಾಗೂ ನವ ಉದಾರವಾದಿ ಆರ್ಥಿಕ ನೀತಿಗಳಿಗೆ ರೈತ ಸಂಘಟನೆಯ ಪರ್ಯಾಯಗಳನ್ನು ರೂಪಿಸುವಲ್ಲಿ ಸಹಾಯ ಮಾಡಿದ್ದಾರೆ ಎಂದು ಎಐಕೆಎಸ್ ನೆನಪಿಸಿಕೊಂಡಿದೆ.

ಅವರು "ಆಹಾರದ ಹಕ್ಕು ಅಭಿಯಾನ ಸೇರಿದಂತೆ ಹಲವು ಚಳುವಳಿಗಳು ಮತ್ತು ಅಭಿಯಾನಗಳಿಗೆ ಸ್ನೇಹಿತರಾಗಿದ್ದರು" ಎಂದು ಆಹಾರ ಹಕ್ಕುಗಳ ಕಾರ್ಯಕರ್ತ ಬಿರಾಜ್ ಪಟ್ನಾಯಕ್ ಟ್ವೀಟ್ ಮಾಡಿದ್ದಾರೆ.

ಸರಕಾರದ ಬೊಕ್ಕಸದ ಮೇಲೆ ಆಹಾರ ಸಬ್ಸಿಡಿಯ ಹೊರೆ ಹೆಚ್ಚಿದೆ ಎಂಬುದು ಉತ್ಪ್ರೇಕ್ಷಿತ ಮಾತು ಮತ್ತು ಸಾರ್ವತ್ರಿಕ ಪಡಿತರ ವ್ಯವಸ್ಥೆಗೆ ಮಾತ್ರವಲ್ಲದೆ ರೈತರ ಉತ್ಪನ್ನಗಳಿಗೆ ನ್ಯಾಯಯುತ ಬೆಲೆಯನ್ನು ಖಾತರಿಪಡಿಸಲು ದೇಶವು ಸಾಕಷ್ಟು ಹಣಕಾಸಿನ ಅವಕಾಶವನ್ನು ಹೊಂದಿದೆ ಎಂದು ಅವರು ವಾದಿಸುತ್ತಿದ್ದರು.

2000 ದಲ್ಲಿ, ಪ್ರೊಫೆಸರ್ ಸೇನ್ ಬೇಸಾಯದ ವೆಚ್ಚಗಳನ್ನು ಲೆಕ್ಕ ಹಾಕಲು ಸಿ2 ಎಂದು ಹೇಳಲಾಗುತ್ತಿರುವ ವಿಧಾನವನ್ನು ಬಳಸಿದರು. ಇದು ರೈತರು ಮಾಡುವ ನಗದು ವೆಚ್ಚಗಳನ್ನು ಮಾತ್ರವಲ್ಲದೆ ಕುಟುಂಬ-ಶ್ರಮ, ಅವರು ಬಿಟ್ಟು ಕೊಡುವ ಬಾಡಿಗೆ ಮತ್ತು ಬಡ್ಡಿಯ ವೆಚ್ಚಗಳನ್ನು ಗಣನೆಗೆ ತೆಗೆದುಕೊಳ್ಳುತ್ತದೆ. ಇದರ ಮಾರ್ಪಡಿಸಿದ ಆವೃತ್ತಿಯನ್ನು ನಂತರ 2006 ರ 'ಸ್ವಾಮಿನಾಥನ್ ವರದಿ'ಯಲ್ಲಿ ಪ್ರಸ್ತಾಪಿಸಲಾಯಿತು, ಇದು ಈಗ ರೈತರ ಕೇಂದ್ರ ಬೇಡಿಕೆಯಾಗಿ ಬಿಟ್ಟಿದೆ.

ಮೋದಿ ಸರ್ಕಾರವು ಯೋಜನಾ ಆಯೋಗವನ್ನು ಕೊನೆಗೊಳಿಸಿ ನೀತಿ ಆಯೋಗ ಎಂಬುದನ್ನು ರಚಿಸಿದಾಗ ಪ್ರೊ. ಅಭಿಜಿತ್ ಸೇನ್ ಅವರ ಸಲಹಾ ಪಾತ್ರವು ಕೊನೆಗೊಂಡಿತು.



ಎಂ.ವಿ. ಗೋವಿಂದನ್-ಕೇರಳ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ

ಆಗಸ್ಟ್ 28 ರಂದು ನಡೆದ ಸಿಪಿಐ(ಎಂ) ಕೇರಳ ರಾಜ್ಯ ಸಮಿತಿಯ ಸಭೆ ಕಾಮ್ರೇಡ್ ಎಂ.ವಿ. ಗೋವಿಂದನ್ ಅವರನ್ನು ರಾಜ್ಯ ಕಾರ್ಯದರ್ಶಿಯನ್ನಾಗಿ ಸರ್ವಾನುಮತದಿಂದ ಆಯ್ಕೆ ಮಾಡಿದೆ.. ರಾಜ್ಯ ಕಾರ್ಯದರ್ಶಿಯಾಗಿದ್ದ ಕೋಡಿಯೇರಿ ಬಾಲಕೃಷ್ಣನ್ ತೀವ್ರ ಅನಾರೋಗ್ಯದಿಂದ ರಾಜ್ಯ ಕಾರ್ಯದರ್ಶಿ ಹುದ್ದೆಯನ್ನು ನಿರ್ವಹಿಸಲು ಸಾಧ್ಯವಾಗುತ್ತಿಲ್ಲವಾದ್ದರಿಂದ ಈ ನಿರ್ಣಯವನ್ನು ಕೈಗೊಳ್ಳಲಾಗಿದೆ ಎಂದು ರಾಜ್ಯ ಸಮಿತಿ ಹೇಳಿಕೆ ತಿಳಿಸಿದೆ. ಇ.ಪಿ. ಜಯರಾಜನ್ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಪಕ್ಷದ ಪ್ರಧಾನ ಕಾರ್ಯದರ್ಶಿ ಸೀತಾರಾಂ ಯೆಚೂರಿ, ಪೊಲಿಟ್‌ಬ್ಯೂರೋ ಸದಸ್ಯರಾದ ಪ್ರಕಾಶ್ ಕಾರಟ್, ಪಿಣರಾಯಿ ವಿಜಯನ್, ಎಂ.ಎ.ಬೇಬಿ ಮತ್ತು ಎ.ವಿಜಯರಾಘವನ್ ಭಾಗವಹಿಸಿದ್ದರು.

ಎಂ.ವಿ. ಗೋವಿಂದನ್, ಪ್ರಸ್ತುತ ಸಿಪಿಐ(ಎಂ) ಕೇಂದ್ರ ಸಮಿತಿ ಸದಸ್ಯರಾಗಿದ್ದಾರೆ ಮತ್ತು ಎಲ್‌ಡಿಎಫ್ ಸಂಪುಟದಲ್ಲಿ ಸ್ಥಳೀಯ ಸ್ವಯಮಾಡಳಿತ ಸಚಿವರಾಗಿದ್ದಾರೆ. ಇವರು ಸಾಮ್ರಾಜ್ಯಶಾಹಿಯ ವಿರುದ್ಧ ರೈತರ ಬಂಡಾಯಗಳನ್ನು ಕಂಡ ಹೋರಾಟದ ನೆಲ ಮೊರಾಳಾದಿಂದ ಬಂದವರು, ಐದು ದಶಕಗಳ ರಾಜಕೀಯ ಚಟುವಟಿಕೆಗಳ ಅನುಭವವಿರುವವರು. ಬಾಲಸಂಘಂ ಮತ್ತು ಗ್ರಂಥಾಲಯ ಆಂದೋಲನದ ಕಾರ್ಯಕರ್ತನಾಗಿ ಎಳೆವಯಸ್ಸಿನಲ್ಲೇ ತನ್ನ ರಾಜಕೀಯ ಜೀವನವನ್ನು ಆರಂಭಿಸಿದ ಇವರು ಯುವಜನ ಫೆಡರೇಷನ್ನಿನ ಕಣ್ಣೂರು ಜಿಲ್ಲಾ ಕಾರ್ಯದರ್ಶಿ ಮತ್ತು ಕೇರಳ ವಿದ್ಯಾರ್ಥಿ ಫೆಡರೇಷನ್ನಿನ ಮುಖಂಡರಾಗಿದ್ದರು., ಇವರು ಡಿವೈಎಫ್‌ಐನ ಸ್ಥಾಪಕ ಮುಖಂಡರಲ್ಲಿ ಒಬ್ಬರು.

1969ರಲ್ಲಿ ಸಿಪಿಐ(ಎಂ) ಸದಸ್ಯರಾದ ಇವರು 1980ರ ದಶಕದಲ್ಲಿ ಪಕ್ಷದ ಕಾಸರಗೋಡು ತಾಲೂಕು ಕಾರ್ಯದರ್ಶಿಯಾಗಿಯೂ ಮತ್ತು 2002ರಲ್ಲಿ ಕಣ್ಣೂರು ಜಿಲ್ಲಾ ಕಾರ್ಯದರ್ಶಿಯಾಗಿಯೂ ಸೇವೆ ಸಲ್ಲಿಸಿದ್ದಾರೆ. 2918ರಲ್ಲಿ ಪಕ್ಷದ ಕೇಂದ್ರ ಸಮಿತಿಯ ಸದಸ್ಯರಾಗಿ ಆಯ್ಕೆಯಾದ ಇವರು ಅಖಿಲ ಭಾರತ ಕೃಷಿ ಕೂಲಿಕಾರರ ಸಂಘದ ರಾಷ್ಟ್ರೀಯ ಉಪಾಧ್ಯಕ್ಷರೂ ಆಗಿದ್ದಾರೆ.

ತುರ್ತು ಪರಿಸ್ಥಿತಿ ಕಾಲದಲ್ಲಿ ಕ್ರೂರ ದಾಳಿಯನ್ನು ಎದುರಿಸಿ ನಾಲ್ಕು ತಿಂಗಳ ಜೈಲುವಾಸ ಅನುಭವಿಸಿದ ಇವರು ಕಳೆದ ವರ್ಷ ತಲಿಪರಂಬಾದಿಂದ ಅಗಾಧ ಬಹುಮತದಿಂದ ರಾಜ್ಯ ವಿಧಾನಸಭೆಗೆ ಆಯ್ಕೆಯಾಗಿದ್ದರು. ಇದಕ್ಕೆ ಮೊದಲೂ 10 ವರ್ಷಗಳ ಕಾಲ ಶಾಸಕರಾಗಿದ್ದರು.

ಆರ್ಥಿಕ ನಿರ್ಬಂಧಗಳಿಂದ ಡಾಲರ್ ಪಾರಮ್ಯಕ್ಕೇ ಕುತ್ತು

ಇಂದಿಗೂ ಖಂಡಿತವಾಗಿಯೂ ಅತ್ಯಂತ ಆಕರ್ಷಕ ಕರೆನ್ಸಿಯಾಗಿಯೇ ಉಳಿದಿದೆ. ವಾಸ್ತವವಾಗಿ, ಪ್ರಸ್ತುತ ಹಣದುಬ್ಬರದ ನಿಯಂತ್ರಣಕ್ಕಾಗಿ ಏರಿಸಲಾದ ಅಮೆರಿಕದ ಬಡ್ಡಿ ದರಗಳಿಂದಾಗಿ, ಬಡ್ಡಿದರಗಳು ಸೊನ್ನೆಗೆ ಹತ್ತಿರದ ಮಟ್ಟದಲ್ಲಿದ್ದಾಗ ಅಮೆರಿಕದಿಂದ ಮೂರನೇ ಜಗತ್ತಿಗೆ ಹರಿದ ಹಣಕಾಸು ಮತ್ತೆ ಅಲ್ಲಿಗೇ ಹಿಂತಿರುಗುತ್ತಿದೆ. ಈ ವಿದ್ಯಮಾನದ ಪರಿಣಾಮವಾಗಿ ಭಾರತದ ರೂಪಾಯಿಯೂ ಸೇರಿದಂತೆ ಮೂರನೇ ಜಗತ್ತಿನ ದೇಶಗಳ ಕರೆನ್ಸಿಗಳು ಡಾಲರ್ ಎದುರು ಅಪಮೌಲ್ಯಕ್ಕೊಳಗಾದವು. ಡಾಲರನ್ನು ಆಕರ್ಷಣೆಗೊಳಿಸಿದ ಬಡ್ಡಿ ದರ ಏರಿಕೆಯ ಕಾರಣದಿಂದಲೇ ಹಣಕಾಸು ಹಿಂತಿರುಗುತ್ತಿಲ್ಲ. ಅಮೆರಿಕದ ಬಡ್ಡಿ ದರ ಏರಿಕೆಗೆ ಪ್ರತಿಕ್ರಿಯೆಯಾಗಿ ಮೂರನೇ ಜಗತ್ತಿನ ದೇಶಗಳೂ ಸಹ ತಮ್ಮ ಬಡ್ಡಿ ದರಗಳನ್ನು ಏರಿಸುತ್ತಿವೆ. ಆದರೂ ಹಣಕಾಸು ಹಿಂತಿರುಗುವುದನ್ನು ತಡೆಯಲಾಗಲಿಲ್ಲ. ಏಕೆಂದರೆ, ನಾವು ಪ್ರವೇಶಿಸುತ್ತಿರುವ ಈ ಅನಿಶ್ಚಿತ ಜಗತ್ತಿನಲ್ಲಿ, ಹಣಕಾಸು ತನ್ನ ತವರು ಮನೆಯಾದ ಅಮೆರಿಕದಲ್ಲೇ ಹೆಚ್ಚು ನಿರಾಳವಾಗಿರುತ್ತದೆ. ಈ ನಿರ್ದಿಷ್ಟ ಪರಿಸ್ಥಿತಿಯಲ್ಲಿ, ಡಾಲರ್ ಆಧಿಪತ್ಯದ ಮರಣ ಪತ್ರವನ್ನು ಈಗಲೇ ಬರೆಯುವುದು ಅಕಾಲಿಕವೂ ಹೌದು ಮತ್ತು ತಿಳಿಗೇಡಿತನವೂ ಹೌದು.

ವಿಷಯವನ್ನು ಬೇರೆ ರೀತಿಯಲ್ಲಿ ಹೇಳುವುದಾದರೆ, ಡಾಲರಿನ ಪರಿಸ್ಥಿತಿಯ ಬಗ್ಗೆ ಸಮಕಾಲೀನ ಜಾಗತಿಕ ಅರ್ಥವ್ಯವಸ್ಥೆಯಲ್ಲಿ ಎರಡು ಸ್ಪಷ್ಟ ಪ್ರವೃತ್ತಿಗಳನ್ನು ಕಾಣಬಹುದು: ಒಂದು, ಹಣದುಬ್ಬರವನ್ನು ನಿಯಂತ್ರಿಸಲು ತನ್ನ ಬಡ್ಡಿ ದರಗಳನ್ನು ಏರಿಸುತ್ತಿರುವುದರಿಂದ ಮೂರನೇ ಜಗತ್ತಿನ ದೇಶಗಳಿಂದ ಅಮೆರಿಕಾಗೆ ಹಣಕಾಸಿನ ಪಲಾಯನ. ಎರಡನೆಯದು, ಇತರ ಕರೆನ್ಸಿಗಳನ್ನು (ಎಲ್ಲಕ್ಕಿಂತ ಹೆಚ್ಚಾಗಿ ತಕ್ಷಣದ ಸನ್ನಿವೇಶದಲ್ಲಿ ರೂಬಲನ್ನು) ಒಳಗೊಂಡಿರುವ ಮೀಸಲು ಸಂಗ್ರಹಗಳಿಂದ ಡಾಲರ್ ಕರೆನ್ಸಿಯನ್ನು ಹೊರಗಿಡುವ ಮೂಲಕ ದ್ವಿಪಕ್ಷೀಯ ವ್ಯವಸ್ಥೆಗಳ ಕ್ರಮೇಣ ಹರಡುವಿಕೆ ಮತ್ತು ತನ್ಮೂಲಕ ಡಾಲರ್‌ನ ಸ್ಥಾನವನ್ನು ಸ್ವಲ್ಪ ಮಟ್ಟಿಗೆ ದುರ್ಬಲಗೊಳಿಸಿರುವುದು. ಡಾಲರ್ ಮೌಲ್ಯಕ್ಕೆ ಸಂಬಂಧಿಸಿದಂತೆ ಈ ಎರಡೂ ಪ್ರವೃತ್ತಿಗಳು ವಿರುದ್ಧ ದಿಕ್ಕಿನಲ್ಲಿ ಕಾರ್ಯನಿರ್ವಹಿಸುತ್ತವೆ. ಮೊದಲನೆಯದಕ್ಕೆ (ಹಣಕಾಸಿನ ಪಲಾಯನ) ಹೋಲಿಸಿದರೆ ಎರಡನೆಯ ಪ್ರವೃತ್ತಿಯು(ಡಾಲರ್ ಅವನತಿ) ಹೊಂದಿರುವ ಪ್ರಾಮುಖ್ಯತೆಯು ಇನ್ನೂ ಕಡಿಮೆಯೇ. ಆದರೂ ಅದು ಬರಲಿರುವ ವಿದ್ಯಮಾನಗಳ ಮುನ್ಸೂಚನೆಯೇ. ಅದೇನೇ ಇರಲಿ, ಬಹುಪಕ್ಷೀಯತೆಯನ್ನು ಸಂಭ್ರಮಿಸಿದ ಮತ್ತು ಅದನ್ನು ಜಗತ್ತಿನಾದ್ಯಂತ ಹೇರಿದ ನವ-ಉದಾರವಾದಿ ವ್ಯವಸ್ಥೆಯು ಕೊನೆಗೊಳ್ಳಲಿದೆ ಎಂಬುದಂತೂ ಖರೇ.

ನಿನ್ನ ಮರೆಯಲಿ ಹ್ಯಾಂಗ.. ...ಗೋರ್ಬಚೇವ?!

ಪುಟ 16 ರಿಂದ

ದೇಶಗಳಲ್ಲಿ ಈ ನಾಯಕರ ಆಡಳಿತದಲ್ಲಿ ಈ ದೇಶಗಳು ಪೂರ್ಣವಾಗಿ ದುರ್ಬಲಗೊಂಡವು. ಸೋವಿಯೆಟ್ ಒಕ್ಕೂಟದ ದೇಶಗಳಲ್ಲಿ 70 ವರ್ಷಗಳಲ್ಲಿ ಮತ್ತು ಪೂರ್ವ ಯುರೋಪಿನ ದೇಶಗಳಲ್ಲಿ 45 ವರ್ಷಗಳಲ್ಲಿ ಮಾಡಿದ ಸಾಧನೆಗಳೆಲ್ಲ ಮಣ್ಣುಪಾಲಾದವು. ಎಲ್ಲೆಡೆ ಪೆರೆಸ್ತ್ರೊಯಿಕ ಹೆಸರಲ್ಲಿ ಬಂಡವಾಳಶಾಹಿ ವ್ಯವಸ್ಥೆಯನ್ನು ಮರುಸ್ಥಾಪಿಸಲಾಯಿತು ಮತ್ತು ಇದು ದೇಶಗಳನ್ನು ದುರ್ಬಲಗೊಳಿಸಿದವು ಮತ್ತು ಜನರ ಬದುಕನ್ನು ದುರ್ಭರಗೊಳಿಸಿದವು. 15 ಮಾಜಿ ಸೋವಿಯೆಟ್ ದೇಶಗಳಲ್ಲಿ 1991ರ ಉತ್ಪಾದನೆಯ ಮಟ್ಟ ಮುಟ್ಟಲು 2 ದೇಶಗಳಿಗೆ 10 ವರ್ಷಗಳು, 4 ದೇಶಗಳಿಗೆ 15 ವರ್ಷಗಳು, ಉಳಿದ 5 ದೇಶಗಳಿಗೆ ಇನ್ನೂ ಹೆಚ್ಚು ಕಾಲ ಬೇಕಾದವು. ಪೆರೆಸ್ತ್ರೊಯಿಕ ಅಥವಾ ಬಂಡವಾಳಶಾಹಿ ವ್ಯವಸ್ಥೆ ಸೋವಿಯೆಟ್ ಒಕ್ಕೂಟದ ದೇಶಗಳಿಗೆ ಭಾರಿ ಸಮೃದ್ಧಿ ತರುವುದೆಂಬ ಭರವಸೆ ಪೊಳ್ಳಾಯಿತು.

ಇದಕ್ಕೆ ನಿನ್ನ ಉತ್ತರವೇನು? ಯಾಕೆ ಹೀಗಾಯಿತು?

ಒಂದು ವ್ಯವಸ್ಥೆ, ದೇಶ ಮತ್ತು ಪಕ್ಷವನ್ನು ಒಬ್ಬ ವ್ಯಕ್ತಿ ಮಾತ್ರ ಕಟ್ಟುವುದೂ ಸಾಧ್ಯವಿಲ್ಲ, ಕೆಡವುದು ಸಾಧ್ಯವಿಲ್ಲ ಎಂದು ನನಗೂ ಗೊತ್ತು. ಇವುಗಳ ಕಟ್ಟುವಿಕೆ, ಕೆಡವುವಿಕೆ ಸಂಕೀರ್ಣ ಪ್ರಕ್ರಿಯೆಗಳು. ಇದರಲ್ಲಿ ಹಲವು ಚಾರಿತ್ರಿಕ ಅಂಶಗಳು, ಶಕ್ತಿಗಳ ಪ್ರಭಾವ ಇರುತ್ತವೆ. ಅವುಗಳ ಆಂತರಿಕ ದೌರ್ಬಲ್ಯಗಳು ದೊಡ್ಡ ಪಾತ್ರ ವಹಿಸುತ್ತವೆ ಎಂಬುದು ನಿಜ. ಆದರೆ ಒಂದು ವ್ಯವಸ್ಥೆ, ದೇಶ ಮತ್ತು ಪಕ್ಷವನ್ನು ಸುಧಾರಿಸುವ ಪುನರ್ವೀಕರಿಸುವ ಭರವಸೆ ಮೂಡಿಸಿದ್ದ ಆಶ್ವಾಸನೆ ಕೊಟ್ಟಿದ್ದ ಮೇರು ನಾಯಕನಿಗೆ ಯಾವ ಜವಾಬ್ದಾರಿಯಿಲ್ಲವೇ? ಮಾತ್ರವಲ್ಲ ಸೋವಿಯೆಟ್ ಒಕ್ಕೂಟವನ್ನು ಮತ್ತು ಕಮ್ಯುನಿಸ್ಟ್ ಪಕ್ಷವನ್ನು ವಿಸರ್ಜನೆ ಮಾಡಲು ನಿನಗೆ ಅಧಿಕಾರ ಕೊಟ್ಟವರು ಯಾರು? ಅದನ್ನು ಮಾಡಲು ಕಾರಣವಾದರೂ ಏನು? ದೇಶದಲ್ಲೂ ಪಕ್ಷದಲ್ಲೂ ಆಂತರಿಕ ಪ್ರಜಾಪ್ರಭುತ್ವದ ಬಗ್ಗೆ ಮಾತನಾಡುವ ನಿನಗೆ ಒಂದೊಮ್ಮೆ ಅದನ್ನು ಮಾಡಬೇಕೆಂದಿದ್ದರೆ ನೀನು ಜನಮತಸಂಗ್ರಹ ಮಾಡಬೇಕಿತ್ತಲ್ಲ, ಪಕ್ಷದ ಮಹಾಧಿವೇಶನ ಕರೆಯಬೇಕಿತ್ತಲ್ಲ. ನಿನಗೆ ನಿರ್ವಹಣೆ ಮಾಡುವುದು ಸಾಧ್ಯವಿಲ್ಲದಿದ್ದರೆ ರಾಜೀನಾಮೆ ಕೊಡಬಹುದಿತ್ತಲ್ಲ.

ಇದಕ್ಕೆ ನಿನ್ನ ಬಳಿ ಉತ್ತರವಿಲ್ಲ ಅಂತ ನನಗೆ ಗೊತ್ತು. ನನ್ನ ಉತ್ತರ ಕೇಳು.

ನಿನ್ನ ಗ್ಲಾಸ್‌ನೋಸ್ತ್ ಮತ್ತು ಪೆರೆಸ್ತ್ರೊಯಿಕ ಈ ದುರಂತಕಾರಿ ಅಂತ್ಯ ಕಂಡದ್ದು ಹೇಗೆ? ಉತ್ತಮ ಆರಂಭಿಕ ಪ್ರಗತಿಯ ನಂತರ ಪೆರೆಸ್ತ್ರೊಯಿಕ ಮತ್ತು ಗ್ಲಾಸ್‌ನೋಸ್ತ್ ಕ್ರಮೇಣ ಹಲವು ಭಾಷ್ಯಗಳಿಗೆ-ಅರ್ಥಗಳಿಗೆ ಒಳಗಾಗುತ್ತಾ ಹೋಯಿತು. ಪಕ್ಷ, ಸರ್ಕಾರ ಮತ್ತು ಸೋವಿಯೆತ್ ಸಮಾಜದಲ್ಲೂ ಈ ಹಲವು ಭಾಷ್ಯಗಳಿಗೆ-ಅರ್ಥಗಳಿಗೆ ಅಂಟಿಕೊಂಡ ಹಲವು ಬಣಗಳು ಹುಟ್ಟಿಕೊಂಡವು. ಮುಂದಿನ ಹಾದಿಯ ಬಗ್ಗೆ ಚರ್ಚೆ-ವಿವಾದ ಆರಂಭವಾಯಿತು. ಇಂತಹ ಚರ್ಚೆ ವಿವಾದ ಸೋವಿಯೆತ್ ಸಮಾಜದಲ್ಲಿ ಹೊಸತೇನಲ್ಲ. ಇಂತಹ ಸಂದರ್ಭಗಳಲ್ಲಿ ಸೋವಿಯೆತ್ ಕಮ್ಯುನಿಸ್ಟ್ ಪಕ್ಷ ಮತ್ತು ಸರ್ಕಾರದ ಹಿರಿಯ ನಾಯಕತ್ವ, ಈ ಚರ್ಚೆ ವಿವಾದಗಳನ್ನೆಲ್ಲಾ ಕ್ರೋಢೀಕರಿಸಿ, ಸಂಯೋಜಿಸಿ ಸಾಧ್ಯವಾದಷ್ಟು ಸರ್ವಸಮ್ಮತ ಹಾದಿ ಆಯ್ಕೆ ಮಾಡುವುದರಲ್ಲಿ ನಿರ್ಣಾಯಕ ಪಾತ್ರ ವಹಿಸುತ್ತಿತ್ತು. ಈ ಪಾತ್ರ ವಹಿಸುವುದರಲ್ಲಿ ನೀನು ಮತ್ತು ನಿನ್ನ ನಿಕಟ ಸಹಚರರು ಪೂರ್ಣವಾಗಿ ವಿಫಲವಾದಿರಿ.

ಗ್ಲಾಸ್‌ನೋಸ್ತ್ ಮತ್ತು ಪೆರೆಸ್ತ್ರೊಯಿಕಾದ ಹಲವು ಭಾಷ್ಯಗಳು ಅರ್ಥಗಳು ಒದಗಿಸಿದ ಅವಕಾಶಗಳ ದುರುಪಯೋಗ ಮಾಡಿ ಹಲವು ನಕಾರಾತ್ಮಕ ಪ್ರವೃತ್ತಿಗಳು ಮೂಡಿ ಬರಲಾರಂಭಿಸಿದವು. ಸಮಾಜವಾದದ ಸಮಸ್ಯೆಗಳಿಗೆ ಪರಿಹಾರ ಎಂದು ಒಂದೊಂದಾಗಿ ಬಂಡವಾಳಶಾಹಿ ಪಥ್ಯಗಳನ್ನು ಸ್ವೀಕರಿಸಲಾಯಿತು.



ಅಮೇರಿಕನ್ ಆರ್ಥಿಕ ತಜ್ಞರ (ವಿಶ್ವಬ್ಯಾಂಕ್-ಐ.ಎಂ.ಎಫ್ ಸೇರಿದಂತೆ) ಅತಿಯಾದ ಪ್ರಭಾವದಲ್ಲಿದ್ದ ನಿನ್ನ ಹಲವು ನಿಕಟ ಸಲಹಾಗಾರರು ಆರ್ಥಿಕ ನೀತಿ ರೂಪಿಸುವ ಜವಾಬ್ದಾರಿಯನ್ನು ಪೂರ್ಣವಾಗಿ 'ಹೈಜಾಕ್' ಮಾಡಿದರು. ಸೋವಿಯೆಟ್ ಸಮಾಜದಲ್ಲಿ ರಾಜಕೀಯ, ಆರ್ಥಿಕ ಸಾಮಾಜಿಕ ಸುಧಾರಣೆ ತರುವ ದಾರಿ, ಹಂತಗಳ, ಆದ್ಯತೆಗಳ (ಅಥವಾ ಅದನ್ನು ಮುಟ್ಟಲು ಸ್ಪಷ್ಟ ವ್ಯೂಹ, ತಂತ್ರ) ಬಗ್ಗೆ ನಿನಗೆ ಸ್ಪಷ್ಟ ಕಲ್ಪನೆ ಇರಲಿಲ್ಲ.

ಈ ಎಲ್ಲ ಅವಾಂತರಗಳಿಗೆ ಒಬ್ಬ ವ್ಯಕ್ತಿಯನ್ನು ಜವಾಬ್ದಾರರಾಗಿಸುವುದು ತಪ್ಪು ಎಂದು ನನಗೆ ಗೊತ್ತು. ಸೋವಿಯೆಟ್ ಒಕ್ಕೂಟದಲ್ಲಿನ ಪರಿಸ್ಥಿತಿಯಲ್ಲಿ ಸಾಕಷ್ಟು ಸವಾಲುಗಳು ಇದ್ದವು. ಸಾಕಷ್ಟು ವಿಚ್ಛಿದ್ರಕಾರಿ, ವಿಘಟನಾ, ಸಮಾಜವಾದ-ವಿರೋಧಿ, ವಿಸರ್ಜನಾವಾದಿ ಶಕ್ತಿಗಳು ಇದ್ದವು. ಆದರೆ ಇವೆಲ್ಲವನ್ನು ಒಂದೆಡೆಗೆ ತಂದು ಈ ವಿನಾಶಕಾರಿ ಕೆಲಸಕ್ಕೆ ಹಚ್ಚಲಿಕ್ಕೆ ನಿನ್ನ 'ರಾಜಕೀಯ ಜಾಣತನ'ವಿಲ್ಲದೆ ಸಾಧ್ಯವಾಗುತ್ತಿರಲಿಲ್ಲವೇನೋ?

ಕಾಮ್ರೇಡ್ ಗೋರ್ಬಚೇವ್!

ಜಗತ್ತಿನ ಮೊದಲ ಸಮಾಜವಾದಿ ಪ್ರಭುತ್ವ ಸ್ಥಾಪಿಸಿದ ಮತ್ತು ಅತ್ಯಂತ ಪ್ರಬಲ ಕಮ್ಯುನಿಸ್ಟ್ ಪಕ್ಷದ ವಿಸರ್ಜನೆ ಮಾಡಿದವನನ್ನು ಕಾಮ್ರೇಡ್ ಅನ್ನಲು ನನಗೆ ನಾಚಿಕೆಯಾಗುತ್ತದೆ. ಆದರೆ ನೀನು ಆ ಪಕ್ಷದ ಕೊನೆಯ ಪ್ರಧಾನ ಕಾರ್ಯದರ್ಶಿಯಾಗಿದ್ದವನೂ ಹೌದಲ್ಲ!

ಸಮಾಜವಾದಿ ವ್ಯವಸ್ಥೆಯಲ್ಲಿ ಸುಧಾರಣೆ ತರುವುದು ಕಷ್ಟದ ಅಥವಾ ಅಸಾಧ್ಯವಾದ ಕೆಲಸ ಎಂದು ನೀನು ಹೇಳಬಹುದು. ನಿನ್ನ ಪ್ರಮಾದಗಳಿಂದಾಗಿ ಹಲವರು ಇದು ಅಸಾಧ್ಯವಾದ ಕೆಲಸ ಅಂದುಕೊಂಡಿದ್ದಾರೆ. ಆದರೆ ಇದು ನಿಜವಲ್ಲ. ಚೀನಾದ ಕಮ್ಯುನಿಸ್ಟರು ಹೆಚ್ಚು ಕಡಿಮೆ ಅದೇ ಸಮಯದಲ್ಲಿ ಇನ್ನಷ್ಟು ಕಷ್ಟಕರ ಪರಿಸ್ಥಿತಿಯಲ್ಲಿ (ಸೋವಿಯೆಟ್ ಒಕ್ಕೂಟದ ವಿಘಟನೆ ಅದನ್ನು ಇನ್ನಷ್ಟು ಕಷ್ಟಕರವಾಗಿಸಿತ್ತು) ತಮ್ಮ ಸಮಾಜವಾದಿ ವ್ಯವಸ್ಥೆಯಲ್ಲಿ ಸುಧಾರಣೆಗಳನ್ನು ತಂದರು. ಜನರ ಜೀವನವೂ ಹಂತಹಂತವಾಗಿ ಉತ್ತಮಗೊಂಡಿದೆ. ಎರಡನೆಯ ದೊಡ್ಡ ಆರ್ಥಿಕವಾಗಿದ್ದು ಈಗ ಮೊದಲನೆಯ ಆರ್ಥಿಕವಾಗುವತ್ತ ದಾಪುಗಾಲು ಹಾಕುತ್ತಿದೆ. ನಿನ್ನ ನಾಯಕತ್ವ ತಂದ ಸುಧಾರಣೆಗಳ ಚರಿತ್ರೆಯನ್ನು ಚೀನೀ ಕಮ್ಯುನಿಸ್ಟ್ ಪಕ್ಷದ ಸೈದ್ಧಾಂತಿಕ ಶಿಕ್ಷಣ ತರಗತಿಗಳಲ್ಲಿ ಕಲಿಸುತ್ತಾರಂತೆ. 'ಹೇಗೆ ಸುಧಾರಣೆಗಳನ್ನು ತರಬಾರದು, ಜಾಗರೂಕರಾಗಿರದಿದ್ದರೆ ಯಾವ ರೀತಿಯ ಪ್ರಮಾದಗಳು ಆಗಬಹುದು' ಎಂಬುದಕ್ಕೆ ಮಾದರಿಯಾಗಿ ಕಲಿಸುತ್ತಾರಂತೆ! ಮಾರ್ಕ್ಸ್‌ವಾದ-ಲೆನಿನ್‌ವಾದ, ಸಮಾಜವಾದಿ ಗುರಿ, ಸಮಾಜವಾದ ಕಟ್ಟುವಲ್ಲಿ ಕಮ್ಯುನಿಸ್ಟ್ ಪಕ್ಷದ ನಿರ್ದೇಶಕ ಮಾರ್ಗದರ್ಶಕ ಪಾತ್ರದ ಪ್ರಾಧಾನ್ಯಗಳನ್ನು ನಿರ್ಲಕ್ಷ ಮಾಡಿದ್ದು ಸೋವಿಯೆಟ್ ಸುಧಾರಣೆಗಳ ದುರಂತಕಾರಿ ಪರಿಣಾಮಗಳಿಗೆ ಕಾರಣ ಎಂದು ಒಬ್ಬ ವಕ್ತಾರ ಹೇಳಿದ್ದಾರಂತೆ. ಪಾಶ್ಚಿಮಾತ್ಯ ಸಾಮ್ರಾಜ್ಯಶಾಹಿ ಬಗ್ಗೆ ನಿನ್ನ ಬೋಳೆತನವನ್ನೂ ಅವರು ಗುರುತಿಸಿದ್ದಾರೆ.

ಇದಕ್ಕೆ ನೀನು ಏನಂತಿ?

ಇವನ್ಯಾರು ಒಬ್ಬ ಇಂಡಿಯನ್ ನನ್ನನ್ನು ಕೇಳೋಕೆ ಅಂತಿಯಾ?

ಹೌದು. ನನಗೆ ಕೇಳಲು ಹಕ್ಕಿದೆ. ಯಾಕೆಂದರೆ ಸೋವಿಯೆಟ್ ಒಕ್ಕೂಟ ಮತ್ತು ಪೂರ್ವ ಯುರೋಪಿನ ಜಂಟಿ ಸಮಾಜವಾದಿ ವ್ಯವಸ್ಥೆ ಪಾಶ್ಚಿಮಾತ್ಯಸಾಮ್ರಾಜ್ಯಶಾಹಿಯ



ಯಜಮಾನಿಕೆಗೆ ಸೆಡ್ಡು ಹೊಡೆದಿತ್ತು, ತಡೆಯೊಡ್ಡಿತ್ತು. ನನ್ನ ಇಂಡಿಯಾ ಸೇರಿದಂತೆ ಆಗ ತಾನೇ ವಸಾಹತುಶಾಹಿಯಿಂದ ಸ್ವತಂತ್ರವಾಗಿದ್ದ ಮೂರನೆಯ ಜಗತ್ತಿನ ದೇಶಗಳ ಸ್ವತಂತ್ರ ಬೆಳವಣಿಗೆಗೆ ಒತ್ತಾಸೆಯಾಗಿತ್ತು. ಸೋವಿಯೆಟ್ ನಾಯಕತ್ವದ ವಾರ್ಸಾ ಒಪ್ಪಂದದ ಸಮಾನ ಮಿಲಿಟರಿ ಬಲವು, ಪಾಶ್ಚಿಮಾತ್ಯ ಸಾಮ್ರಾಜ್ಯಶಾಹಿಯ ನಾಟೋ ಮಿಲಿಟರಿ ಕೂಟದ ಆಕ್ರಾಮಕತೆಯನ್ನು ಹದ್ದುಬಸ್ತಿನಲ್ಲಿಟ್ಟಿತ್ತು. ಆಮೂಲಕ ಮೂರನೆಯ ಜಗತ್ತಿನ ದೇಶಗಳು ಶಾಂತಿಯಲ್ಲಿ ಬೆಳವಣಿಗೆಯತ್ತ ಗಮನ ಹರಿಸಲು ಅವಕಾಶ ಮಾಡಿಕೊಟ್ಟಿತ್ತು. ವಾರ್ಸಾ ಒಪ್ಪಂದವನ್ನು ನೀನು ಏಕಪಕ್ಷೀಯವಾಗಿ ಬರ್ಖಾಸ್ತು ಮಾಡಿದ್ದು ಮೂರನೆಯ ಜಗತ್ತಿನ ನಮ್ಮೆಲ್ಲರ ದೃಷ್ಟಿಯಲ್ಲಿ ಅಕ್ಷಮ್ಯ ಅಪರಾಧ. ಜರ್ಮನ್ ಐಕ್ಯತೆಗೆ ವಾರ್ಸಾ ಒಪ್ಪಂದದ ಮತ್ತು ನಾಟೋ ಕೂಟ ಎರಡೂ ಸಹ ಬರ್ಖಾಸ್ತಾಗಬೇಕು ಅಂತ ಷರತ್ತನ್ನು ಯಾಕೆ ನೀನು ಹಾಕಲಿಲ್ಲ? ಶೃಂಗಸಭೆಯಲ್ಲಿ ನೀನು ವಾರ್ಸಾ ಒಪ್ಪಂದದ ಬರ್ಖಾಸ್ತಿಗೆ ಪ್ರಸ್ತಾವವಿಟ್ಟಿದ್ದಿ ಎಂದು ಕೇಳಿ ಅಮೆರಿಕದ ವಿದೇಶಾಂಗ ಸಚಿವ ಬೇಕರ್ ಥರ ಥರ ನಡುಗುತ್ತಿದ್ದನಂತೆ. ನಾಟೋ ಬರ್ಖಾಸ್ತಿಗೆ ಖಂಡಿತ ನೀನು ಷರತ್ತು ಹಾಕುತ್ತಿ, ನಾಟೋ ಕತೆ ಮುಗಿಯಿತು ಅಂತ. ಹೀಗಾಗಲಿಲ್ಲ ಅಂದಾಗ ಅವನು ಹಿರಿ ಹಿರಿ ಹಿಗ್ಗಿದನಂತೆ.

ನಿನ್ನ ವಿರೋಧಿಗಳು ನಿರೀಕ್ಷಿಸಿದ್ದ, ಬಹುಶಃ ಒಪ್ಪಲು ತಯಾರಿದ್ದ ಷರತ್ತು ಹಾಕಲು ಆಗಲಿಲ್ಲ ಅಂದರೆ, ಎಂಥ ಬೋಳೆ ಸುಬ್ರಾಯ ಮಾರಾಯ ನೀನು!

ಸೋವಿಯೆಟ್ ಒಕ್ಕೂಟ ಪಶ್ಚಿಮ ಯುರೋಪು ಮತ್ತು ಅಮೆರಿಕಾಕ್ಕೆ ತೆರೆದುಕೊಳ್ಳುವುದು, ಅದೂ ಅವರ ಅನುಕೂಲಕ್ಕೆ ತಕ್ಕಂತೆ, ನಿನ್ನ ಏಕಮಾತ್ರ ಆದ್ಯತೆಯಿದ್ದಂತೆ ಕಾಣುತ್ತದೆ. 'ಯುರೋಪು ನಮ್ಮೆಲ್ಲರ ಮನೆ' ಅಂತ ಯಾವಾಗಲೂ ಬಡಕೊಳ್ಳುತ್ತಿದ್ದಿ. ಆದರೆ ಪೂರ್ವ ಯುರೋಪಿನ ಮತ್ತು ಮೂರನೆಯ ಜಗತ್ತಿನ ಜನರ ಆಶೋತ್ತರಗಳು ಆಶಯಗಳು ನಿನಗೆ ಆದ್ಯತೆಯಾಗಿರಲಿಲ್ಲ.

ವಾರ್ಸಾ ಒಪ್ಪಂದದ ಏಕಪಕ್ಷೀಯ ಬರ್ಖಾಸ್ತು ಮೂರನೆಯ ಜಗತ್ತಿನ ದೇಶಗಳ ಮರಣಶಾಸನವಾಯಿತು. ಅಮೆರಿಕ ಜಗತ್ತಿನ ಏಕಮಾತ್ರ ಸೂಪರ್ ಪವರ್ ಆಯಿತು. ಒಂದು ಕಡೆ ನವ-ಉದಾರವಾದಿ ಲೂಟಿಗೆ ಇಡೀ ಜಗತ್ತನ್ನು ತೆರೆಯುವುದು ಅದಕ್ಕೆ ಸುಲಭವಾಯಿತು. ಇನ್ನೊಂದು ಕಡೆ ಕೊಲ್ಲಿ ಯುದ್ಧ-1 ರಿಂದ ಆರಂಭವಾಗಿ ಯುಗೋಸ್ಲಾವಿಯ, ಇರಾಕ್, ಲಿಬ್ಯಾ, ಅಫ್ಘಾನಿಸ್ತಾನ, ಸಿರಿಯಾ ಗಳಲ್ಲಿ ಸ್ವತಂತ್ರ ನೀತಿಗಳ ರಾಷ್ಟ್ರವಾದಿ ಸರಕಾರಗಳನ್ನು ಉರುಳಿಸಲು ನೇರ ಮಿಲಿಟರಿ ಅತಿಕ್ರಮಣ ಮತ್ತು ವಿನಾಶಕಾರಿ ಯುದ್ಧಕ್ಕೆ ಕಾರಣವಾಯಿತು. ಉಕ್ರೇನಿ ಯುದ್ಧ ಇವುಗಳಲ್ಲಿ ಇತ್ತೀಚಿನದ್ದು. ಈ ಯುದ್ಧಗಳು ಮತ್ತು ಅದರಲ್ಲಿ ಕಷ್ಟ-ನಷ್ಟಗಳಿಗೂ ನೀನು ವಾರ್ಸಾ ಒಪ್ಪಂದದ ಏಕಪಕ್ಷೀಯ ಬರ್ಖಾಸ್ತು ಮೂಲಕ ಕಾರಣವಾದಿ. 'ರಕ್ತಪಾತವಿಲ್ಲದೆ ಶೀತಸಮರವನ್ನು' ನೀನು 'ಕೊನೆಗೊಳಿಸಲಿಲ್ಲ' ಶೀತಸಮರದಲ್ಲಿ ಅಮೆರಿಕ ಕೂಟಕ್ಕೆ ಸೋವಿಯೆಟ್ ಒಕ್ಕೂಟದ ಶರಣಾಗತಿ ಮಾಡಿಸಿದಿ, ಅಂತ ನಾನು. ಆಪಾದಿಸ್ತೇನೆ. ಏನಂತಿ?

ಪಾಶ್ಚಿಮಾತ್ಯ ಸಾಮ್ರಾಜ್ಯಶಾಹಿಗಳು ಸಮಾಜವಾದಿ ವಾರ್ಸಾ ಒಪ್ಪಂದ ಕೂಟವನ್ನು 'ಸೋವಿಯೆಟ್ ಸಾಮ್ರಾಜ್ಯ' ಅಂತ (ಕೆಡುಕಿನ ಸಾಮ್ರಾಜ್ಯ ಅಂತಲೂ) ಕರೆಯುತ್ತಿದ್ದರು. ಜಗತ್ತಿನ ಇತಿಹಾಸದಲ್ಲೇ ಯಾವುದೇ 'ಸಾಮ್ರಾಜ್ಯ' ಸ್ವಯಂ-ವಿಸರ್ಜನೆ ಮಾಡಿಕೊಂಡಿದ್ದು ಇದು ಮೊದಲ ಬಾರಿಗೆ ಇರಬೇಕು. ಇಂತಹ ಅಸಾಧ್ಯ ಕೆಲಸವನ್ನು ಮಾಡಿದ ನಿನ್ನನ್ನು ಮರೆಯುವುದು ಹೇಗೆ?

ಇವೆಲ್ಲ ಬರೆಯುತ್ತಿದ್ದಂತೆ ಕೆಲವು ಅನುಮಾನಗಳು ಬರುತ್ತಿವೆ. ಜನತೆಯ ಮುಂದೆ ಇಟ್ಟ ಉದಾತ್ತ ಉದ್ದೇಶಗಳನ್ನು ಪೂರೈಸುವತ್ತ ನಡೆಸಲು ನಾಯಕತ್ವದ ವೈಫಲ್ಯ ಮಾತ್ರವೇ ನಿನ್ನದು? ನಿನ್ನ ಉದ್ದೇಶಗಳು ಪ್ರಾಮಾಣಿಕವಾಗಿದ್ದವೇ? ಯಾಕೆಂದರೆ ಈ ಮೇಲೆ ಹೇಳಿದ ಸ್ವಯಂ-ವಿದಿತ ಪ್ರಮಾದಗಳ ಕುರಿತು ನೀನು ಯಾವುದೇ ಸ್ವಯಂ_ಟೀಕೆ ಮಾಡಿಕೊಂಡಿಲ್ಲ, ಪಶ್ಚಾತ್ತಾಪ ಪಟ್ಟಿಲ್ಲ.

ನಿನ್ನನ್ನು ಯಾವುದಕ್ಕೆ ನೆನೆಸಲಿ? ಯಾವ ನಿನ್ನ ಪ್ರಮಾದಗಳನ್ನು ಮರೆಯಲಿ ? ನನಗೆ ಗೊಂದಲವಾಗುತ್ತಿದೆ.

ಬಹುಶಃ ಆ ಜಾಹೀರಾತಿನಲ್ಲಿ ತೋರಿಸಿದಂತೆ ರಶ್ಯವನ್ನು 'ಪಿಜ್ಜಾ ಹಟ್' ಗೆ (ಮಾಕ್ ಡೊನಾಲ್ಡ್, ಸ್ಟಾರ್‌ಬಕ್ಸ್ ಗಳಿಗೆ) ತೆರೆದಿದ್ದು ಮಾತ್ರ ನಿನ್ನ 'ಸಾಧನೆ' ಏನೋ ಎಂದು ಅನುಮಾನ ಬರುತ್ತಿದೆ.

ಆದರೆ ನಿನ್ನ ಅಭಿಮಾನಿಯಾಗಿದ್ದ ನನಗೆ ಇದನ್ನು ಒಪ್ಪಲು ಕಷ್ಟವಾಗುತ್ತಿದೆ. ಇದಕ್ಕೆ ಉತ್ತರ ಕೊಟ್ಟು ಅಲ್ಲ ಅಂತ ಸಾಧಿಸು. ಪ್ಲೀಸ್!

ಹೋಗಿ ಬಾ ಗುರುಬಸ್ಯಾ!

ಇತಿ

ನಿನ್ನ ಮಾಜಿ ಅಭಿಮಾನಿ

ಬಳ್ಳಾರಿ: ಗೋಪುರದ ರಾಜಕಾರಣ

ಪುಟ 10 ರಿಂದ

ಸಮಸ್ಯೆ ಇರುವಂತಹ ಬಳ್ಳಾರಿ ನಗರವನ್ನು ಕೇವಲ ಗಡಿಯ ಗಡಿಯಾರ ಸ್ತಂಭವನ್ನು ನಿರ್ಮಾಣ ಮಾಡುವ ಮುಖಾಂತರ ಬಳ್ಳಾರಿಯನ್ನು ಸುಂದರೀಕರಣ ಮಾಡುತ್ತೇವೆ ಎಂಬ ಹೇಳಿಕೆಗಳು ಇದನ್ನು ಮುಂದಿನ ತಮ್ಮ ರಾಜಕೀಯ ಬೆಳವಣಿಗೆಗೆ ಬಳಸಿಕೊಳ್ಳುವ, ಹಣ ಮಾಡುವ ಹುನ್ನಾರವಾಗಿದೆ. ಸರ್ಕಾರದ ಹಣವನ್ನು ಈ ರೀತಿ ಖರ್ಚು ಮಾಡುವುದಕ್ಕಿಂತ ಬಡ ಜನರು ವಾಸ ಮಾಡುವುದಕ್ಕೆ ಮತ್ತು ಬಳ್ಳಾರಿ ನಗರದಲ್ಲಿ ಒಳ ಚರಂಡಿ ಮುಂತಾದ ವ್ಯವಸ್ಥೆಗಳನ್ನು ಸರಿಪಡಿಸಲಿಕ್ಕೆ ಮುಂದಾದರೆ ಜನತೆಗೆ ಹೆಚ್ಚು ಅನುಕೂಲವಾಗಲಿದೆ ಎಂದು ಸಚಿವರ ಗಮನಕ್ಕೆ ಸಿಪಿಎಂ ಪಕ್ಷ ತಂದಿದೆ.

ಅಧಿಕಾರದಲ್ಲಿರುವ ಕಾಂಗ್ರೆಸ್ಸಿನ ನಗರಪಾಲಿಕೆ ಸದಸ್ಯರ ನಡೆಯೂ ಅನುಮಾನಕ್ಕೆ ಎಡೆ ಮಾಡಿದೆ. ಮಹಾ ನಗರ ಪಾಲಿಕೆ ಪರವಾನಿಗೆ ಇಲ್ಲದೆ ತೆರವು ಮಾಡಲಾಗಿದೆ ಎಂದು ಹೋರಾಟ ಮಾಡಿದ್ದಾರೆ. ಈ ಯೋಜನೆಗೆ ಮಹಾನಗರ ಪಾಲಿಕೆ ಮೇಯರ್ ಅವರು ಒಪ್ಪಿಗೆ ನೀಡಿದ್ದಾರೆಂದು ಮಹಾನಗರ ಪಾಲಿಕೆಯ ಅಧಿಕಾರಿಗಳು ಹೇಳಿಕೆ ನೀಡಿದ್ದಾರೆ.

ಬಿಜೆಪಿ ಮತ್ತು ಕಾಂಗ್ರೆಸ್ ಪಕ್ಷದವರು ತಮ್ಮ ರಾಜಕೀಯ ಲಾಭಕ್ಕಾಗಿ ಜನರಿಗೆ ತಪ್ಪು ಮಾಹಿತಿಯನ್ನು ನೀಡುತ್ತಿದ್ದಾರೆ. ಹಾಗಾಗಿ ಹಾಲಿ, ಮಾಜಿ ಜನಪ್ರತಿನಿಧಿಗಳು ಹಾಗೂ ಸರಕಾರದ ಜನವಿರೋಧಿ ನಿಲುವುಗಳನ್ನು ಸಿಪಿಎಂ ಪಕ್ಷವು ಪ್ರತಿಭಟಿಸುತ್ತದೆ. ತಮ್ಮ ಪಾಳೇಗಾರಿ ಪ್ರವೃತ್ತಿಗೆ ಐತಿಹಾಸಿಕ ಗೋಪುರವನ್ನು ನಾಶ ಮಾಡಿ ಜನರ ತೆರಿಗೆಯ ಕೋಟ್ಯಾಂತರ ರೂಪಾಯಿಗಳನ್ನು ಪೋಲು ಮಾಡಿ ಅದರಲ್ಲೂ ಲಾಭ ಹೊಡೆಯಲು ಬಯಸುತ್ತಿದ್ದಾರೆ.

ಗಡಿಗಿ ಚನ್ನಪ್ಪ ನವರ ನೆನಪು ಕೊಡುಗೆ ಉಳಿಸುವ, ಬಳ್ಳಾರಿ ನಗರ ಸುಂದರೀಕರಣ ಮಾಡಲು ನಾವು ಬೆಂಬಲ ನೀಡುತ್ತೇವೆ. ಆದರೆ ಸುಂದರೀಕರಣ ಎನ್ನುವುದು ಕೇವಲ ಗಡಿಯಾರ ಕಂಬ ಒಂದೇ ಅಲ್ಲ. ನಗರದಲ್ಲಿ ಇರುವ ನಾಗರೀಕ ಪ್ರಶ್ನೆಗಳಿಗೆ ಅಭಿವೃದ್ಧಿ ಕೆಲಸ ಮಾಡಲು ಸರ್ಕಾರ ದ ಹಣ ವನ್ನು ವೆಚ್ಚ ಮಾಡಬೇಕು. ಜನ ಸಾಮಾನ್ಯರ ತೆರಿಗೆಯ ಹಣವನ್ನು ಜನಸಾಮಾನ್ಯರ ಅಭಿವೃದ್ಧಿ ಗೆ ವೆಚ್ಚ ಮಾಡಲು ಕ್ರಮ ವಹಿಸಬೇಕು.

NEW No. MAG(3)/NPP/205/2021-2022
JANASHAKTHI KANNADA VARA PATRIKE SEPTEMBER 5-11, 2022 Price: Rs. 10/- Date of Publication: 2 SEPTEMBER 2022 RNI No. KARKAN /2006/17926 Posted on 05-09-2022
"REGISTERD" Postal Reg. No. RNP/KA/BGS/2078/2019-21 Posted at BG PSO, BG - 560026 Licensed to Post without prepayment License No. PMG/BG/WPP-283/2019-21 **Posted at Periodical Rate -** Rs. 2





ನಿನ್ನ ಮರೆಯಲಿ ಹ್ಯಾಂಗ.. ...ಗೋರ್ಬಚೇವ?!

ಒಬ್ಬ ಮಾಜಿ ಅಭಿಮಾನಿಯ ಪತ್ರ

ವಸಂತರಾಜ ಎನ್.ಕೆ.

ಆತ್ಮೀಯ ಗೋರ್ಬಚೇವ್,

ಈ ಪತ್ರವನ್ನು ನೀನು ಇರುವಾಗಲೇ ಬರೆಯಬೇಕಿತ್ತು. ಆದರೆ ಈಗಲಾದರೂ ಬರೆಯದೆ ವಿಧಿಯಿಲ್ಲ. ನೀನು ಇದ್ದಿ ಎಂದು ಎಲ್ಲರಂತೆ ನನಗೂ ನಿನ್ನ ನಿಧನದ ಸುದ್ದಿ ಬಂದಾಗಲೇ ಗೊತ್ತಾಗಿದ್ದು. ಒಂದು ಕಾಲದಲ್ಲಿ ನಿನ್ನ 'ಅಭಿಮಾನಿ'ಯಾಗಿದ್ದ ನನಗೆ ಈಗಲಾದರೂ ವಿಶ್ವದಲ್ಲಿ ನಿನ್ನ ಚಾರಿತ್ರಿಕ ಪಾತ್ರ ನೆನೆಸಿಕೊಂಡು, ಕೆಲವು ಪ್ರಶ್ನೆಗಳನ್ನು ಕೇಳಿ ಪತ್ರ ಬರೆಯಬೇಕೇನಿಸಿತು.

ನೀನು ಇತ್ತೀಚೆಗೆ ಸತ್ತಾಗ ಪಶ್ಚಿಮದ ನಾಯಕರು, ಮಾಧ್ಯಮಗಳು ನಿನ್ನನ್ನು ಹೊಗಳಿ ಅಟ್ಟಕ್ಕೇರಿಸಿದರು. ಶೀತಸಮರವನ್ನು ರಕ್ತಪಾತವಿಲ್ಲದೆ 'ಶಾಂತಿಯುತವಾಗಿ' ಕೊನೆಗೊಳಿಸಿದ್ದಕ್ಕೆ, ಸೋವಿಯೆಟ್ ಒಕ್ಕೂಟ ಮತ್ತು ಪೂರ್ವ ಯುರೋಪಿನ ಜನತೆಗೆ 'ಪ್ರಜಾಪ್ರಭುತ್ವ', 'ಸ್ವಾತಂತ್ರ್ಯ' ಕೊಟ್ಟಿದ್ದಕ್ಕೆ ಕೊಂಡಾಡಿದರು.

ಆದರೆ ನೀನು ಅಧ್ಯಕ್ಷನಾಗಿದ್ದ ಸೋವಿಯೆಟ್ ಒಕ್ಕೂಟದ ರಶ್ಯ ಮತ್ತಿತರ ಗಣರಾಜ್ಯಗಳಲ್ಲಾಗಲಿ, ಪೂರ್ವ ಯುರೋಪಿನ ದೇಶಗಳಲ್ಲಾಗಲಿ ಜನರಾಗಲಿ, ಸರಕಾರಗಳಾಗಲಿ (ಅಧಿಕೃತ ಶಿಷ್ಟಾಚಾರದ ಶೋಕ ಸಂದೇಶ ಬಿಟ್ಟರೆ) ಕಂಬನಿ ಸುರಿಸಲಿಲ್ಲ. ನಮಗೆ 'ಸ್ವಾತಂತ್ರ್ಯ' ಕೊಟ್ಟ ನಾಯಕ ಎಂದು ಕೊಂಡಾಡಲಿಲ್ಲ. ಮಾತ್ರವಲ್ಲ ಈತನಿಂದ ದೇಶ ಅಧೋಗತಿಗೆ ಹೊಯಿತು, ನಮ್ಮ ಜೀವನ ದುರ್ಭರವಾಯಿತು ಎಂದು ತಮ್ಮ ಆಕ್ರೋಶವನ್ನು ಸಾಮಾಜಿಕ ಮಾಧ್ಯಮದಲ್ಲೂ ಇತರೆಡೆಯಲ್ಲೂ ಜನ ಹೊರಹಾಕಿದರು ಎಂದು ವರದಿಯಾಗಿದೆ.

1996ರಲ್ಲಿ ನೀನು ರಶ್ಯನ್ ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಿದಾಗ ನಿನಗೆ ಕೇವಲ 0.5% ಮತ ಬಂತಂತೆ. ನಿನ್ನ ಆಡಳಿತದಲ್ಲಿ ಸೋವಿಯೆಟ್ ಒಕ್ಕೂಟ ಎಲ್ಲ ರೀತಿಯಲ್ಲೂ ಹಿನ್ನಡೆ ಅನುಭವಿಸಿತು ಎಂದು ಕಳೆದ ವರ್ಷದ ಸಮೀಕ್ಷೆಯೊಂದರಲ್ಲಿ ಶೇ.70 ಜನ ಹೇಳಿದರಂತೆ. ಇನ್ನೊಂದು ಸಮೀಕ್ಷೆಯಲ್ಲಿ ರಶ್ಯದಲ್ಲಿ ಕಳೆದ ಶತಮಾನದ ಅತ್ಯಂತ ಕಡಿಮೆ ಜನಪ್ರಿಯತೆ ಪಡೆದ ನಾಯಕ ನೀನು ಎಂದು ಜನ ಗುರುತಿಸಿದ್ದಾರಂತೆ. ಸಮಾಜವಾದಿ ಮತ್ತು ಮೂರನೇಯ ಜಗತ್ತಿನ ದೇಶಗಳಲ್ಲಿ ಸಹ ಹೆಚ್ಚು ನಕಾರಾತ್ಮಕ ಪ್ರತಿಕ್ರಿಯೆಯೇ ವ್ಯಕ್ತವಾಯಿತಂತೆ.

ಇದು ಯಾಕೆ ಹೀಗೆ, ಗುರುಬಸ್ಯಾ?!

ಹೌದು ನೀನು ಜಾಗತಿಕವಾಗಿ 1980ರ ದಶಕದಲ್ಲಿ ಭಾರೀ ಸುದ್ದಿಯಲ್ಲಿದ್ದಾಗ, ಕರ್ನಾಟಕದಲ್ಲಿ ನಿನ್ನನ್ನು ಪ್ರೀತಿಯಿಂದ (ಕೆಲವರು ವ್ಯಂಗ್ಯವಾಗಿಯೂ!) ನಿನ್ನ ಹೆಸರನ್ನು ಕನ್ನಡೀಕರಿಸಿ ಹೀಗೆ ಕರೆಯುತ್ತಿದ್ದರು. ಗೊತ್ತಾ?


ಇದೇ ಸಮಯದಲ್ಲಿ 1997ರ 'ಪಿಜ್ಜಾ ಹಟ್' ತಯಾರಿಸಿದ ಜಾಹೀರಾತು ಒಂದು ಎಲ್ಲ ಮಾಧ್ಯಮಗಳಲ್ಲೂ ವೈರಲ್ ಆಯಿತು. ಈ ಜಾಹೀರಾತು ವಿಡಿಯೊದಲ್ಲಿ ಮಾಸ್ಕೋದ ಕೆಂಪು ಚೌಕದ ಬಳಿ ಇರುವ 'ಪಿಜ್ಜಾ ಹಟ್'ಗೆ ನೀನು ಮೊಮ್ಮಗಳ ಜತೆ ಹೋಗುತ್ತಿ. ನಿನ್ನನ್ನು ನೋಡಿ ಅಲ್ಲಿಯ ಒಂದು ಟೇಬಲ್ ನಲ್ಲಿ ಕುಳಿತು ಊಟ ಮಾಡುತ್ತಿರುವವರಲ್ಲಿ ನಿನ್ನ ಪಾತ್ರದ ಬಗ್ಗೆ ಚರ್ಚೆ ಆರಂಭವಾಗುತ್ತದೆ. ಕೆಲವರು ನಿನ್ನಿಂದ 'ಅವಕಾಶ' ಮತ್ತು 'ಸ್ವಾತಂತ್ರ್ಯ' ಸಿಕ್ಕಿತು ಎಂದರು. ಕೆಲವರು ನೀನು ಕೊಟ್ಟಿದ್ದು 'ಆರ್ಥಿಕ ಗೊಂದಲ' ಮತ್ತು 'ರಾಜಕೀಯ ಅಸ್ಥಿರತೆ' ಮಾತ್ರ ಎಂದರು. ಆಗ ಒಬ್ಬಾಕೆ ನೀನು "ಅವರೇ ನಮಗೆ ಈ ಪಿಜ್ಜಾ ಹಟ್ ಕೊಟ್ಟಿದ್ದು ಅಲ್ವಾ?" ಎನ್ನುತ್ತಾಳೆ. ಆಗ ಎಲ್ಲರೂ ಎದ್ದು 'ಹೈಲ್ ಗೋರ್ಬಚೆವ್' ಅನ್ನುತ್ತಾರೆ.

ಈ ವಿಡಿಯೊವನ್ನು ನಿನ್ನನ್ನು ಕೊಂಡಾಡುವವರೂ, ಕಟುಟೀಕೆ ಮಾಡುವವರೂ ಹಂಚಿಕೊಂಡರು. ಏನಿದರ ಅರ್ಥ? ಇದಕ್ಕೆ ಎಲ್ಲರ ಸಹಮತಿ ಇದೆಯಂತಲಾ? ನೀನೂ ಈ ಜಾಹೀರಾತಿನಲ್ಲಿ ಭಾಗವಹಿಸಿದಿ. ಅಂದರೆ ನೀನೂ ಇದನ್ನು ಒಪ್ಪಿದ್ದಿ ಅಂತಲಾ?

https://www.youtube.com/watch?v=fgm14D1jHUw

ಎಂಥ ಮಾರಾಯ ಇದು! ನಿನ್ನ ಬಗ್ಗೆ ನನಗೂ ಟೀಕೆ ಇದೆ. ಆದರೆ ರಶ್ಯನರಿಗೆ ನಿನ್ನ ಕೊಡುಗೆ 'ಪಿಜ್ಜಾ ಹಟ್' ಮಾತ್ರ ಅನ್ನುವುದು ನಿನಗೆ ಮಾಡುವ ದೊಡ್ಡ ಅವಮಾನ. ನಿನ್ನನ್ನು ಹೀಗೆ ಕಂಡೆಮ್ ಮಾಡುವುದನ್ನು ನಾನಂತೂ ಒಪ್ಪುವುದಿಲ್ಲ.

ಆಗ ಅಮೆರಿಕ–ಸೋವಿಯೆಟ್ ಪೈಪೋಟಿಯು ಅಣ್ವಸ್ತ್ರ ಯುದ್ಧದಲ್ಲಿ ಮತ್ತು ಮನುಕುಲದ ನಾಶದಲ್ಲಿ ಕೊನೆಗೊಳ್ಳುವ ಭೀತಿ ನಿವಾರಿಸಿದ್ದರಲ್ಲಿ ನಿನ್ನ ಪಾತ್ರ ಮರೆಯಲು ಸಾಧ್ಯವೇ? ವಿಶ್ವಶಾಂತಿಗೆ ನೀನು ಹಲವು ಹೊಸ ದಿಟ್ಟ ಪ್ರಸ್ತಾವಗಳನ್ನು ಪುಂಖಾನುಪುಂಖವಾಗಿ, ಅಮೇರಿಕ ಮತ್ತು ಪಶ್ಚಿಮ ಯುರೋಪಿನ ದೇಶಗಳ ಮುಂದಿಟ್ಟೆ. ಹಲವು ಸೋವಿಯೆತ್, ಶಸ್ತ್ರಾಸ್ತ್ರ ಕಡಿತಗಳು, ಮೊದಲ ಅಣ್ವಸ್ತ್ರ ದಾಳಿ ಸನ್ಯಾಸ, ಹೊಸ ರೀತಿಯ ಶಸ್ತ್ರಾಸ್ತ್ರ ಬೆಳವಣಿಗೆ ಸನ್ಯಾಸ – ಮುಂತಾದ ಸ್ವಯಂ–ಸ್ಫೂರ್ತ ನಿರ್ಧಾರಗಳನ್ನು ಘೋಷಿಸಿದಿ. ಸಾಮೂಹಿಕ ನಾಶದ ಮಾರಕಾಸ್ತ್ರಗಳನ್ನು ತೀವ್ರವಾಗಿ ಕಡಿತ ಮಾಡಿ 2000ರೊಳಗೆ ಪೂರ್ಣ ನಾಶ ಮಾಡುವ ನಿನ್ನ ಪ್ರಸ್ತಾವಗಳು ಅದಕ್ಕೆ ಪಶ್ಚಿಮದ ದೇಶಗಳು ಸೇರಿದಂತೆ ಜಗತ್ತಿನಲ್ಲೂ ಜನತೆಯ ಅತ್ಯುತ್ಸಾಹ–ಭರಿತ ಸಂಭ್ರಮದ ಪ್ರತಿಕ್ರಿಯೆ ಈ ಕುರಿತು ಮನಸ್ಸಿಲ್ಲದ ಅಮೇರಿಕನ್ ಸರ್ಕಾರದ ಮೇಲೆ ಭಾರಿ ಒತ್ತಡ ಹೇರಿತು. ಇದು ಸೋವಿಯೆತ್ ಶಾಂತಿ ದಾಳಿ (Peace Offensive) ಎಂದು ಹೆಸರಾಯಿತು. ವಿಶ್ವ ಶಾಂತಿಗೆ ಸೋವಿಯೆತ್ ಒಕ್ಕೂಟ ಪೂರ್ಣವಾಗಿ ಬದ್ಧವಾಗಿದೆ. ಇದು ಸೋವಿಯೆತ್ ಒಕ್ಕೂಟಕ್ಕೂ ಇಡೀ ವಿಶ್ವಕ್ಕೂ ಒಳ್ಳೆಯದು. ಶಸ್ತ್ರಾಸ್ತ್ರಗಳನ್ನು ತೀವ್ರವಾಗಿ ಕಡಿತ ಮಾಡಿ ನಾಶ ಮಾಡುವ ಮತ್ತು ಆ ಮೂಲಕ ಸಿಗುವ ಅಪಾರ ಸಂಪನ್ಮೂಲಗಳನ್ನು ಜನರ ಜೀವನಮಟ್ಟ ಉತ್ತಮಪಡಿಸಲು ತೀವ್ರ ಬೆಳವಣಿಗೆಯ ಹೂಡಿಕೆಗೆ ಬಳಸುವುದು, ನಿನ್ನ 'ಶಾಂತಿ ದಾಳಿ'ಯ ಉದ್ದೇಶವಾಗಿತ್ತು. ಅಲ್ಲದೆ ಸೋವಿಯೆತ್ ಒಕ್ಕೂಟದ ರಕ್ಷಣೆಗೆ ಹೆಚ್ಚೆಚ್ಚು ಶಸ್ತ್ರಾಸ್ತ್ರಗಳ ಉತ್ಪಾದನೆಯ ಬದಲು ಶಾಂತಿ ಬಗ್ಗೆ ತೀವ್ರ ರಾಜಕೀಯ ಪ್ರಚಾರದ, ಸೋವಿಯೆತ್ ಮತ್ತು ವಿಶ್ವದ ಜನತೆಯ ರಾಜಕೀಯ ಪ್ರಜ್ಞೆ ಎತ್ತರಿಸುವ ಹೊಸ ವಿಧಾನವನ್ನು ನೀನು ಅನುಸರಿಸಿದ್ದು ಕಡಿಮೆ ಸಾಧನೆಯಲ್ಲ.



ಇದು ABM, INF, START 1 ಎಂಬ ಮೂರು ಪ್ರಮುಖ ಶಸ್ತ್ರಾಸ್ತ್ರ ಕಡಿತ ಒಪ್ಪಂದಗಳಿಗೆ ಕಾರಣವಾಯಿತು. ಮೊದಲ ಹಂತಗಳಲ್ಲಿ ಇದು ಸಾಕಷ್ಟು ಯಶಸ್ವಿಯೂ ಆಯಿತು. ಆಗಿದ್ದ ಅಣ್ವಸ್ತ್ರಗಳ ಐದನೇ ಒಂದು ಭಾಗ ಮತ್ತು ದೂರಗಾಮಿ ಕ್ಷಿಪಣಿಗಳಲ್ಲೂ ಕಡಿತವಾಯಿತು. ಎರಡನೇ ಮಹಾಯುದ್ಧದ ಭೀಕರ ಅನುಭವ ಇದ್ದ ಸೋವಿಯೆತ್ ಜನತೆ ಸಹ 'ಶಾಂತಿದಾಳಿ' ಯನ್ನು ಉತ್ಸಾಹದಿಂದ ಸ್ವಾಗತಿಸಿತು. ಶಾಂತಿ ಮತ್ತು ಬೆಳವಣಿಗೆಯ ಈ ಹೊಸ ಪ್ರಯೋಗವನ್ನು ಜಗತ್ತಿನ ಜನ ಅತಿ ಕುತೂಹಲದಿಂದ ಗಮನಿಸುತ್ತಿದ್ದರು. ಆ ನಂತರ ಈ ಎರಡು ಒಪ್ಪಂದಗಳಿಂದ ಅಮೆರಿಕ ಹಿಂದೆ ಸರಿಯಿತು. ಒಂದು ಒಪ್ಪಂದದ ಅವಧಿ ಕೊನೆಗೊಂಡಿದೆ.

ಆದರೂ ನಿನ್ನ 'ಶಾಂತಿ ದಾಳಿ' ಮತ್ತು ಶಸ್ತ್ರಾಸ್ತ್ರ ಕಡಿತ ಒಪ್ಪಂದಗಳಲ್ಲಿ ನಿನ್ನ ವೈಯಕ್ತಿಕ ಪಾತ್ರ ಯಾವತ್ತೂ ನೆನೆಯಬೇಕಾದ್ದು

ಗ್ಲಾಸ್‌ನೋಸ್ತ್ (Openenes – ಮುಕ್ತತೆ) ಮತ್ತು ಪೆರೆಸ್ತ್ರೊಯಿಕ (Restructuring – ಪುನರ್ರಚನೆ) ಎಂಬ ಎರಡು ಶಬ್ದಗಳ ಮೂಲಕ ನೀನು ಸಾರಿದ ಸಂದೇಶ ಸಹ ಬೇರೇ ಅರ್ಥದಲ್ಲಿ ಮರೆಯಲಾಗದ್ದು. ಈ ಎರಡು ಶಬ್ದಗಳಲ್ಲಿ ಸೋವಿಯೆಟ್ ಒಕ್ಕೂಟದ ಸಮಾಜವಾದದ ಸಮಗ್ರ ಸುಧಾರಣೆಗಳ ಆಶಯ ಮತ್ತು ಸಾರವನ್ನು ನೀನು ಸಂಕ್ಷಿಪ್ತವಾಗಿ ಪರಿಣಾಮಕಾರಿಯಾಗಿ ಸಾರಿದಿ. ಸೋವಿಯೆತ್ ಕಮ್ಯುನಿಸ್ಟ್ ಪಕ್ಷದ 27ನೇ ಮಹಾಧಿವೇಶನದಲ್ಲಿ ನೀನು ಮುಂದಿಟ್ಟ – ಸಮಗ್ರ ಸುಧಾರಣೆಗಳು, ಬೆಳವಣಿಗೆಯ ವೇಗವರ್ಧನೆ ಮತ್ತು ಪ್ರಜಾಪ್ರಭುತ್ವೀಕರಣದ – ಪ್ರಸ್ತಾವಗಳನ್ನು ಹೀಗೆ ವ್ಯಕ್ತಪಡಿಸಿದ್ದಿ. ಇದಕ್ಕೆ ಸೋವಿಯೆತ್ ಒಕ್ಕೂಟದಲ್ಲಿ, ಇಡೀ ಜಗತ್ತಿನಲ್ಲೂ ಸಂಭ್ರಮದ ಸ್ವಾಗತ ಸಿಕ್ಕಿತು. ಆ ಬಗ್ಗೆ ಪ್ರಜ್ಞೆ, ಆಸಕ್ತಿ ಮತ್ತು ಉತ್ಸಾಹ ತುಂಬುವುದರಲ್ಲಿ ಸಾಕಷ್ಟು ಯಶಸ್ವಿಯಾದಿ. "ಈ ಮಹಾನ್ ಕ್ರಾಂತಿಯ 70ನೇ ವಾರ್ಷಿಕೋತ್ಸವ ಒಂದು ಹೆಮ್ಮೆಯ ಕ್ಷಣ .. ಸಮಾಜವಾದಕ್ಕಾಗಿ ದುಡಿದ ಲಕ್ಷಾಂತರ ಜನರನ್ನು ನೆನೆಸಿಕೊಳ್ಳುವ ಒಂದು ನೆನಪಿನ ಕ್ಷಣ... ಸಮಾಜವಾದದ ವಿಜಯಗಳು, ಸೋಲುಗಳ ಬಗ್ಗೆ ಒಂದು ಚಿಂತನೆಯ ಕ್ಷಣ. ವಿಶ್ವದ ಭವಿಷ್ಯದ ಬಗ್ಗೆ ಒಂದು ಮುಂಗಾಣ್ಕೆಯ ಕ್ಷಣ.." ಎಂದು ನೀನು ಅಕ್ಟೋಬರ್ ಕ್ರಾಂತಿಯ 70ನೇ ವಾರ್ಷಿಕೋತ್ಸವದಲ್ಲಿ ಕೊಟ್ಟ ಸಮಾಜವಾದಿ ಪುನರ್ನವೀಕರಣದ ಚೈತನ್ಯಶೀಲ ಸಂದೇಶ ನನ್ನಲ್ಲಿ ಮಾತ್ರವಲ್ಲ, ಸಮಸಮಾಜದ ಆಶಯಗಳನ್ನು ಹೊತ್ತಿದ್ದ ಕೋಟ್ಯಾಂತರ ಜಗತ್ತಿನ ಜನರಲ್ಲೂ ಪುಳಕ ತಂದಿತ್ತು.

ಆದರೆ ಗ್ಲಾಸ್‌ನೋಸ್ತ್ ಮತ್ತು ಪೆರೆಸ್ತ್ರೊಯಿಕ ಆಶಯಗಳ ಜಾರಿಯಲ್ಲಿ ನೀನು ಪೂರ್ಣವಾಗಿ ಎಡವಿದಿ ಮಾರಾಯ!

ಸೋವಿಯೆಟ್ ಕಮ್ಯುನಿಸ್ಟ್ ಪಕ್ಷದ 27ನೆಯ ಮಹಾಧಿವೇಶನದ ನಿರ್ದೇಶನಗಳು ಸ್ಪಷ್ಟವಾಗಿದ್ದವು, ಸರಿಯಾಗಿದ್ದವು. ಅದರ ಸರಿಯಾದ ಜಾರಿ ಮಾಡಿದ್ದರೆ ಪ್ರಜಾಪ್ರಭುತ್ವ, ಆರ್ಥಿಕತೆಯ ಸುಧಾರಣೆಗಳು ಸಮಾಜವಾದಿ ವ್ಯವಸ್ಥೆಯ ಪುನರ್ನವೀಕರಣ ಮಾಡುತ್ತಿದ್ದವು. ಆದರೆ ಸ್ವಲ್ಪ ಆರಂಭಿಕ ಪ್ರಗತಿಯ ನಂತರ ಸುಧಾರಣೆಗಳು ಸಂಪೂರ್ಣವಾಗಿ ಹಾದಿ ತಪ್ಪಿದವು. ಆರ್ಥಿಕ ಸುಧಾರಣೆಗಳು ಹಾದಿ ತಪ್ಪಿ ವಿಪರೀತ ಬೆಲೆಏರಿಕೆ, ಅಗತ್ಯ ವಸ್ತುಗಳ ಅಭಾವ, ಕೃಷಿ–ಕೈಗಾರಿಕಾ ಉತ್ಪಾದನೆಯ ಕುಂಠಿತಗೊಳ್ಳುವುದರಲ್ಲಿ ಅವಸಾನ ಗೊಂಡಿತು. ಸರಕಾರದ ನೀತಿಗಳಲ್ಲಿ ಕ್ರಮಗಳಲ್ಲಿ ಪೂರ್ಣ ಅರಾಜಕತೆ ತಾಂಡವವಾಡಿತು.

ಆದರೆ ನಿನ್ನ ಮೇಲಿನ ಅತ್ಯಂತ ಗುರುತರವಾದ ಆಪಾದನೆ ಪೂರ್ವ ಯುರೋಪಿನ ಸಮಾಜವಾದಿ ವ್ಯವಸ್ಥೆ, ಸೋವಿಯೆಟ್ ಒಕ್ಕೂಟದ ಮತ್ತು ಸೋವಿಯೆಟ್ ಕಮ್ಯುನಿಸ್ಟ್ ಪಕ್ಷದ ವಿಸರ್ಜನೆಗೆ ನೀನು ಪ್ರಮುಖ ಕಾರಣ ಎಂಬುದು. ಮಾತ್ರವಲ್ಲ ಈ ವಿಸರ್ಜನೆಗಳ ನಂತರ ಬಂದ ಸರಕಾರಗಳ ಯೆಲ್ಸಿನ್ ಮುಂತಾದ ನಾಯಕರು ನೀನು ನಾಯಕತ್ವಕ್ಕೆ ತಂದ ನಿನ್ನ ಶಿಷ್ಯರೇ. ಸೋವಿಯೆಟ್ ಒಕ್ಕೂಟದ ಮತ್ತು ಪೂರ್ವ ಯುರೋಪಿನ

ಪುಟ 15 ಕ್ಕೆ

JANASHAKTHI KANNADA VARA PATRIKE: Printed, Published by **U. BASAVARAJ**, No. 37/a, 8th Cross, EMS Bhavan, Mahalakshmi Layout, Bangalore 560086, Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027 Editor : **NITYANANDASWAMI**